ಸಂಪುಟ : 13 Volume ಸಂಚಿಕೆ : 284 Issue ಪುಟಗಳು : 08 Pages ಮಂಗಳವಾರ 30 ಡಿಸೆಂಬರ್ 2025 ₹6 PRGINO. 120927(RNINO:KARKAN/2011/48371) BDR/054/2026-2027 www.mallammanudi.in mallammanudi@gmail.com 9448604450

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

ಮಾತುಗಳುಪರಸ್ಪರಬೇರ್ಪಡಿಸಲು ಇರುವುದಲ್ಲ,ಪರಸ್ಪರಸೇರಿಸಲು ಇರುವುದಾಗಿದೆ.
ಮಹಾತ್ಮ ಗಾಂಧೀಜಿ .

# ಮಲ್ಲಮ್ಮ ನುಡಿ

ಕನ್ನಡ ಕಿರಣ
ಸಂಪಾದಕರು: ರಮೇಶ ರೆಡ್ಡಿ
Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ

3 ಸಿಎಂ ಆಗಮನ ಅರಿಬಿರಿ ವೇಗದ ಕಳಪೆ
4 ಗಣಿಗಾರಿಕೆಗಾಗಿ ಅರಣ್ಯ ಪ್ರದೇಶದಲ್ಲಿ ದಾರಿ
8 ಕಾಂಗ್ರೆಸ್ ಕಾರ್ಯಕರ್ತರು ವೈ ಮನಸ್ಸು



ಜಗದ್ಗುರು ಪೂಜ್ಯ ಶ್ರೀ ಶಿವ ಯೋಗೀಶ್ವರ ಮಹಾಸ್ವಾಮಿಗಳು. ಜಗದ್ಗುರು ನಿರಂಜನ ಸಂಸ್ಥಾನ ಮಠ. ಭಾತಂಬ್ರಾ. ತಾಲೂಕಾ ಭಾಲ್ಕಿ ಜಿಲ್ಲಾ ಬೀದರ್. ಪೂಜ್ಯರು ಇಂದು ಮಲ್ಲಮ್ಮ ನುಡಿ ಕನ್ನಡ ದಿನಪತ್ರಿಕೆಯನ್ನು ಬಿಡುಗಡೆಗೊಳಿಸಿ, ಉತ್ಕೃಷ್ಟವಾಗಿ ಬೆಳೆಯಲಿ. ಬಡವರ ದುಃಖಿತರ ಧ್ವನಿಯಾಗಲಿ ಎಂದು ಹಾರೈಸಿದರು. ತಾಲೂಕ ವರದಿಗಾರರು ಉಪಸ್ಥಿತರಿದ್ದರು.

# ಕನ್ನಡವೇ ಕುಲದೈವ

## ಕನ್ನಡ ಭಾಷೆ, ನೆಲ, ಜಲ, ಗಡಿ, ಕನ್ನಡಿಗರಿಗೆ ಉದ್ಯೋಗ ವಿಚಾರದಲ್ಲಿ ರಾಜಿ ಇಲ್ಲ:ಸಿಎಂ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು:

ಕರ್ನಾಟಕದಲ್ಲಿ ಕನ್ನಡದ ವಾತಾವರಣವನ್ನು ನಿರ್ಮಾಣ ಮಾಡುವುದು ನಮ್ಮೆಲ್ಲರ ಜವಾಬ್ದಾರಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.ಅವರು ಕನ್ನಡ ಚಳವಳಿಗಾರರ ಸಮಿತಿ ವತಿಯಿಂದ ಅರಮನೆ ಮೈದಾನದ ಗಾಯತ್ರಿ ವಿಹಾರದಲ್ಲಿ ಆಯೋಜಿಸಿದ್ದ ಜನರಾಜ್ಯೋತ್ಸವ –2025 ಕಾರ್ಯಕ್ರಮದಲ್ಲಿ ಮಾತನಾಡಿ, ಯಾವ ಭಾಷೆ ಕಲಿತರೂ ಕನ್ನಡಿಗರಾಗಿಯೇ ಉಳಿಯಬೇಕು ಎಂದು ನುಡಿದಿದ್ದಾರೆ.

ಕನ್ನಡದಲ್ಲೇ ಮಾತನಾಡಿ:ರಾಜ್ಯದಲ್ಲಿ ಕನ್ನಡ ಕಲಿಯದೆಯೇ ಬದುಕಬಹುದಾದ ವಾತಾವರಣವಿದೆ. ಕನ್ನಡ ಕಲಿಯಲೇಬೇಕಾದ ಅನಿವಾರ್ಯತೆ ಇಲ್ಲ. ಬೇರೆ ಭಾಷೆಯಲ್ಲಿ ಮಾತನಾಡುವವರೊಂದಿಗೆ ನಾವು ಕನ್ನಡದಲ್ಲಿಯೇ ಮಾತನಾಡಬೇಕು. ತಮಿಳುನಾಡು ತೆಲಂಗಾಣ, ಕೇರಳ, ಮಹಾರಾಷ್ಟ್ರ ಹಾಗೂ ಆಂಧ್ರದಲ್ಲಿ ಅವರವರ ಭಾಷೆಯಲ್ಲಿಯೇ ಮಾತನಾಡುತ್ತಾರೆ. ಕನ್ನಡಿಗರು ಏಕೆ ಕನ್ನಡದಲ್ಲಿ ಮಾತನಾಡಬಾರದು. ಕನ್ನಡದಲ್ಲಿಯೇ ಮಾತನಾಡಬೇಕು. ಅನಿವಾರ್ಯವಾದರೆ ಬೇರೆ ಭಾಷೆ ಬಳಸಿ. ಯಾವ ಭಾಷೆ ಕಲಿತರೂ ಕನ್ನಡಿಗರಾಗಿಯೇ ಉಳಿಯಬೇಕು ಎಂದಿದ್ದಾರೆ.




### ಎಲ್ಲಾದರು ಇರು, ಕನ್ನಡಿಗನಾಗಿರು

ಕನ್ನಡ ಭಾಷೆ, ನೆಲ, ಜಲ, ಗಡಿ ಇವುಗಳ ಬಗ್ಗೆ ಹೋರಾಟ ಮಾಡುವ ಪ್ರವೃತ್ತಿ ಬೆಳೆಸಿಕೊಳ್ಳಬೇಕು. ಎಲ್ಲಾದರೂ ಇರು, ಎಂತಾದರೂ ಇರು, ಕನ್ನಡವಾಗಿರು ಎಂದು ಕುವೆಂಪು ಹೇಳಿದ್ದಾರೆ. 1983 ರಲ್ಲಿ ಕನ್ನಡ ಕಾವಲು ಸಮಿತಿ ಅಧ್ಯಕ್ಷನಾಗಿ ನೇಮಕಗೊಂಡು ಒಂದೂವರೆ ವರ್ಷ ಕಾರ್ಯನಿರ್ವಹಿಸಿದ್ದನ್ನು ಸ್ಮರಿಸಿದ ಮುಖ್ಯಮಂತ್ರಿಗಳು, ಜಿಲ್ಲೆಗಳಿಗೆ ಪ್ರವಾಸ ಕೈಗೊಂಡು ಕನ್ನಡ ಬೆರಳಚ್ಚು ಯಂತ್ರಗಳನ್ನು ಎಲ್ಲೆಡೆ ಕಳುಹಿಸಿದ್ದು ಅವರು ಮಾಡಿದ ಮೊದಲ ಕೆಲಸವಾಗಿತ್ತು ಎಂದು ನೆನಪಿಸಿಕೊಂಡಿದ್ದಾರೆ.

### ಆಂಗ್ಲದಲ್ಲಿ ಕೇಳಿದ್ರೆ, ಕನ್ನಡದಲ್ಲಿ ಉತ್ತರಿಸಿ

ಕನ್ನಡ ಆಡಳಿತ ಭಾಷೆಯಾಗಿದ್ದು, ಕನ್ನಡ ಬಳಕೆಅನಿವಾರ್ಯವಾಗಬೇಕೆಂದು ತೀರ್ಮಾನಿಸಿ ಈ ಕೆಲಸ ಮಾಡಿದೆ. ಯಾರೇ ಆಂಗ್ಲ ಭಾಷೆಯಲ್ಲಿ ಮಾತನಾಡಿದರೂ ಕನ್ನಡದಲ್ಲಿಯೇ ಮಾತನಾಡಿಸುವುದು. ಕನ್ನಡದಲ್ಲಿಯೇ ಸಹಿ ಮಾಡುವುದು ಮತ್ತು ಟಿಪ್ಪಣಿ ಬರೆಯುವುದು. ಹೊರರಾಜ್ಯಗಳಿಗೆ ಬರೆಯುವಾಗ ಮಾತ್ರ ಆಂಗ್ಲ ಭಾಷೆ ಬಳಸಿದರೂ ಕನ್ನಡ ನಾಡಿನಲ್ಲಿ ಕನ್ನಡವೇ ಸಾರ್ವಭೌಮ ಭಾಷೆ ಎಂದಿದ್ದಾರೆ.

### ಕನ್ನಡ ಶಾಲೆಗಳ ಬಗ್ಗೆ ಸಂಪುಟ ಸಭೆ

ಬರಗೂರು ರಾಮಚಂದ್ರಪ್ಪ ಅವರು ಹೇಳಿದಂತೆ ಈ ಕನ್ನಡ ಶಾಲೆಗಳ ಬಗ್ಗೆ ಕೂಡಲೇ ಒಂದು ಸಭೆ ಕರೆದು, ಅಲ್ಲಿನ ತೀರ್ಮಾನವನ್ನು ಜಾರಿಗೊಳಿಸಲಾಗುವುದು. ವೈಯಕ್ತಿಕವಾಗಿ ನಾನು ದ್ವಿಭಾಷಾ ನೀತಿಯ ಪರವಾಗಿದ್ದು, ಸರ್ಕಾರ ಸಚಿವ ಸಂಪುಟ ಸಭೆಯಲ್ಲಿ ಈ ಬಗ್ಗೆ ಪ್ರಸ್ತಾಪಿಸಿ ತೀರ್ಮಾನ ಕೈಗೊಳ್ಳುವುದು ಎಂದು ತಿಳಿಸಿದ್ದಾರೆ

“ ಕನ್ನಡ ಚಳವಳಿಗಾರರ ಮೇಲಿರುವ ಪ್ರಕರಣಗಳನ್ನು ಹಿಂಪಡೆಯುವ ಬಗ್ಗೆ ಉಪಸಮಿತಿಯನ್ನು ರಚಿಸಲಾಗಿದ್ದು, ಗೃಹ ಸಚಿವರು ಅಧ್ಯಕ್ಷರಾಗಿದ್ದಾರೆ. ಅವರೊಂದಿಗೆ ಚರ್ಚಿಸಿ ತೀರ್ಮಾನ ಮಾಡಲಾಗುವುದು
–ಸಿದ್ದರಾಮಯ್ಯ, ಮುಖ್ಯಮಂತ್ರಿ

### ಹಿಂದಿ ನಮ್ಮ ರಾಷ್ಟ್ರ ಭಾಷೆ ಅಲ್ಲ:ಸಿಎಂ

ಕನ್ನಡಿಗರು ಒಂದು ವರ್ಷಕ್ಕೆ ನಾಲ್ಕೂವರೆ ಲಕ್ಷ ಕೋಟಿ ತೆರಿಗೆ ಕಟ್ಟುತ್ತೇವೆ. ಒಂದು ರೂಪಾಯಿ ಕೊಟ್ಟರೆ ಕೇಂದ್ರದಿಂದ ನಮಗೆ ಬರುವುದು 14 ಪೈಸೆ ಮಾತ್ರ. ದೇಶದಲ್ಲಿಯೇ ಕರ್ನಾಟಕ ತಲಾ ಆದಾಯದಲ್ಲಿ ನಂಬರ್ ಒನ್ ಸ್ಥಾನದಲ್ಲಿದೆ. ನಮ್ಮ ಸರ್ಕಾರದ ಅನೇಕ ಕಾರ್ಯಕ್ರಮಗಳ ಮೂಲಕ ಈ ಸ್ಥಾನಕ್ಕೆ ಬಂದಿದ್ದೇವೆ. ರಾಜ್ಯ ಸರ್ಕಾರ ಹಿಂದಿಯನ್ನು ವಿರೋಧಿಸುವುದಿಲ್ಲ. ಆದರೆ ಹಿಂದಿ ನಮ್ಮ ರಾಷ್ಟ್ರ ಭಾಷೆ ಅಲ್ಲ. ಕನ್ನಡವೇ ಸಾರ್ವಭೌವ ಭಾಷೆ ಎಂದು ಸ್ಪಷ್ಟಪಡಿಸಿದ್ದಾರೆ.

## ಗೃಹ ಸಚಿವರು ರಾಜೀನಾಮೆ ನೀಡಲು ಛಲವಾದಿ ನಾರಾಯಣಸ್ವಾಮಿ ಆಗ್ರಹ



ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು: ಕರ್ನಾಟಕದ ಗೃಹ ಇಲಾಖೆಯನ್ನು ನಡೆಸಲು ಆಗದಿದ್ದರೆ ರಾಜ್ಯದ ಗೃಹ ಸಚಿವರು ರಾಜೀನಾಮೆ ಕೊಡಬೇಕು ಎಂದು ವಿಧಾನಪರಿಷತ್ ವಿಪಕ್ಷನಾಯಕ ಛಲವಾದಿ ನಾರಾಯಣಸ್ವಾಮಿ ಅವರು ಆಗ್ರಹಿಸಿದ್ದಾರೆ.ಮಲ್ಲೇಶ್ವರದ ಬಿಜೆಪಿ ರಾಜ್ಯ ಕಾರ್ಯಾಲಯ “ಜಗನ್ನಾಥ ಭವನ”ದಲ್ಲಿ ಇಂದು ಮಾಧ್ಯಮ ಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಗೊತ್ತಿಲ್ಲ ಸಚಿವರೇ ರಾಜೀನಾಮೆ ಕೊಟ್ಟು ನಡೆಯಿರಿ ಪೋಸ್ಟರ್’ ಅನ್ನು ಅವರು ಬಿಡುಗಡೆಗೊಳಿಸಿದರು. ಗೃಹ ಸಚಿವರೇ ಸಬೂಬುಗಳನ್ನು ಹೇಳಿಕೊಂಡು ಎಷ್ಟು ದಿನ ಈ ರಾಜ್ಯವನ್ನು ಹಾಳು ಮಾಡುತ್ತೀರಿ? ನೀವು ಅಧಿಕಾರ ಬಿಟ್ಟು ಕೊಡಿ. ಬೇರೆ ಯಾರಿಗಾದರೂ ತಾಕತ್ತಿದ್ದರೆ ಆಡಳಿತ ನಡೆಸಲಿ ಎಂದು ಒತ್ತಾಯಿಸಿದರು. ಡಾ. ಪರಮೇಶ್ವರ್ ಅವರೇ, ಇದು ನಿಮ್ಮ ಅಸಹಾಯಕತೆಯೇ? ಅಥವಾ ಬೇರೆಯವರು ನಿಮಗೆ ಕೆಟ್ಟ ಹೆಸರು ತರಲು ನಿಮ್ಮ ವಿರುದ್ಧವಾಗಿ ಮಾಡಿದ ಷಡ್ಯಂತ್ರವೇ ಎಂದು ಹೇಳಿ ಎಂದು ಆಗ್ರಹವನ್ನು ಮುಂದಿಟ್ಟರು.

## ಕೋಲಿ ಸಮಾಜದ ಪ್ರತಿಭಟನೆ

ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ: ಕೋಲಿ, ಕಬ್ಬಲಿಗ, ಅಂಬಿಗ, ಬೆಸ್ತ ಬಾರಿಕ್ ಸಮಾಜಗಳನ್ನು ಪರಿಶಿಷ್ಟ ಪಂಗಡ (ಎಸ್ಟಿ) ಪಟ್ಟಿಗೆ ಸೇರ್ಪಡೆ ಮಾಡುವಂತೆ ಆಗ್ರಹಿಸಿ, ಸಮುದಾಯದ ಸಹಸ್ರಾರು ಜನರು ಸೋಮವಾರ ಬೃಹತ್ ಪ್ರತಿಭಟನೆ ನಡೆಸಿದರು. ನಗರದ ಜಗತ್ ವೃತ್ತದಲ್ಲಿರುವ ಡಾ.ಬಿ.ಆರ್. ಅಂಬೇಡ್ಕರ್ ಹಾಗೂ ಬಸವಣ್ಣನವರ ಮೂರ್ತಿಗೆ ಮಾಲಾರ್ಪಣೆ ಮಾಡಿದ ಬಳಿಕ ಕೋಲಿ, ಕಬ್ಬಲಿಗಸಮಾಜಗಳ ಜಗತ್ ವೃತ್ತದಿಂದ ಪ್ರಾರಂಭವಾದ ಪ್ರತಿಭಟನಾಮೆರವಣಿಗೆ ಜಿಲ್ಲಾಧಿಕಾರಿಗಳ ಕಚೇರಿತನಕನಡೆಯಿತು.



ಈ ವೇಳೆ ಮಾತನಾಡಿದ ಪ್ರತಿಭಟನಾನಿರತರು, ಪರ್ಯಾಯ ಪದಗಳಾದ ಕೋಲಿ, ಕಬ್ಬಲಿಗ, ಅಂಬಿಗ, ಬೆಸ್ತ, ಬಾರಿಕ್ ಸಮಾಜವನ್ನು ಪರಿಶಿಷ್ಟ ಪಂಗಡಕ್ಕೆ ಸೇರ್ಪಡೆ ಮಾಡುವಂತೆ 1996ರಿಂದ ಒತ್ತಾಯಿಸುತ್ತಾ ಬಂದಿದ್ದೇವೆ, ಹಲವು ಬಾರಿ ಗಂಗಾಮತ ಮತ್ತು ಅದರ ಉಪಜಾತಿಗಳ ಪ್ರಸ್ತಾವನೆಯನ್ನು ಕೇಂದ್ರಕ್ಕೆ ಕಳುಹಿಸಿದ್ದರೂ ಪದೇ ಪದೇ ವಾಪಸ್ ಕಳುಹಿಸಲಾಗುತ್ತಿದೆ, ಹಾಗಾಗಿ ಈ ಬಾರಿ ಸೂಕ್ತ ದಾಖಲೆಗಳೊಂದಿಗೆ ರಾಜ್ಯ ಸರ್ಕಾರ ಕೇದ್ರಕ್ಕೆ ಕಳುಹಿಸಬೇಕು ಎಂದರು.

## ರಾಜೀನಾಮೆ ನೀಡಬೇಕು



ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು: ಬಿಜೆಪಿ ವತಿಯಿಂದ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾಜಿ ಉಪಮುಖ್ಯಮಂತ್ರಿ ಹಾಗೂ ಮಲ್ಲೇಶ್ವರ ಕ್ಷೇತ್ರದ ಶಾಸಕ ಡಾ. ಸಿ.ಎನ್. ಅಶ್ವತ್ ನಾರಾಯಣ ಅವರು ರಾಜ್ಯದ ಗೃಹ ಇಲಾಖೆ ಸಂಪೂರ್ಣವಾಗಿ ವಿಫಲವಾಗಿದೆ ಎಂದು ತೀವ್ರವಾಗಿ ಆರೋಪಿಸಿದರು.ಡಾ. ಅಶ್ವತ್ ನಾರಾಯಣ ಅವರು ಮುಖ್ಯವಾಗಿ ಮಾದಕ ವಸ್ತು ಜಾಲ (ಡ್ರಗ್ಸ್) ಹಾಗೂ ಸರ್ಕಾರಿ ಭೂಮಿ ಅಕ್ರಮ ಒತ್ತುವರಿ ತೆರವು (ಸ್ಲಂ ಕ್ಲಿಯರೆನ್ಸ್ / ಎನ್‌ಕ್ರೋಚ್‌ಮೆಂಟ್) ವಿಚಾರಗಳ ಬಗ್ಗೆ ಮಾತನಾಡಿದರು.ರಾಜ್ಯದಲ್ಲಿ ವಿವಿಧ ರೀತಿಯ ಮಾದಕ ವಸ್ತುಗಳು ವ್ಯವಸ್ಥಿತವಾಗಿ ತಯಾರಾಗಿ, ಸಾಗಣೆ ಹಾಗೂ ಮಾರಾಟವಾಗುತ್ತಿದ್ದು, ಇದನ್ನು ತಡೆಗಟ್ಟುವಲ್ಲಿ ಗೃಹ ಇಲಾಖೆ ಸಂಪೂರ್ಣ ವಿಫಲವಾಗಿದೆ ಎಂದು ಆರೋಪಿಸಿದರು. “ಇದು ಸಣ್ಣ ಮಟ್ಟದ ಸಮಸ್ಯೆಯಲ್ಲ. ಕೋಟ್ಯಂತರ ರೂಪಾಯಿ ಮೌಲ್ಯದ ಡ್ರಗ್ಸ್ ಜಾಲ ರಾಜ್ಯಾದ್ಯಂತ ವ್ಯಾಪಿಸಿದೆ. ಇಂತಹ ಪರಿಸ್ಥಿತಿಯಲ್ಲಿ ಮಹಾರಾಷ್ಟ್ರದ ಪೊಲೀಸರು ಬಂದು ಕಲಬುರಗಿಯಲ್ಲಿ, ಮೈಸೂರಿನಲ್ಲಿ ದಾಳಿ ನಡೆಸುತ್ತಿರುವುದು ನಮ್ಮ ಗೃಹ ಇಲಾಖೆಯ ಅಸಮರ್ಥತೆಯನ್ನು ತೋರಿಸುತ್ತದೆ. ಮಹಾರಾಷ್ಟ್ರ ಪೊಲೀಸರಿಗೆ ಗೊತ್ತಾಗುವ ವಿಷಯ ನಮ್ಮ ಪೊಲೀಸರಿಗೆ, ಸರಕಾರಕ್ಕೆ ಗೊತ್ತಾಗುವುದಿಲ್ಲವೇ?” ಎಂದು ಪ್ರಶ್ನಿಸಿದರು.\ನಾರ್ಕೋಟಿಕ್ಸ್ ವಿಭಾಗದ ಕಾರ್ಯವೈಖರಿ, ಇಂಟೆಲಿಜೆನ್ಸ್ ವ್ಯವಸ್ಥೆ ಮತ್ತು ಪೊಲೀಸ್ ಇಲಾಖೆಯ ವರ್ಗಾವಣೆಗಳಲ್ಲಿ ಭ್ರಷ್ಟಾಚಾರ ಹೆಚ್ಚಾಗಿದೆ ಎಂದು ಕಿಡಿಕಾರಿದರು. “ಪೋಲೀಸ್ ಠಾಣೆಗಳು ಮತ್ತು ಹುದ್ದೆಗಳು ಮಾರಾಟಕ್ಕೆ ಇಟ್ಟಂತೆ ಆಗಿವೆ. ಇದರಿಂದ ಯುವಕರ ಭವಿಷ್ಯ ಸಂಪೂರ್ಣವಾಗಿ ನಾಶವಾಗುತ್ತಿದೆ” ಎಂದು ಹೇಳಿದರು.ಪೊಲೀಸ್ ಇಲಾಖೆ, ಡಿಜಿಪಿ, ಗೃಹ ಸಚಿವರು ಯಾವ ರೀತಿ ಕಾರ್ಯನಿರ್ವಹಿಸುತ್ತಿದ್ದಾರೆ? ಮುಖ್ಯಮಂತ್ರಿಗಳು ತಮ್ಮ ಕುರ್ಚಿ ಉಳಿಸಿಕೊಳ್ಳುವುದರಲ್ಲೇ ಬ್ಯುಸಿಯಾಗಿದ್ದಾರೆ.


## ವೈಕುಂಠ ಸಮಾರಾಧನೆ



ಜನನ: 31-12-1926
ನಿಧನ: 18-12-2025

### ದಿ.ಮಾಣಿಕರಾವ ರಾಮಣ್ಣ ಗಾದಾ

(ಗೌರವಾಧ್ಯಕ್ಷರು,ಶ್ರೀ ವಿವೇಕಾನಂದ ಶಿಕ್ಷಣ ಸಂಸ್ಥೆ, ಹುಮನಾಬಾದ್(ಬೀದರ))

ಆತ್ಮೀಯರೆ, ನಮ್ಮ ಸಂಸ್ಥೆಯ ಗೌರವಾಧ್ಯಕ್ಷರಾದ ಶ್ರೀ ಎಮ್.ಆರ್. ಗಾದಾ ಇವರು ದಿ.18/12/2025ರಂದು ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತನ್ನಿಮಿತ್ಯ ಮೃತರ ಆತ್ಮಕ್ಕೆ ಸದ್ಗತಿಗಾಗಿ ವೈಕುಂಠ ಸಮಾರಾಧನೆಯನ್ನು ದಿ.30/12/2025,ಮಂಗಳವಾರ, ಮುಂಜಾನೆ 11.30 ಗಂಟೆಗೆ ಹುಮನಾಬಾದ್ ಪಟ್ಟಣದಲ್ಲಿರುವ ದಿವಂಗತರ ಸ್ವಗೃಹದಲ್ಲಿ ನಡೆಯಲಿದ್ದು, ತಾವೆಲ್ಲರು ಅಗಮಿಸಿ ದಿವಂಗತರ ಅತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿಸುತ್ತೇವು.

-ದು:ಖತಪ್ತರು-

ಅಧ್ಯಕ್ಷರು, ಉಪಾಧ್ಯಕ್ಷರು, ಕಾರ್ಯದರ್ಶಿ, ಸಹಕಾರ್ಯದರ್ಶಿ, ಖಜಾಂಚಿ ಹಾಗು ಆಡಳಿತ ಮಂಡಳಿಯ ಸದಸ್ಯರು, ಶ್ರೀ ವಿವೇಕಾನಂದ ಶಿಕ್ಷಣ ಸಂಸ್ಥೆ, ಹುಮನಾಬಾದ್, ಮುಖ್ಯ ದತ್ತಿಗಳು ಹಾಗೂ ದತ್ತಿಗಳು, ಶ್ರೀ ವಿವೇಕಾನಂದ ಚಾರಿಟೇಬಲ್ ಟ್ರಸ್ಟ್, ಹುಮನಾಬಾದ್ ಹಾಗೂ ಶಿಕ್ಷಣ ಸಂಸ್ಥೆಯ ಎಲ್ಲಾ ವಿಭಾಗದ, ಪ್ರಾಚಾರ್ಯರು, ಸಿಬ್ಬಂದಿಗಳು.








ಮಾನ್ಯ ಸಂಸದರಾದ ಸಾಗರ ಖಂಡ್ರೆ ಸರ್ , ಹಾಗೂ ಡಾ. ಗೀತಾ ಈಶ್ವರ್ ಖಂಡ್ರೆ ಅವರ ಅಮೃತ ಹಸ್ತದಿಂದ ಪತ್ರಿಕೆ ಬಿಡುಗಡೆಗೊಳಿಸಲಾಯಿತು.

## ಚಿಟಗುಪ್ಪ ಪಟ್ಟಣ ಜನತೆ ಜಾಗ್ರತರಿದ್ದಾರೆ : ರಾಜಶೇಖರ ಪಾಟೀಲ



ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ:ಚಿಟಗುಪ್ಪ ಪಟ್ಟಣದ ಜನತೆಗೆ ಶಾಸಕ ಸಿದ್ದು ಪಾಟೀಲರು ನಿರಂತರವಾಗಿ ದ್ರೋಹ ಬಗೆಯುತ್ತಿದ್ದಾರೆ ಎಂದು ಮಾಜಿ ಸಚಿವ ರಾಜಶೇಖರ ಪಾಟೀಲರು ಗಂಭೀರ ಆರೋಪ ಮಾಡಿದ್ದಾರೆ. ಚಿಟಗುಪ್ಪ ಜನತೆ ತುಂಬಾ ಜಾಗ್ರತ ಜನತೆಯಾಗಿದ್ದಾರೆ. ಈ ನಾಡು ಸ್ವಾತಂತ್ರ್ಯ ಹೋರಾಟಗಾರರನ್ನು ನೀಡಿದ ನಾಡು ಚಿಟಗುಪ್ಪಾ ಆಗಿದೆ. ಇಲ್ಲಿ ಯಾರು ಸುಳ್ಳು ಹೇಳಿ ಜನತೆಗೆ ದ್ರೋಹ ಬಗೆಯಲು ಸಾಧ್ಯವಿಲ್ಲ ಎಂದು ರಾಜಶೇಖರ ಪಾಟೀಲ ತಿಳಿಸಿದ್ದಾರೆ. ಚಿಟಗುಪ್ಪ ನಗರದ ವಿವಿಧ ಕಾಮಗಾರಿಗೆ ಗುದ್ದಲಿ ಪೂಜೆಗೆ, ಪ್ರೋಟೋಕಾಲ್ ಇಲ್ಲದೆ ಅಗಮಿಸಿದ ಶಾಸಕ ಸಿದ್ದು ಪಾಟೀಲ, ಅದನ್ನು ವಿರೋಧಿಸಿದ ಕಾಂಗ್ರೇಸ್ ಪಕ್ಷದ ಕಾರ್ಯಕರ್ತರು ಪ್ರೋಟೋಕಾಲ್ ಪ್ರಕಾರ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಬೇಕು. ಎಂಎಲ್ ಸಿ ಗಳನ್ನು ಕರೆಯಿಸಬೇಕು ಎಂದು ಪಟ್ಟು ಹಿಡಿದಾಗ. ನಾನು ವಿಕ್ಷಣೆಗೆ ಬಂದಿದ್ದೆನೆ ಎಂದು ಸುಳ್ಳು ಹೇಳುವ ಮೊಲಕ ಚಿಟಗುಪ್ಪಾ ಜನತೆಗೆ ದ್ರೋಹ ಬಗೆದಿದ್ದಾರೆ ಎಂದು ರಾಜಶೇಖರ ಪಾಟೀಲ ಆರೋಪಿಸಿದ್ದಾರೆ.

## ವಸತಿ ನಿಲಯಗಳ ಸ್ಥಳ ಪರಿಶೀಲನೆ: ಖಂಡ್ರೆ

• ಮಲ್ಲಮ್ಮ ನುಡಿ ವಾರ್ತೆ ಬೀದರ

ಜಿಲ್ಲಾ ಉಸ್ತುವಾರಿ ಸಚಿವರಾದ ಮಾನ್ಯ ಶ್ರೀ ಈಶ್ವರ ಬಿ. ಖಂಡ್ರೆ ಅವರು ಇಂದು ಭಾಲ್ಕಿ ನಗರದಲ್ಲಿ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ಬಾಲಕಿಯರ ವಸತಿ ನಿಲಯಗಳ ನಿರ್ಮಾಣಕ್ಕೆ ಸಂಬಂಧಿಸಿದಂತೆ ಪ್ರಸ್ತಾವಿತ ಸ್ಥಳವನ್ನು ಪರಿಶೀಲಿಸಿದರು.ಬಾಲಕಿಯರ ಶಿಕ್ಷಣಕ್ಕೆ ಅಗತ್ಯವಿರುವ ಸುರಕ್ಷಿತ ಹಾಗೂ ಸುಸಜ್ಜಿತ ವಸತಿ ಸೌಲಭ್ಯಗಳನ್ನು ಒದಗಿಸುವುದು ಸರ್ಕಾರದ ಪ್ರಮುಖ ಆದ್ಯತೆಯಾಗಿದೆ ಎಂದು ಸಚಿವರು ಹೇಳಿದರು. ವಸತಿ ನಿಲಯಗಳ ನಿರ್ಮಾಣದಲ್ಲಿ ಗುಣಮಟ್ಟ, ಶುದ್ಧ ಕುಡಿಯುವ ನೀರು, ವಿದ್ಯುತ್, ಸ್ವಚ್ಛತೆ, ಭದ್ರತೆ ಹಾಗೂ ಅಗತ್ಯ ಮೂಲಸೌಕರ್ಯಗಳನ್ನು ಕಡ್ಡಾಯವಾಗಿ ಒದಗಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಅವರು ಸೂಚನೆ ನೀಡಿದರು.ಈ ವಸತಿ ನಿಲಯಗಳ ನಿರ್ಮಾಣದಿಂದ ಭಾಲ್ಕಿ ನಗರ ಹಾಗೂ ಸುತ್ತಮುತ್ತಲಿನ ಗ್ರಾಮೀಣ ಪ್ರದೇಶಗಳ ವಿದ್ಯಾರ್ಥಿನಿಯರಿಗೆ ಹೆಚ್ಚಿನ ಅನುಕೂಲವಾಗಲಿದ್ದು, ಬಾಲಕಿಯರ ವಿದ್ಯಾಭ್ಯಾಸಕ್ಕೆ ಉತ್ತೇಜನ ದೊರೆಯಲಿದೆ ಎಂದು ಸಚಿವರು ತಿಳಿಸಿದರು.ಸ್ಥಳ ಪರಿಶೀಲನೆಯ ಸಂದರ್ಭದಲ್ಲಿ ಸಂಬಂಧಿಸಿದ ಇಲಾಖೆಯ ಅಧಿಕಾರಿಗಳು, ಸ್ಥಳೀಯ ಜನಪ್ರತಿನಿಧಿಗಳು ಹಾಗೂ ಮುಖಂಡರು ಉಪಸ್ಥಿತರಿದ್ದರು.

## ಮಹಿಳಾ ಟೈಲರಿಂಗ್ ತರಬೇತಿಗೆ ಅರ್ಜಿ ಆಹ್ವಾನ

ಮಲ್ಲಮ್ಮ ನುಡಿ ವಾರ್ತೆ ರಾಯಚೂರು:

ಇಲ್ಲಿನ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆ (ಆರ್‌ಸೇಟಿ) ಇವರ ವತಿಯಿಂದ ಗ್ರಾಮೀಣ ನಿರುದ್ಯೋಗಿ ಮಹಿಳೆಯರಿಗಾಗಿ ಮಹಿಳಾ ಟೈಲರಿಂಗ್ ತರಬೇತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ತರಬೇತಿಯು 2026ರ ಜನವರಿ 2ರಿಂದ ಪ್ರಾರಂಭವಾಗಿ 31ದಿನಗಳ ಕಾಲ ನಡೆಯಲಿದೆ. ತರಬೇತಿಯ ಅವಧಿಯಲ್ಲಿ ಅಭ್ಯರ್ಥಿಗಳಿಗೆ ಉಚಿತ ಊಟ ಹಾಗೂ ಉಚಿತ ವಸತಿ ಸೌಕರ್ಯದ ವ್ಯವಸ್ಥೆ ಇರುತ್ತದೆ. ಆಸಕ್ತರು 8 ನೇ ತರಗತಿ ವ್ಯಾಸಂಗ ಮಾಡಿರುವ 18 ರಿಂದ 45 ವರ್ಷದೊಳಗಿನ ವಯಸ್ಸು ಹೊಂದಿರುವ ಗ್ರಾಮೀಣ ಭಾಗದ ಬಿಪಿಎಲ್ ಅಭ್ಯರ್ಥಿಗಳು ಆಧಾರ್ ಕಾರ್ಡ್ ಜೆರಾಕ್ಸ್, ಗ್ರಾಮೀಣ ಪಡಿತರ ಚೀಟಿ (ಬಿಪಿಎಲ್, ಪಿಎಚ್‌ಎಚ್, ಎನ್‌ಪಿಎಚ್‌ಎಚ್ ಮತ್ತು ಆಯ್‌ವೈ) ಜೆರಾಕ್ಸ್, 4 ಫೋಟೋಗಳು, ಬ್ಯಾಂಕ್ ಪಾಸ್‌ಬುಕ್ ಜೆರಾಕ್ಸ್ ಹಾಗೂ ಪ್ಯಾನ್ ಕಾರ್ಡ್ ಜೆರಾಕ್ಸೊಂದಿಗೆ ಅರ್ಜಿ ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ನಿರ್ದೇಶಕರು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆ (ಆರ್‌ಸೇಟಿ) ಆಶಾಪೂರು ರಸ್ತೆ, ರಾಯಚೂರು. ಅಥವಾ ಮೊಬೈಲ್ ಸಂಖ್ಯೆ: 8217382735, 9742470999ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆಯ ನಿರ್ದೇಶಕರಾದ ವಿಜಯಕುಮಾರ್ ಬಡಿಗೇರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ರೈತರ ಕಬ್ಬಿನ ಹಣ ಪಾವತಿಸಿ। ಯುವ ರೈತ ಮುಖಂಡ ಕೆ.ಡಿ.ಗಣೇಶ ಒತ್ತಾಯ।

## 45–50 ದಿನಗಳಾದ್ದರು ಪಾವತಿಯಾಗದ ರೈತರ ಕಬ್ಬಿನ ಹಣ

• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ:

ಸುಮಾರು 45 ರಿಂದ 50 ದಿನಗಳೆದರೂ ಜಿಲ್ಲೆಯ ಕಾರ್ಖಾನೆಗಳಿಗೆ ಸಾಗಿಸಿದ ರೈತರ ಕಬ್ಬಿನ ಹಣ ಇನ್ನೂ ರೈತರ ಖಾತೆಗೆ ಜಮೆಯಾಗಿಲ್ಲ, ಕಾರ್ಖಾನೆಯ ಮಾಲಿಕರು ತಕ್ಷಣವೇ ರೈತರಿಗೆ ಹಣ ನೀಡಬೇಕು ಎಂದು ಯುವ ರೈತ ಮುಖಂಡ ಕೆ.ಡಿ.ಗಣೇಶ ಒತ್ತಾಯಿಸಿದ್ದಾರೆ.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ರವಿವಾರ ಕರೆದ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಅವರು ಮಾತನಾಡಿದರು. ಜಿಲ್ಲೆಯ ಎಲ್ಲಾ ಕಾರ್ಖಾನೆಗಳು ಪ್ರತಿವರ್ಷ ಕಬ್ಬು ಸಾಗಿಸಿದ 15 ದಿನಗಳ ಒಳಗಾಗಿ ರೈತರಿಗೆ ಹಣ ಸಂದಾಯ ಮಾಡುತ್ತಿದ್ದರು. ಆದರೆ ಪ್ರಸ್ತುತ ಸಾಲಿನಲ್ಲಿ ಜಿಲ್ಲೆಯ ಎಲ್ಲಾ ಕಾರ್ಖಾನೆಯ ಮಾಲಿಕರು, ಕಬ್ಬು ಸಾಗಿಸಿದ ರೈತರಿಗೆ ಸುಮಾರು 45 ರಿಂದ 50 ದಿನಗಳೆದರೂ ಹಣ ನೀಡಿಲ್ಲ. ಹೀಗಾಗಿ ಜಿಲ್ಲೆಯ ರೈತರು ಕಂಗಾಲಾಗಿದ್ದಾರೆ. ಪ್ರಸ್ತುತ ಸಾಲಿನಲ್ಲಿ,




ಅತಿವೃಷ್ಟಿಯಿಂದ ಬೆಳೆದ ಬೆಳೆಯಲ್ಲಾ ಹಾಳಾಗಿ ರೈತರು ಸಂಕಷ್ಟದಲ್ಲಿದ್ದಾರೆ, ಆದರೆ ಕಾರ್ಖಾನೆಯ ಮಾಲಿಕರು ಕಬ್ಬು ಸಾಗಿಸಿದ ರೈತರಿಗೆ ಹಣ ನೀಡದೇ ಇರುವುದರಿಂದ ಇಲ್ಲಿಯ ರೈತರಿಗೆ ಗಾಯದ ಮೇಲೆ ಬರೆ ಎಳೆದಂತಾಗಿದೆ.

ಜಿಲ್ಲೆಯ ಎಲ್ಲಾ ಕಾರ್ಖಾನೆಯವರು 1 ಲಕ್ಷ ಕ್ವಿಂಟಾಲ್ ಗಿಂತಲೂ ಹೆಚ್ಚಿನ ಕಬ್ಬು ಕ್ರಸ್ಸಿಂಗ್ ಮಾಡಿದ್ದಾರೆ. ಪ್ರತಿ ಕಾರ್ಖಾನೆಯವರು ರೈತರಿಗೆ 30 ಕೋಟಿ ರೂ. ಗಿಂತಲೂ ಹೆಚ್ಚು ಹಣ ನೀಡಬೇಕಾಗಿದೆ. ಒಂದು ತಿಂಗಳು ಕಳೆದರೂ ರೈತರಿಗೆ ಹಣ ನೀಡದಿರುವುದರ ಉದ್ದೇಶವೇನು? ಎಂದು ಪ್ರಶ್ನಿಸಿದರು. ಈ ಕುರಿತು ಜಿಲ್ಲಾಧಿಕಾರಿಗಳು ಜಿಲ್ಲೆಯ ರೈತರಿಗೆ ಹಣ ನೀಡುವಂತೆ ನೋಟಿಸ್ ಜಾರಿ ಮಾಡಿದ್ದಾರೆ. ಆದರೆ ಜಿಲ್ಲಾಧಿಕಾರಿಗಳ ಆದೇಶಕ್ಕೂ ಜಿಲ್ಲೆಯ ಕಾರ್ಖಾನೆ ಮಾಲಿಕರು ಕ್ಯಾರೆ ಎನ್ನುತ್ತಿಲ್ಲ. ಇದರಿಂದ ಇಲ್ಲಿಯ ರೈತರು ಸಂಕಷ್ಟಕ್ಕೆ ಒಳಗಾಗಿದ್ದಾರೆ. ಸಾಲ ಸೂಲ ಮಾಡಿ ಕಬ್ಬು ಬೆಳೆದ ರೈತರು ಕಾರ್ಖಾನೆ ಮಾಲಿಕರಿಂದ ಹಣ ಪಡೆಯುವಲ್ಲಿ ಪರದಾಡುವಂತಾಗಿದೆ. ಹೀಗೇ ಮುಂದುವರೆದರೆ ಇಲ್ಲಿಯ ರೈತರು ಆತ್ಮಹತ್ಯೆಗೆ ಶರಣಾಗುವಂತಾಗಿದೆ,

ಕಾರಣ ಕಾರ್ಖಾನೆಯವರು ರೈತರಿಗೆ ಬರಬೇಕಾದ ಕಬ್ಬಿನ ಹಣ ತಕ್ಷಣವೇ ನೀಡಬೇಕು. ಇಲ್ಲದಿದ್ದರೆ ಎಲ್ಲಾ ರೈತರು ಬೀದಿಗಳಿದು ಹೋರಾಟ ಮಾಡುವ ಅನಿವಾರ್ಯತೆ ಉಂಟಾಗುತ್ತದೆ ಎಂದು ಹೇಳಿದರು. ಪತ್ತಿಕಾಗೋಷ್ಠಿಯಲ್ಲಿ ಮುಖಂಡರಾದ ಡಾ। ಜಗದೀಶ ಭೂರೆ, ಕರಬಸಪ್ಪಾ ಧೂಳಾ ಇದ್ದರು.

> ಮುಖ್ಯಮಂತ್ರಿಗಳು ರಾಜ್ಯಾದ್ಯಂತ ಎಲ್ಲಾ ಕಾರ್ಖಾನೆಯವರು ಪ್ರತಿ ಟನ್ನಿಗೆ 3100 ರೂ. ಕೊಡಬೇಕು ಎಂದು ಆದೇಶ ಮಾಡಿದ್ದಾರೆ, ಆದರೆ ಜಿಲ್ಲೆಯ ಕಾರ್ಖಾನೆ ಮಾಲಿಕರೂ ಅದಕ್ಕೂ ಒಪ್ಪದೇ 2900 ರೂ. ಕೊಡುತ್ತೇವೆ ಎಂದಿದ್ದಾರೆ. ಇಲ್ಲಿಯ ರೈತರೂ ಅದಕ್ಕೂ ಒಪ್ಪಿಕೊಂಡಿದ್ದಾರೆ. ಆದರೂ ಕೊಡಬೇಕಾದ ಹಣ ಕೂಡ ಕೊಡದೆ ರೈತರಿಗೆ ಸತಾಯಿಸುತ್ತಿರುವುದು ಯಾವನ್ಯಾಯ?
>
> • ಕೆ.ಡಿ.ಗಣೇಶ, ಯವು ರೈತ ಮುಖಂಡರು ಭಾಲ್ಕಿ.

> ಕಾರ್ಖಾನೆವರು ಕಬ್ಬು ನುರಿಸಿದ ಮೇಲೆ ಕಬ್ಬು ಸಾಗಿಸಿದ ರೈತರಿಗೆ ಹಣ ನೀಡಬೇಕು. ತಿಂಗಳು ಗಟ್ಟಲೇ ಕೋಟಿಗಟ್ಟಲೆ ಹಣ ರೈತರಿಂದ ಇಟ್ಟುಕೊಳ್ಳುವುದರ ಉದ್ದೇಶವೇನು? ಅದರಿಂದ ಬರುವ ಬಡ್ಡಿಯ ಮೌಲ್ಯವೆಷ್ಟು? ಸರ್ಕಾರ ಮಧ್ಯ ಪ್ರವೇಶಿಸಿ ತಕ್ಷಣವೇ ಕಬ್ಬು ಸಾಗಿಸಿದ ರೈತರಿಗೆ ಕಾರ್ಖಾನೆಗಳಿಂದ ಹಣ ಕೊಡಿಸುವ ಕಾರ್ಯಮಾಡಬೇಕು.
>
> • ಡಾ। ಜಗದೀಶ ಭೂರೆ, ಯುವ ಮುಖಂಡರು ಭಾಲ್ಕಿ.

## ಗುರುಗಳಿಗೆ ಧನ್ಯತೆ ಸಮರ್ಪಣೆ ಮಾಡುವುದು ಸಾರ್ಥಕ ಕಾರ್ಯ




• ಮಲ್ಲಮ್ಮ ನುಡಿ ವಾರ್ತೆ ಕಮಲನಗರ:

ಗುರುಗಳ ಸೇವೆಯನ್ನು ಸ್ಮರಿಸುವುದು ಮತ್ತು ಅವರಿಗೆ ಪ್ರತ್ಯಕ್ಷವಾಗಿ ಧನ್ಯತೆ ಸಮರ್ಪಣೆ ಮಾಡುವುದು ಸಾರ್ಥಕ ಕಾರ್ಯ. ಇದೇ ಶಾಲೆಯಲ್ಲಿ ವ್ಯಾಸಂಗ ಮಾಡಿರುವ ಹಳೆ ವಿದ್ಯಾರ್ಥಿಗಳು 25 ವರ್ಷಗಳ ನಂತರ ಒಂದೆಡೆ ಸೇರಿ ಕಾರ್ಯಕ್ರಮ ಹಮ್ಮಿಕೊಂಡಿರುವುದು ಶ್ಲಾಘನೀಯ ಎಂದು ಶಾಸಕ ಪ್ರಭು.ಬಿ.ಚವ್ಹಾಣ ಹೇಳಿದರು. ತಾಲೂಕಿನ ಖತಗಾಂವ ಗ್ರಾಮದ ಸರ್ಕಾರಿ ಪ್ರೌಢ ಶಾಲೆಯಲ್ಲಿ 1999–2000ನೇ ಸಾಲಿನ ಹಳೆಯ ವಿದ್ಯಾರ್ಥಿಗಳು ಶನಿವಾರ ಹಮ್ಮಿಕೊಂಡಿದ್ದ ಗುರುವಂದನಾ ಹಾಗೂ ಸ್ನೇಹ ಸಮ್ಮಿಲನ ಕಾರ್ಯಕ್ರಮದಲ್ಲಿ ಅವರು ಜ್ಯೋತಿ ಬೆಳಗಿಸಿ ಉದ್ಘಾಟಿಸಿ ಮಾತನಾಡಿದರು.

ಬೀದರನ್ ಡಯಟ್ ಕಾಲೇಜಿನ ಉಪನ್ಯಾಸಕ ಮಹಾದೇವ ಸಜ್ಜನ ಮಾತನಾಡಿ, ನಮ್ಮ ಕೈಯಲ್ಲಿ ಕಲಿತ ಇದೆ ಶಾಲೆಯಲ್ಲಿ ಓದಿ ದೊಡ್ಡವರಾಗಿ ಶಾಲೆಯಲ್ಲಿ ಕಳೆದ ನೆನಪುಗಳನ್ನು ಮೆಲುಕು ಹಾಕುತ್ತಾ, ಶಾಲೆಯಲ್ಲಿ ಕಲಿತು ಉನ್ನತ ಹುದ್ದೆಯಲ್ಲಿ ಇದ್ದು, ಕಲಿತ ಶಾಲೆಯನ್ನು ಹಾಗೂ ಶಿಕ್ಷಕರನ್ನು ಗೌರವಿಸುವ, ನೆನಪಿಸುವ ಈ ಕಾರ್ಯವು ಶಿಕ್ಷಕರ ಕಾರ್ಯಕ್ಕೆ ಸಾರ್ಥಕತೆ ಮೆರಗೂ ತಂದು–ಕೊಟ್ಟಿತು ಎಂದರು.

ಮುಖ್ಯ ಶಿಕ್ಷಕ ಸುಭಾಷ ಬಿರಾದಾರ ಮಾತನಾಡಿ, ವಿದ್ಯಾಭ್ಯಾಸ ಮುಗಿದ ನಂತರವೂ ವಿದ್ಯಾರ್ಥಿಗಳು ತಾವು ಓದಿದ ಪ್ರಾಥಮಿಕ, ಪ್ರೌಢ ಶಾಲೆ ಗುರುಗಳನ್ನು ನೆನಪಿನಲ್ಲಿ ಇಟ್ಟು–ಕೊಂಡಿದ್ದಾರೆ ಎಂದರೆ ಇದು ಮಾದರಿ ಕಾರ್ಯ ಎಂದರು. ಶಾಲೆಯ ಮುಖ್ಯ ಶಿಕ್ಷಕಿ ಶೈಲಶ್ರೀ ಕಾರ್ಯಕ್ರಮದ ಅಧ್ಯಕ್ಷತೆವಹಿಸಿದರು.

ಇದೇ ಸಂದರ್ಭದಲ್ಲಿ ಹಳೆಯ ವಿದ್ಯಾರ್ಥಿಗಳು ನಿವೃತ್ತ ಶಿಕ್ಷಕರಾದ ಅರ್ಜುನರಾವ ಭೋಸ್ಲೆ, ಮಾಣಿಕರಾವ ಶಿಂಧೆ, ಬೀದರ ಡಯಟ್ ಕಾಲೇಜಿನ ಉಪನ್ಯಾಸಕ ಮಹಾದೇವ ಸಜ್ಜನ, ಮುಖ್ಯ ಶಿಕ್ಷಕ ಸುಭಾಷ ಬಿರಾದಾರ, ಶಿಕ್ಷಕರಾದ ಸಾವಿತ್ರಾ, ರಾಜಕುಮಾರ ಕೋಡಗೆ, ಇಂದ್ರಜೀತ ಗವಳಿ ಹಾಗೂ ಸರ್ಕಾರಿ ಪ್ರೌಢ ಶಾಲೆಯ ಶಿಕ್ಷಕರಿಗೆ, ಪ್ರಾಥಮಿಕ ಶಾಲೆಯ ಶಿಕ್ಷಕರಿಗೆ, ನಿವೃತ್ತ ಶಿಕ್ಷಕರಿಗೆ ಸನ್ಮಾನಿಸಿದರು.

ತಹಶೀಲ್ದಾರ ಅಮಿತಕುಮಾರ ಕುಲಕರ್ಣಿ, ತಾ.ಪಂ. ಇಒ ಹಣಮಂತರಾಯ ಕೌಟಗೆ, ಸಹಾಯಕ ಕೃಷಿ ನಿರ್ದೇಶಕ ಧೂಳಪ್ಪ, ಬಿಆರ್‌ಸಿ ಪ್ರಕಾಶ ರಾಠೋಡ, ಸಿಆರ್‌ಸಿ ಬಾಲಾಜಿ ಗವಳಿ, ಪಿಎಸ್‌ಐ ಆಶಾ ರಾಠೋಡ, ನಿವೃತ್ತ ಶಿಕ್ಷಕರಾದ ಮಡಿವಾಳಪ್ಪ ನೀಲಂಗೆ, ರಮೇಶ ಪಾಟೀಲ್ ಹಕ್ಯಾಳ, ಸೂರ್ಯಕಾಂತ ಧರಣೆ, ಉಮಾಕಾಂತ ಚ.ಪಾಟೀಲ್, ಮಹಾದೇವ ಬಿರಾದಾರ, ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳು, ಶಿಕ್ಷಕರು, ಗ್ರಾಮದ ಗಣ್ಯರು, ಹಳೆಯ ವಿದ್ಯಾರ್ಥಿಗಳು ಇದ್ದರು. ಈ ಸಂದರ್ಭದಲ್ಲಿ ಎಲ್ಲಾ ಶಿಕ್ಷಕರಿಗೆ ಸನ್ಮಾನಿಸಿ ಗೌರವಿಸಲಾಯಿತು. ಕಾರ್ಯಕ್ರಮವನ್ನು ಪ್ರಶಾಂತ ಕಣಜೆ, ಸಂಗಮೇಶ ಧರಣೆ ಸ್ವಾಗತಿಸಿದರು. ಮಹಾದೇವ ಮಡಿವಾಳ ನಿರೂಪಿಸಿದರು. ಯೋಗೇಶ ಸ್ವಾಮಿ ವಂದಿಸಿದರು.

## ವಚನ ವಿಜಯೋತ್ಸವ: ಪ್ರಭುದೇವ ಮಹಾಸ್ವಾಮೀಜಿ.

• ಮಲ್ಲಮ್ಮ ನುಡಿ ವಾರ್ತೆ ಬಸವಕಲ್ಯಾಣ :

ವಚನಗಳು ಶ್ರೇಷ್ಠ ಮಂತ್ರಗಳು ನೆಮ್ಮದಿಯ ಬದುಕಿನ ಸೂತ್ರಗಳು. ಶರಣರ ವಚನಗಳು ಪರುಷ ಮಣಿ ಇದ್ದಂತೆ. ಪರುಷ ಹುಟ್ಟಿದ ಲೋಹ ಬಂಗಾರವಾಗುವಂತೆ, ವಚನಗಳು ಓದಿದರೆ ಮಾನವ ಜೀವನ ಪರಿವರ್ತನೆಯಾಗುತ್ತದೆ ಎಂದು ಲಿಂಗಾಯತ ಮಹಾಮಠದ ಪೀಠಾಧಿಪತಿಗಳಾದ

ಪೂಜ್ಯಶ್ರೀ ಪ್ರಭುದೇವ ಮಹಾಸ್ವಾಮೀಜಿಗಳು ತಿಳಿಸಿದರು.

ತಾಲೂಕಿನ ಧನೂರ(ಕೆ)ಗ್ರಾಮದಲ್ಲಿ ನಡೆದ 770 ಪ್ರವಚನಗಳ ಅಭಿಯಾನದ ನಿಮಿತ್ಯ ಐದು ದಿನಗಳ ವಚನ ಜೀವನ ಪ್ರವಚನದ ಸಮಾರೋಪ ಸಮಾರಂಭ ಹಾಗೂ ವಚನ ವಿಜಯೋತ್ಸವ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿ ಮರ್ತ್ಯದ ಮಾನವರ ಮನದ ಮೈಲಿಗೆಯನ್ನು ತೊಳೆಯಲು ವಚನಗಳಿಂದ ಮಾತ್ರ ಸಾಧ್ಯ. ದೇವರನ್ನು ಕಾಣುವ ದಾರಿ ಯಾವುದು ಎಂದರೆ ವಚನಗಳು. ಅಂತಹ ವಚನಗಳು ಜನಮಾನಸದಲ್ಲಿ ಬಿತ್ತಿಬೆಳೆಯಬೇಕೆಂಬ ಸದುದ್ದೇಶದಿಂದ ಲಿಂ. ಪೂಜ್ಯಶ್ರೀ ಅಕ್ಕ ಅನ್ನಪೂರ್ಣ ತಾಯಿ ವಚನ ವಿಜಯೋತ್ಸವ ಕಾರ್ಯಕ್ರಮ ನಾಡಿನಾದ್ಯಂತ ಆಚರಿಸುತ್ತಾ ಬಂದಿರುವರು. ಅಕ್ಕನವರ ಸಂಕಲ್ಪದಂತೆ ಹಳ್ಳಿ ಹಳ್ಳಿಗಳಲ್ಲಿಯೂ ವಚನ ವಿಜಯೋತ್ಸವ ಕಾರ್ಯಕ್ರಮವನ್ನು ಹಮ್ಮಿಕೊಂಡು ಜನರಿಗೆ ಸನ್ಮಾರ್ಗದತ್ತ ಕರೆದೊಯ್ಯುವ ಕಾರ್ಯವನ್ನು ಮಾಡುತ್ತಿದ್ದೇವೆ ಎಂದು ತಿಳಿಸಿದರು.



ಶರಣ ಸಾಹಿತಿಗಳಾದ ರಮೇಶ ಮಠಪತಿಯವರು ಉದ್ಘಾಟಿಸಿ ಮಾತನಾಡಿ ಶರಣರು ತಮ್ಮ ಪ್ರಾಣವನ್ನು ಪಣಕ್ಕಿಟ್ಟು ನಮಗಾಗಿ ವಚನ ಸಾಹಿತ್ಯವನ್ನು ಉಳಿಸಿ ಹೋಗಿದ್ದಾರೆ. ಅಕ್ಕನವರ ಮಾನಸ ಪುತ್ರರಾದ ಪೂಜ್ಯ ಪ್ರಭುದೇವ ಮಹಾಸ್ವಾಮೀಜಿ ನಾಡಿನಾದ್ಯಂತ 770 ಪ್ರವಚನಗಳು ಮಾಡುವ ಮುಖಾಂತರ, ಹಳ್ಳಿ ಹಳ್ಳಿಗಳಲ್ಲಿ ವಚನ ವಿಜಯೋತ್ಸವ ಆಚರಿಸುತ್ತ ವಚನಗಳಿಗೆ ಪರಮೋಚ್ಚ ಗೌರವವನ್ನು ಕೊಟ್ಟು ತಮ್ಮ ತಲೆಯ ಮೇಲೆ ವಚನ ಸಾಹಿತ್ಯದ ಕಟ್ಟನ್ನು ಹೊತ್ತು ಮೆರೆಸುತ್ತಿರುವುದು ಮಾದರಿಯ ಕಾರ್ಯ. ಗ್ರಾಮದ ಮಹಿಳೆ ಮಕ್ಕಳು ಹಿರಿಯರೆಲ್ಲ ವಚನ ಸಾಹಿತ್ಯ ತಲೆ ಮೇಲೆ ಹೊತ್ತು ವಚನ ವಿಜಯೋತ್ಸವ ಆಚರಿಸುವುದು ನೋಡಿದರೆ ನಿಜಕ್ಕೂ ಆನಂದದ ಕಣ್ಣೀರು ಬರುತ್ತದೆ ಎಂದು ತಿಳಿಸಿದರು.

ನೀರಿನಲ್ಲಿ ಮೀನು ಸುಳಿದಾಡಿದರೆ ನೀರು ತಿಳಿಯಾಗುವಂತೆ ಸಮಾಜದಲ್ಲಿ ಸ್ವಾಮಿಗಳು ತಿರುಗಾಡಿದರೆ ಸಮಾಜ ಸದೃಢ ಮತ್ತು ಸಂಸ್ಕಾರಯುತವಾಗಿ ನಡೆಯುತ್ತದೆ. ಎಲ್ಲರೂ ದೇಶವಿದೇಶ ಸುತ್ತಿ ಬರಬೇಕೆಂದು ಯೋಚಿಸಿದರೆ ಪೂಜ್ಯರು ಹಳ್ಳಿಹಳ್ಳಿಗಳಲ್ಲಿ ಪ್ರವಚನಗಳನ್ನು ಮಾಡುತ್ತಾ ವಚನ ವಿಜಯೋತ್ಸವ ಆಚರಿಸುತ್ತಾ ಜನರಲ್ಲಿ ಬಸವ ತತ್ವ ನೆಲೆಗೊಳಿಸುತ್ತಿದ್ದಾರೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಡಾ. ಎಸ್ ಆರ್ ಮಠಪತಿ. ಚನ್ನಬಸಪ್ಪ ಪತಂಗೆ. ಗೋರ್ಟಾ ಲಿಂಗಾಯತ ಸೇವಾದಳದ ಅಧ್ಯಕ್ಷರಾದ ಸುಪ್ರೀತ ಪತಂಗೆ. ಪ್ರಕಾಶ ಮಠಪತಿ. ಬಾಬುರಾವ ರಾಜೋಳೆ. ಸಿ ಎಸ್ ಗಣಾಚಾರಿ. ಸೋಮನಾಥಪ್ಪ ರಾಜೇಶ್ವರೆ. ವಿಜಯಲಕ್ಷ್ಮಿ ರಾಜೋಳೆ. ಓಂಕಾರ್ ಬಿರಾದಾರ. ಶಿವಶಂಕರ ಬಚ್ಚನೆ. ಸಂಗೀತ ಬಿರಾದಾರ ನೀಲಮ್ಮನ ಬಳಗ ಗೋಟಾ9 ಗ್ರಾಮದ ತಾಯಂದಿರು ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ಸ್ಮಾರ್ಟ್ ಕ್ರಾಪ್ ಯೋಜನೆಯ ವಿಜ್ಞಾನಿಗಳು ರೈತರ ಸಂವಾದ




• ಮಲ್ಲಮ್ಮ ನುಡಿ ವಾರ್ತೆ ಬೀದರ :

ಔರಾದ್ ತಾಲ್ಲೂಕಿನ ಕಂದಗೋಳ ಗ್ರಾಮದಲ್ಲಿ ಕೃಷಿ ವಿಶ್ವವಿದ್ಯಾಲಯದ ಕೀಟಶಾಸ್ತ್ರ ವಿಭಾಗದ ವತಿಯಿಂದ ಎಸ್‌ಬಿಐ ಸ್ಮಾರ್ಟ್ ಕ್ರಾಪ್ ಯೋಜನೆಯ ಅಡಿಯಲ್ಲಿ ವಿಜ್ಞಾನಿಗಳು ಮತ್ತು ರೈತರ ಸಂವಾದ ಕಾರ್ಯಕ್ರಮವು ಶನಿವಾರ ಜರುಗಿತು.

ಕಾರ್ಯಕ್ರಮದಲ್ಲಿ ಯೋಜನೆಯ ಪ್ರಮುಖ ವಿಜ್ಞಾನಿಗಳಾದ ಡಾ.ಎ.ಜಿ.ಶ್ರೀನಿವಾಸ್ ಪ್ರಾಧ್ಯಾಪಕರೂ ಹಾಗೂ ನಿರ್ದೇಶಕರೂ ಸ್ನಾತಕೋತರ(ಡೀನ್) ಅವರು ಬೆಳೆಗಳಲ್ಲಿ ಕಂಡುಬರುವ ಜೈವಿಕ ಹಾಗೂ ಅಜೈವಿಕ ಸಮಸ್ಯೆಗಳು ಇಳುವರಿಯ ಮೇಲೆ ಹೇಗೆ ಪರಿಣಾಮ ಬೀರುತ್ತವೆ ಎಂಬುದನ್ನು ವಿವರಿಸಿದರು.

ಇಂತಹ ಸಮಸ್ಯೆಗಳು ಎದುರಾದಾಗ ರೈತರು ನಿಖರವಾದ ನಿರ್ವಹಣಾ ಕ್ರಮಗಳನ್ನು ಹಾಗೂ ಸೂಕ್ತ ರಸಾಯನಿಕಗಳನ್ನು ಬಳಸಲು, ಮೊಬೈಲ್ ಆಪ್ ಮೂಲಕ ಮಾಹಿತಿ ಪಡೆಯುವಂತಾಗಿದ್ದು, ತಜ್ಞರಿಂದ ತಕ್ಷಣ ಸಲಹೆ ದೊರೆಯುವಲ್ಲಿ ಈ ಯೋಜನೆ ಬಹುಮುಖ್ಯವಾಗುತ್ತದೆ ಎಂದು ತಿಳಿಸಿದರು.

ಅಧ್ಯಯನ ಮತ್ತು ಸಂಶೋಧನಾ ಆಧಾರಿತ ಈ ಯೋಜನೆಯನ್ನು ಆಯ್ಕೆಯಾದ ಐದು ಗ್ರಾಮಗಳ ರೈತರ ಹೊಲಗಳಲ್ಲಿ ಪ್ರಾಯೋಗಿಕವಾಗಿ ಅನುಷ್ಠಾನಗೊಳಿಸಲಾಗುತ್ತಿದೆ.

ಈ ಅಧ್ಯಯನದ ನಂತರ ಉತ್ತಮ ಫಲಿತಾಂಶ ದೊರೆತಲ್ಲಿ ಹಾಗೂ ಆಪ್ ಬಳಕೆಗೆ ರೈತರಿಂದ ಉತ್ತಮ ಪ್ರತಿಕ್ರಿಯೆ ಬಂದಲ್ಲಿ, "ಕೃಷಿ ವಾಸ್" ಆಪ್ ಅನ್ನು ಎಲ್ಲಾ ರೈತರ ಬಳಕೆಗೆ ಶಿಫಾರಸು ಮಾಡಲಾಗುವುದು ಎಂದು ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಅಗ್ರಿ ಬ್ರಿಜ್ ಸಂಸ್ಥೆಯ ಶ್ರೀ ಮೋಹನ್ ಬಾಬು ಅವರು ಕೃಷಿ ತಂತ್ರಜ್ಞಾನ ಬಳಕೆ–ಯ ಕುರಿತು ಪ್ರಾತ್ಯಕ್ಷಿಕೆ ನೀಡಿದರು. ನಂತರ ಯೋಜನೆಯ ಅಡಿಯಲ್ಲಿ ನೋಂದಾಯಿತ ರೈತರಿಗೆ ಪರಿಕರಗಳು ಹಾಗೂ ಪೋಷಕಾಂಶಗಳನ್ನು ವಿತರಿಸಲಾಯಿತು.

ಕಾರ್ಯಕ್ರಮದ ಕೊನೆಯಲ್ಲಿ ಯೋಜನೆಯ ಅಡಿಯಲ್ಲಿ ನೋಂದಾಯಿತ ರೈತರ ಹೊಲಗಳಿಗೆ ಭೇಟಿ ನೀಡಿ, "ಕೃಷಿ ವಾಸ್" ಆಪ್‌ನಲ್ಲಿ ಗುರುತಿಸಲಾದ ಸಮಸ್ಯೆಗಳ ಲಕ್ಷಣಗಳನ್ನು ನೈಜ ಹೊಲದ ಬೆಳೆಗಳಲ್ಲಿ ಪರಿಶೀಲಿಸಿ, ತಂತ್ರಜ್ಞಾನದ ನಿಖರತೆಯನ್ನು ದೃಢಪಡಿಸಲಾಯಿತು.

ಕಾರ್ಯಕ್ರಮದಲ್ಲಿ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಆಹಾರ ಸಂಸ್ಕರಣ ವಿಭಾಗದ ಪ್ರಾಧ್ಯಾಪಕರಾದ ಡಾ. ಶರಣಗೌಡ ಹಿರೇಗೌಡ, ಯೋಜನೆಯ ಸಹ–ಸಂಶೋಧನಾ ವಿಜ್ಞಾನಿಗಳಾದ ಡಾ.ನಿಂಗದಳ್ಳಿ ಮಲ್ಲಿಕಾರ್ಜುನ್ ಹಾಗೂ ಡಾ.ಜ್ಞಾನದೇವ್ ಬುಳ್ಳ, ಯೋಜನಾ ಸಹಾಯಕರಾದ ಅನಿಲ್ ಕುಮಾರ್ ಮತ್ತು ಗ್ರಾಮದ ಪ್ರಮುಖ ರೈತರಾದ ಪಾಂಡುರಂಗ ಪಾಟೀಲ್, ಶಿವಾಜಿ ಪಾಟೀಲ್, ನಿತೀಶ್ ಮಾಳಿಪಾಟೀಲ್, ನಾಗೇಶ್ ಪಾಟೀಲ್ ಹಾಗೂ ಮುಕುಂದ ರಾವ್ ಬಿರಾದರ್ ಅವರುಗಳು ಭಾಗವಹಿಸಿದ್ದರು.

## ಅಂಚೆ ಮೂಲಕ ಕನ್ನಡ ಶಿಕ್ಷಣ: ಅರ್ಜಿ ಆಹ್ವಾನ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ:

ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಮತ್ತು ಮೈಸೂರಿನ ಭಾರತೀಯ ಭಾಷೆಗಳ ಕೇಂದ್ರ ಸಂಸ್ಥೆ ಈ ಎರಡೂ ಸಂಸ್ಥೆಗಳು ಒಟ್ಟಾಗಿ ನವೆಂಬರ್ 01, 1985 ರಿಂದ ಕರ್ನಾಟಕದಲ್ಲಿರುವ ಕನ್ನಡ ಬಾರದ ಎಲ್ಲಾ ಸರ್ಕಾರಿ ನೌಕರರಿಗಾಗಿ ಹನ್ನೆರಡು ತಿಂಗಳುಗಳ ಅಂಚೆ ಮೂಲಕ ಕನ್ನಡ ಶಿಕ್ಷಣ ಯೋಜನೆಯೊಂದನ್ನು ನಡೆಸುತ್ತಿದ್ದು, ಇದಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ ಎಂದು ಮೈಸೂರು ಮಾನಸ ಗಂಗೋತ್ರಿಯ ಭಾರತೀಯ ಭಾಷೆಗಳ ಕೇಂದ್ರ ಸಂಸ್ಥೆಯ ಅಂಚೆ ಮೂಲಕ ಕನ್ನಡ ಶಿಕ್ಷಣ ಯೋಜನೆಯ ಪ್ರೊಫೇಸರ್ ಮತ್ತು ಉಪನಿರ್ದೇಶಕರು ಹಾಗೂ ಪ್ರಭಾರ ಅಧಿಕಾರಿಗಳಾದ ಡಾ. ಪಿ.ಆರ್. ಧರ್ಮೇಶ್ ಫರ್ನಾಂಡಿಜ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಕರ್ನಾಟಕದಲ್ಲಿರುವ ಎಲ್ಲಾ ನಗರಸಭೆ, ಕ.ವಿ.ಪ್ರ.ನಿ.ನಿ., ಕೆ.ಎಸ್.ಆರ್.ಟಿ.ಸಿ., ವಿಶ್ವವಿದ್ಯಾಲಯಗಳು, ಶಾಲಾ–ಕಾಲೇಜುಗಳು, ಮತ್ತಿತರ ಸರ್ಕಾರಿ, ಅನುದಾನ ಪಡೆಯುವ ಸಂಸ್ಥೆಗಳ ನೌಕರರು ಮತ್ತು ಎಲ್ಲಾ ರಾಷ್ಟ್ರೀಕೃತ ಬ್ಯಾಂಕ್‌ಗಳ ನೌಕರರು ಸಹ ನೋಂದಾಯಿಸಿಕೊಳ್ಳಬಹುದು. ನೋಂದಣಿತರು ಶುಲ್ಕವನ್ನು ಕೊಡಬೇಕಾಗಿಲ್ಲ.

ಕರ್ನಾಟಕದ ಸರ್ಕಾರಿ ನೌಕರರು ಸಂಪರ್ಕ ಶಿಬಿರ ಹಾಗೂ ಪರೀಕ್ಷೆಗಳಿಗೆ ಹಾಜರಾಗುವಾಗಿನ ಅವರ ಕಚೇರಿ ಗೈರುಹಾಜರಿಯನ್ನು ಅನ್ಯಕಾರ್ಯ ನಿಮಿತ್ತ ಎಂದು ಪರಿಗಣಿಸಲಾಗುತ್ತದೆ. ಅಂಚೆ ಮೂಲಕ ಕನ್ನಡ ಶಿಕ್ಷಣ ಯೋಜನೆಗೆ ನೋಂದಾಯಿಸಿಕೊಂಡು ಉತ್ತೀರ್ಣರಾದವರಿಗೆ ಕರ್ನಾಟಕ ಲೋಕಸೇವಾ ಆಯೋಗದ ಕನ್ನಡ ಪರೀಕ್ಷೆಯಿಂದ ಕರ್ನಾಟಕ ಸರ್ಕಾರದ ಅಧಿಸೂಚನೆ ಸಿಆಸುಇ 39::ಸೇಸೇವಿ: 87(1), ದಿನಾಂಕ 13ನೇ ಫೆಬ್ರವರಿ 1989 (ಕರ್ನಾಟಕ ರಾಜ್ಯಪತ್ರ, ಭಾಗ–4, 2ಸಿ(1) ಮಾರ್ಚ್ 23, 1989, ಪುಟ 119)ರಲ್ಲಿ ತಿಳಿಸಿರುವಂತೆ ವಿನಾಯಿತಿ ಇರುತ್ತದೆ.

ಈ ಯೋಜನೆಯನ್ನು ಈಗ ಸಾರ್ವಜನಿಕರಿಗೂ ವಿಸ್ತರಿಸಲಾಗಿದೆ. ಸಾರ್ವಜನಿಕರು ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ವಯೋಮಿತಿ 18 ರಿಂದ 50 ವರ್ಷದೊಳಗಿರಬೇಕು. ಆಸಕ್ತರು ಭರ್ತಿ ಮಾಡಿದ ಅರ್ಜಿಯ ಜೊತೆಯಲ್ಲಿ 250 ರೂ.ಗಳ ಡಿಮ್ಯಾಂಡ್ ಡ್ರಾಫ್ಟನ್ನು ಕಳುಹಿಸಿ ಕೊಡಬೇಕು. ನೋಂದಣಿತರಿಗೆ ಇಪ್ಪತ್ತು ಪಾಠಾವಳಿಗಳನ್ನು ಕಳುಹಿಸಿಕೊಡಲಾಗುತ್ತದೆ. ತರಬೇತಿ ಮತ್ತು ಸಂಪರ್ಕ ಶಿಬಿರದ ಅಂತ್ಯದಲ್ಲಿ ಪರೀಕ್ಷೆಗಳನ್ನು ನಡೆಸಲಾಗುತ್ತದೆ. ಮೂವತ್ತೊಂಭತ್ತನೆಯ ತಂಡದ ತರಬೇತಿಯು ಜನವರಿ 2025 ರಿಂದ ಆರಂಭವಾಗಲಿದೆ. ನಿಗದಿತ ಅರ್ಜಿ ನಮೂನೆ ಮತ್ತು ತರಬೇತಿ ವಿವರಗಳನ್ನು ಪ್ರಭಾರಿ ಅಧಿಕಾರಿ, ಅಂಚೆ ಮೂಲಕ ಕನ್ನಡ ಶಿಕ್ಷಣ ಯೋಜನೆ, ಭಾರತೀಯ ಭಾಷೆಗಳ ಕೇಂದ್ರ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು–570006 (ದೂರವಾಣಿ ಸಂಖ್ಯೆ 0821–2345128) ಇವರಿಗೆ ಸ್ವವಿಳಾಸದ ಲಕೋಟಿಯೊಂದಿಗೆ ಐದು ರೂಪಾಯಿಯ ಅಂಚೆ ಚೀಟಿಯನ್ನು ಕಳುಹಿಸಿ ಅರ್ಜಿ ಪಡೆದುಕೊಳ್ಳಬೇಕು.

## ವೀರಶೈವ ಲಿಂಗಾಯತ ನೌಕರರ

## ಕ್ಷೇಮಾಭಿವೃದ್ಧಿ ಸಂಘದ ದಿನದರ್ಶಿಕೆ ಬಿಡುಗಡೆ

ಹುಮನಾಬಾದ : ವೀರಶೈವ ಲಿಂಗಾಯತ ನೌಕರರು ಅನೇಕ ಉಪಪಂಗಡಗಳ ನೌಕರರನ್ನು ಕರೆದು ಒಟ್ಟಾಗಿದ್ದು ಸಂಘವನ್ನು ಕಟ್ಟಬೇಕು ವೀರಶೈವ ಲಿಂಗಾಯತ ನೌಕರರು ಸಂಘಟಿತರಾಗದಿದ್ದರೆ. ನಮ್ಮನ್ನು ಕೇಳುವವರೇ ಇಲ್ಲದಂತಾಗುತ್ತಿದೆ ಸಕಲ ಜೀವರಾಶಿಗಳಿಗೆ ಒಳಿತನ್ನು ಬಯಸಿದ್ದು ವೀರಶೈವಲಿಂಗಾಯತ ಧರ್ಮ ಎಂದು ಕಾರ್ಯಕ್ರಮದ ಸಾನಿಧ್ಯವನ್ನು ವಹಿಸಿಕೊಂಡು ಪೂಜ್ಯ ಶ್ರೀ ಮ.ನಿ.ಪ್ರ.ಶಿವಲಿಂಗ ಮಹಾಸ್ವಾಮಿಗಳು ವಿರಕ್ತ ಮಠ ಖೇರ್ಡಾ (ಬಿ) ಕಿನ್ನರಿ ಬೊಮ್ಮಯ್ಯಾ ಶಿಕ್ಷಣ ಸಂಸ್ಥೆ ಹಳ್ಳಿಖೇಡ(ಕೆ)ದಲ್ಲಿ ದಿನದರ್ಶಿಕೆ ಬಿಡುಗಡೆಗೊಳಿಸಿ ಆರ್ಶಿವಚನ ನೀಡಿದರು. ಸಂಘದ ಗೌರವಧ್ಯಕ್ಷರಾದ ಡಾ. ನಾಗನಾಥ ಹುಲಸೂರೆ ವೀರಶೈವ ಲಿಂಗಾಯತ ಸಮಾಜದವರು ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುವುದರ ಜೊತೆಗೆ ಸಂಸ್ಕಾರ ನಿಡಬೇಕು ಹಾಗೂ ವೀರಶೈವ ಲಿಂಗಾಯತ ಸಮಾಜದ ಬಡ ಮಕ್ಕಳ ಶಿಕ್ಷಣಕ್ಕಾಗಿ ಸೇವೆಯನ್ನು ನೀಡಲು ಸಿದ್ದರಿದ್ದೆವೆ. ವೀರಶೈವ ಲಿಂಗಾಯತ ನೌಕರರ ಸಂಘವನ್ನು ಮಾದರಿಯ ರೂಪದಲ್ಲಿ ನಡೆಸಿಕೊಂಡು ಹೊಗುವುದು ನಮ್ಮೆಲ್ಲ ಜವಾಬ್ದಾರಿಯಾಗಿದೆ ಎಂದರು. ಪಂಚ ಗ್ಯಾರಂಟಿಗಳ ಜಿಲ್ಲಾ ಉಪಾಧ್ಯಕ್ಷರಾದ ಉದಯಕುಮಾರ ವಾರದ ಮಾತನಾಡಿ ಸಂಘಕ್ಕೆ ನನ್ನ ಅವಶ್ಯಕತೆ ಇದ್ದಾಗ ತನು ಮನಧನದಿಂದ ಒಳ್ಳೆಯ ಕಾರ್ಯಗಳಿಗೆ ಸೇವೆ ಮಾಡಲು ಸದಾ ಸಿದ್ದನೆಂದು ಹೇಳಿದರು. ಕಾರ್ಯಕ್ರಮದ ಅಧ್ಯಕ್ಷರಾದ ಮಲ್ಲಿಕಾರ್ಜುನ ಸಂಘಮಕರ್ ಮಾತನಾಡಿ ಹಿಂದಿನ ಅಧ್ಯಕ್ಷರು ಹಾಗೂ ಹಿರಿಯರ ಮಾರ್ಗದರ್ಶನದಲ್ಲಿ ಸಂಘವನ್ನು ಮುನ್ನಡೆಸಿಕೊಂಡು ಹೋಗಲು ಪ್ರಮಾಣಿಕ ಪ್ರಯತ್ನ ಮಾಡುತ್ತೇನೆ ಸಂಘದ ಎಲ್ಲಾ ಸದಸ್ಯರ ಸಹಕಾರದೊಂದಿಗೆ ಮುನ್ನಡೆಸಿಕೊಂಡು ಹೋಗುತ್ತೇನೆ. ತಾಲೂಕಿನ ಎಲ್ಲಾ ಹೊಸ ನೌಕರರು ಸದಸ್ಯರಾಗಲು ಮನವಿ ಮಾಡುತ್ತೇನೆ. ಜಿಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷರಾದ ರವಿಂದ್ರರೆಡ್ಡಿ ಮಾಲಿ ಪಾಟಿಲ್, ತಾಲೂಕಾ ಅಧ್ಯಕ್ಷ ಮುರುಗೆಂದ್ರ ಸಜ್ಜನಶೆಟ್ಟಿ, ಕಿನ್ನರಿ ಬೊಮ್ಮಯ್ಯಾ ಶಿಕ್ಷಣ ಸಂಸ್ಥೆ ಉಪಾಧ್ಯಕ್ಷರಾದ ಸುಭಾಷ ವಾರದ, ಕನ್ನಡ ಸಾಹಿತ್ಯ ಪರಿಷತ್ ತಾಲೂಕಾ ಅಧ್ಯಕ್ಷ ಸಿದ್ದಲಿಂಗ ನಿರ್ಣಾ ಹಾಗೂ ಗೌರಮ್ಮಾ ಬಾಲಕುಂದೆ ಮಾತನಾಡಿದರು. ಬಾಬುರಾವ ಪಾಟೀಲ್, ಭಕ್ತರಾಜ ಚಿತಾಪೂರೆ, ಶಶಿಧರ ಪಾಟೀಲ, ಶ್ರೀಕಾಂತ ಸೂಗಿ, ಜಗನಾಥ ಚಿಕ್ಕಪಾಟೀಲ್, ಶಿವಕುಮಾರ ಕಂಪ್ಲಿ, ಶಿವರಾಜ ಗೋರ್ಟಾ, ಜಯರಾಜ ಹನಮಶೆಟ್ಟಿ, ಕಾಶಿನಾಥ ಸಾಲಿ, ಸಂಗಮೇಶ ಜಂಬಗಿ, ಸಿದ್ರಾಮ ಇಂಡಿ, ರೇವಣಸಿದ್ದಯ್ಯಾ ಮಠಪತಿ, ಶ್ರೀದೇವಿ ಮೋತಕಪಳ್ಳಿ, ಜಯಶ್ರೀ ಕಾಳಗಿ, ಭುವನೇಶ್ವರಿ ಪಾಟೀಲ್, ಪ್ರಾಸ್ತಾವಿಕ ಶ್ರೀಕಾಂತ ಸೂಗಿ, ಸ್ವಾಗತ ಭುವನೇಶ್ವರಿ, ನಿರೂಪಣೆ ಸದಾಶಿವಯ್ಯಾ ಹಿರೆಮಠ, ವಂದನಾರ್ಪಣೆ ನಂದಕುಮಾರ ಮರೂರ ಇದೆ ಸಂದರ್ಭದಲ್ಲಿ ಸಂಘದ ನಿಕಟ ಪೂರ್ವ ಅಧ್ಯಕ್ಷರಿಗೆ ಹಾಗೂ ಗೌರವ ಅಧ್ಯಕ್ಷರಿಗೆ ವಿಶೇಷ ಸನ್ಮಾನ ಮಾಡಲಾಯಿತು.



## ವೈಕುಂಠ ಏಕಾದಶಿ

• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ:

ತಾಲೂಕಿನ ಸೇವಾನಗರ(ತಾಂಡಾ)ದ ಗುಪ್ತೇಶ್ವರ ಅನಂತ ಪದ್ಮನಾಥ ದೇವಸ್ಥಾನದಲ್ಲಿ ವೈಕುಂಠ ಏಕಾದಶಿ ಡಿ.31 ರಿಂದ ಜ.1ರ ವರೆಗೆ ಕೀರ್ತನೆ ಕಾರ್ಯಕ್ರಮ ಜರುಗಲಿವೆ.

ಸಂಜೆ 6ಕ್ಕೆ ಬಾಲಾಜಿ ಮಹಾರಾಜ ಹಳ್ಳಿಕರ್ ಪ್ರವಚನ ನಡೆಸಿ ಕೊಡಲಿದ್ದಾರೆ. ರಾತ್ರಿ 9ಕ್ಕೆ ಕೃಷ್ಣ ಮಹಾರಾಜ ರಾಜುರಕರ್ ಕೀರ್ತನೆ ನಡೆಸಿ ಕೊಡಲಿದ್ದಾರೆ. ಜ.1 ರಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 1 ಗಂಟೆ ವರೆಗೆ ಗಜಾನನ ಮಹಾರಾಜ್ ದಾಪಕೆಕರ್ ಕೀರ್ತನೆ ನಡೆಸಿ ಕೊಡಲಿದ್ದಾರೆ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಪ್ರಕಟಣೆಯಲ್ಲಿ ಮನವಿ ಮಾಡಲಾಗಿದೆ.

## ಸಾರ್ವಜನಿಕರಿಗೆ ವರವಾದ ಎಕ್ಸ್‌ರೆ ತಪಾಸಣಾ ಶಿಬಿರ



• ಮಲ್ಲಮ್ಮ ನುಡಿ ವಾರ್ತೆ ಕಮಲನಗರ:

ತಾಲೂಕಿನ ಠಾಣಾ ಕುಶನೂರ ಪ್ರಾಥಮಿಕ ಆರೋಗ್ಯ ಕೇಂದ್ರ ದ ಚಾಂದೋರಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಹಾಳಹಳ್ಳಿ ಉಪಕೇಂದ್ರ ದಲ್ಲಿ ಠಾಣಾ ಕುಶನೂರ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ಫೈಸಲ್ ಅವರ ಮಾರ್ಗದರ್ಶನದಲ್ಲಿ ಉಚಿತವಾಗಿ ಎಕ್ಸ–ರೇ ತಪಾಸಣಾ ಶಿಬಿರ ಜರುಗಿತು.

ಕಾರ್ಯಕ್ರಮಕ್ಕೆ ಪಿಡಿಒ ಬಸವರಾಜ ಮುರಾಳೆ, ಚಾಲನೆ ನೀಡಿ ಮಾತನಾಡಿದ ಅವರು, ಆರಂಭಿಕ ಹಂತದಲ್ಲಿಯೇ ಕಾಯಿಲೆಗಳನ್ನು (ಉದಾಹರಣೆಗೆ: ಟಿಬಿ, ಶ್ವಾಸಕೋಶದ ಸಮಸ್ಯೆ) ಪತ್ತೆಹಚ್ಚುವುದು ಮತ್ತು ಗ್ರಾಮೀಣ ಜನರಿಗೆ ಆರೋಗ್ಯ ಸೇವೆಗಳನ್ನು ತಲುಪಿಸುವ ಸಲುವಾಗಿ ಎಕ್ಸರೇ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಆದುದರಿಂದ ಈ ಭಾಗದ ಎಲ್ಲಾ ಸಾರ್ವಜನಿಕರು ಈ ಶಿಬಿರದ ಸದುಪಯೋಗ ಪಡೆಯುವಂತೆ ತಿಳಿ ಹೇಳಿದರು.

ಉಚಿತ ಎಕ್ಸರೆ ತಪಾಸಣಾ ಶಿಬಿರದಲ್ಲಿ 80ಕ್ಕೂ ಹೆಚ್ಚು ಸಾರ್ವಜನಿಕರಿಗೆ ತಪಾಸಣೆ ಮಾಡಲಾಯಿತು. ಗ್ರಾಮ ಪಂಚಾಯತ ಅಧ್ಯಕ್ಷೇ ರೇಖಾ ಬಾಯಿ ದಯಾನಂದ್,

ಮನೋಜ್ ಬಿರಾದಾರ್, ನೇತಾಜಿ ಬಿರಾದಾರ್, ಕಿಶನ್ ವಲ್ಲೆಪುರೇ, ಅಮೃತ್ ನಂಜವಾಡೆ, ಎಸ್ ಟಿ ಎಸ್ ಶಿವಕುಮಾರ್, ರಾಹುಲ್, ಸಿ ಎಚ್ ಓ ಸುಧಾರಾಣಿ ,ಎಚ್ ಐ ಓ ವಿಜಯಲಕ್ಷ್ಮಿ, ಆಶಾ ಕಾರ್ಯಕರ್ತೆ ಕಲ್ಪನಾ ಸೇರಿದಂತೆ ಇನ್ನಿತರ ಇದ್ದರು.

## : CITATION :

**IN THE COURT OF THE I ADDL. CIVIL JUDGE AND JMFC., AT HUMNABAD.**

**CRL. MISC. No.2442/2025.**

**Petitioners :**

**1.Mohammed Sultan Ahmed S/o late Mastan Sab,** Age: 49-yrs. Occu: Agriculture.

**2.Sardar Ali S/o late Mastan Sab,** Age: 77-yrs. Occu: Agriculture.

**3.Shah Akhtar Begum D/o late Mastan Sab,** Age: 75-yrs. Occu: Household.

**4. Khaja Bee D/o late Mastan Sab,** Age: 62-yrs. Occu: Household.

**5. Raziya Begum D/o late Mastan Sab,** Age: 60-yrs. Occu: Household.

**6. Fakir Rehana Begum D/o late Mastan Sab,** Age: 57-yrs. Occu: Household.

**7. Latifa Begum D/o late Mastan Sab,** Age: 48-yrs. Occu: Household.

***All R/o Manna-E-Khelli, Tq. Chitguppa. Dist. Bidar.***

**Respondent:**

The Registrar of Birth and Death through the Tahasildar Chitguppa.

***Sub: Petition U/Sec. 13(3) of Birth and Death Registration Act-1969***

Whereas, the above mentioned petitioners have filed the petition under section 13(3) of Birth and Death Registration Act-1969 praying this Honorable Court to issue Death Certificate of Father of petitioner No.1 to 7 by namely LATE. MASTAN SHA S/O MAHEBOOB SHA, he is died on 01.05.1995 at Village Manna-E-Kheli. Tq.Chitguppa. Dist. Bidar. The petitioners claiming the Death Certificate of said for transfer of property and other official purpose and home record.

Therefore, it is hereby proclaimed that if any persons have got any objection in this regard, may approach to this Court on 29.01.2026 at 11.00 AM in person or any authorized pleader to answer such claim otherwise the matter will be heard and determined in your absence as per law.

**Given under my hand and seal of he court, this the 19-12-2025**

**//By order of the court//**

**Chief Ministerial Officer,**

**Prl. Civil Judge & JMFC Court,**

**Humnabad.**


# ವಜ್ರಾಭರಣ ದರೋಡೆ ಪ್ರಕರಣ.

ಮೈಸೂರು ಎಸ್ಪಿ ಡಾ. ವಿಷ್ಣುವರ್ಧನ್ ಪ್ರತಿಕ್ರಿಯೆ.

ಸಿಸಿಟಿವಿ ದೃಶ್ಯಾವಳಿ ಆಧಾರದ ಮೇಲೆ ದರೋಡೆಕೋರ ಚಹರೆ ಗಮಿಸಿದ್ದೇವೆ.

ಅಂದಾಜು 7 ಕೆ.ಜಿ. ಚಿನ್ನಾಭರಣ ದರೋಡೆಯಾಗಿದೆ.

ಅಂಗಡಿ ಮಾಲೀಕರು ಸೇರಿದಂತೆ ಎಲ್ಲಾ ಆಯಾಮಗಳಲ್ಲಿ ತನಿಖೆ ಮಾಡಲಾಗುತ್ತಿದೆ.

ಆರೋಪಿಗಳ ಸೆರೆಗೆ 5 ತಂಡ ರಚನೆ ಮಾಡಲಾಗಿದೆ.

ಐದು ಇನ್ಸ್ಪೆಕ್ಟರ್ ಇರುವ ಐದು ತಂಡಗಳು ತನಿಖೆ ಮಾಡುತ್ತಿವೆ.

ಸ್ಕೈಗೋಲ್ಡ್ ಅಂಡ್ ಡೈಮಂಡ್ ಜ್ಯುಯಲರಿ ಅಂಗಡಿಯಲ್ಲಿ ಬೆಳಗಿನ ಸಂದರ್ಭದಲ್ಲಿ ಸೆಕ್ಯೂರಿಟಿ ಇಡಬೇಕಿತ್ತು. ಆದರೆ ಇರಲಿಲ್ಲ.

ಇವರು ರಾತ್ರಿಯ ವೇಳೆಯಲ್ಲಷ್ಟೇ ಸೆಕ್ಯೂರಿಟಿ ಇಟ್ಟಿದ್ದಾರೆ.

ಘಟನೆ ನಡೆದು 24 ಗಂಟೆಯಾಗಿದೆ.

ಕೆಲವು ತನಿಖೆ ಆಯಾಮಗಳನ್ನ ಮಾಧ್ಯಮಗಳ ಮುಂದೆ ಹೇಳಲು ಸಾಧ್ಯವಿಲ್ಲ.ತನಿಖೆ ಪ್ರಗತಿಯಲ್ಲಿದ್ದು 5 ಮಂದಿ ಇನ್ಸ್‌ಪೆಕ್ಟರ್ ಗಳ ನೇತೃತ್ವದಲ್ಲಿ ತಂಡ ಮಾಡಿದ್ದೇವೆ.

ಆದಷ್ಟು ಬೇಗ ಆರೋಪಗಳನ್ನು ಸೆರೆ ಹಿಡಿಯುತ್ತೇವೆ.ಕಳೆದ 6 ತಿಂಗಳ ಹಿಂದೆ ಹುಣಸೂರಿನ ಎಲ್ಲಾ ಚಿನ್ನಾಭರಣ ಮಾಲೀಕರ ಸಭೆ ಮಾಡಿದ್ದೇವೆ.ಎಲ್ಲರೂ ನಿಯಮ ಪಾಲನೆ ಸೂಚನೆ ನೀಡಿದ್ದೆವು.ಸಾರ್ವಜನಿಕರು, ಗ್ರಾಹಕರ ಸುರಕ್ಷತೆಗೂ ವ್ಯವಸ್ಥೆ ಮಾಡಿಕೊಳ್ಳಲು ಸೂಚನೆ ನೀಡಲಾಗಿತ್ತು.ಈಗ ಅದನ್ನು ಪರಿಶೀಲನೆ ಮಾಡುತ್ತಿದ್ದೇವೆ.

ರಾಬರಿ ಪ್ರಕರಣದ ಬಗ್ಗೆ ಎಸ್ಪಿ ಡಾ. ವಿಷ್ಣುವರ್ಧನ್ ಪ್ರತಿಕ್ರಿಯೆ.

# NEKRTC ಗೆ ಎಸಿ ಬಸ್ ತರಲು ಅರುಣಕುಮಾರ್ ಪಾಟೀಲ್ ಪ್ಲ್ಯಾನ್

- **ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ:**

ಬಿಸಿಲನಾಡಿನ ಪ್ರಯಾಣಿಕರಿಗೆ ಕೂಲ್ ಮಾಡಲು 56 ಎಸಿ ಮತ್ತು ನಾನ್ ಎಸಿ ಬಸ್ ಗಳು ರೋಡ್ ಗೆ ಇಳಿಯಲಿವೆ. ಬೆಂಗಳೂರಿನಲ್ಲಿರುವ ಪ್ರಕಾಶ್ ಬಾಡಿ ಬಿಲ್ಡರ್ ಸಂಸ್ಥೆಯ ಬಸ್ ಬಾಡಿ ಬಿಲ್ಡಿಂಗ್ ಘಟಕಕ್ಕೆ ಎನ್ ಈ ಕೆ ಎಸ್ ಆರ್ ಟಿಸಿ ಅಧ್ಯಕ್ಷ ಅರುಣಕುಮಾರ್ ಎಂ ವೈ ಪಾಟೀಲ್ ಭೇಟಿ ನೀಡಿ ಪರಿಶೀಲಿಸಿದರು.

ಸಂಸ್ಥೆಯ ಅಧ್ಯಕ್ಷ ಆದ ನಂತರ ಕಾಲಿಗೆ ಚಕ್ರ ಕಟ್ಟಿಕೊಂಡು ತಿರುಗುತ್ತಿರುವ ಪಾಟೀಲ್, ಕಲ್ಯಾಣ ಕರ್ನಾಟಕ ಭಾಗದಲ್ಲಿ ಸಾರ್ವಜನಿಕ ಸೇವೆಗೆ ಈ ಬಸ್ ಗಳು ಶೀಘ್ರದಲ್ಲೇ ಸೇರ್ಪಡೆಯಾಗಲಿವೆ. ಒಟ್ಟು 56 ನೂತನ ಎಸಿ ಮತ್ತು ನಾನ್ ಎಸಿ ಸ್ಲೀಪರ್ ಹಾಗೂ ಸೆಮಿ ಸ್ಲೀಪರ್ ಬಸ್‌ಗಳ ನಿರ್ಮಾಣ ಪ್ರಗತಿಯನ್ನು ನಿಕಟವಾಗಿ ಪರಿಶೀಲಿಸಲಾಯಿತು.

ಬಸ್‌ಗಳ ಗುಣಮಟ್ಟ, ಪ್ರಯಾಣಿಕರ ಆರಾಮ, ಆಧುನಿಕ ಸೌಲಭ್ಯಗಳು ಹಾಗೂ ಸುರಕ್ಷತಾ ಮಾನದಂಡಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ, ನಿಗದಿತ ಅವಧಿಯೊಳಗೆ ಉನ್ನತ ಗುಣಮಟ್ಟದಲ್ಲಿ ಕಾರ್ಯ ಪೂರ್ಣಗೊಳಿಸುವಂತೆ ಸಂಸ್ಥೆಯ ಮಾಲೀಕರಿಗೂ ಅಧಿಕಾರಿಗಳಿಗೂ ಸ್ಪಷ್ಟ ಸೂಚನೆ ಪಾಟೀಲ್ ನೀಡಿದ್ದಾರೆ.



ಕಲ್ಯಾಣ ಕರ್ನಾಟಕದ ಜನತೆಗೆ ಸುರಕ್ಷಿತ, ಆರಾಮದಾಯಕ ಹಾಗೂ ವಿಶ್ವಾಸಾರ್ಹ ಸಾರ್ವಜನಿಕ ಸಾರಿಗೆ ಒದಗಿಸುವುದು ಸಂಸ್ಥೆಯ ಗುರಿ ಎಂದು ಹೇಳಲಾಗುತ್ತಿದೆ.

ಹಂತ ಹಂತವಾಗಿ ಶೀಘ್ರದಲ್ಲೇ ಜನಸೇವೆಗೆ ಮತ್ತಷ್ಟು ಆಧುನಿಕ ಬಸ್‌ಗಳು ಕಲ್ಯಾಣ ಕರ್ನಾಟಕ ಭಾಗದ ರಸ್ತೆಗಿಳಿಯಲಿವೆ.

# ಸಿಎಂ ಆಗಮನ ಅರಿಬಿರಿ ವೇಗದ ಕಳಪೆ ಕಾಮಗಾರಿ ಬಲ ಜೋರು



**ವರದಿ ವೀರೇಶ್ ಹೊಸಳ್ಳಿ**

- **ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು:**

ಸಿದ್ದಿ ಪರ್ವತ ಶ್ರೀ. ಅಂಬಾದೇವಿ ಮಹಾತ್ಮೆ ಜಾತ್ರೆ ಮಹೋತ್ಸವಕ್ಕೆ ಸಿಎಂ ಸಿದ್ದರಾಮಯ್ಯ ಆಗಮನ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ನಗರದಲ್ಲಿ ಮತ್ತು ಗ್ರಾಮೀಣ ಮಾರ್ಗವಾಗಿ ಬರುವಂತ ರಸ್ತೆಗಳೆಲ್ಲ ಗುಣಮಟ್ಟದ ಇಲ್ಲದ ಡಾಂಬರೀಕರಣ ಕಳಪೆ ಕಾಮಗಾರಿಗಳು ಕೆಲಸ ಬಲ ಜೋರು ಮಾಡ್ಕೊಂಡು ಹೊರಟಿದ್ದೀರಲ್ಲ ಗುತ್ತಿಗೆದಾರರನ್ನು ಮತ್ತು ಅಧಿಕಾರಗಳನ್ನು.......! (ಹಗಲು ಕಳ್ಳರೆಂದು) ಕರೆಯಬೇಕೆ ಎಂದು ಸಾರ್ವಜನಿಕರ ಪ್ರಶ್ನೆ..,?

ನಗರ ಹಾಗೂ ಗ್ರಾಮೀಣ ಪ್ರದೇಶದಲ್ಲಿ ರಸ್ತೆಗಳು ಅಭಿವೃದ್ಧಿ ಇಲ್ಲದೆ ದೂಳಿನ ಅಭ್ಯಂಜನ ಸ್ನಾನ ಮಾಡಿದಂತೆ. ಇಷ್ಟುದಿನ ರಸ್ತೆಗಳಲ್ಲಿ ದೊಡ್ಡ ದೊಡ್ಡ ತಗ್ಗುಗಳು ಬಿದ್ದಿರುವುದು ಅಧಿಕಾರಿಗಳು ಕಣ್ಣಿಗೆ ಕಾಣಲಿಲ್ಲವೇ ....? ಈಗ ಸಿಎಂ ಸಿದ್ದರಾಮಯ್ಯ ಬರುವ ನೆಪದಲ್ಲಿ ಅಧಿಕಾರಿಗಳು ಕಣ್ಣಿಗೆ ಎಣ್ಣೆ ಬಿಟ್ಟುಕೊಂಡು ಗಾಢ ನಿದ್ರೆಯಲ್ಲಿ ಅರಬಿರಿ ಕಳಪೆ ಕಾಮಗಾರಿಗಳು ಕೆಲಸ ವಿವಿಧ ಇಲಾಖೆಗಳು ತಮಗೆ ಇಷ್ಟಬಂದಂತೆ ಮಾಡುತ್ತಿದ್ದಾರೆ. ಆದರೆ ಸಿಂಧನೂರು ವಿಧಾನ ಸಭಾ ಕ್ಷೇತ್ರದಲ್ಲಿ ಆಡಳಿತ ಪಕ್ಷದ ದಾರಿ ತಪ್ಪಿದಾಗ. ವಿರುದ್ಧ ಧ್ವನಿ ಎತ್ತುವ ಕೆಲಸ ವಿರೋಧ ಪಕ್ಷದ ನಾಯಕರುಗಳು ಕೆಲಸವಾಗಿದೆ. ಆದರೆ ಇಲ್ಲಿ ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂಬಂತಾಗಿದೆ.ಆಡಳಿತ ಪಕ್ಷದ ತಾಳಕ್ಕೆ ತಕ್ಕಂತೆ ವಿರೋಧ ಪಕ್ಷದ ನಾಯಕರು ಕುಣಿಯುತ್ತಾರೆ.ಎಂದು ಸಾರ್ವಜನಿಕರು ಆಕ್ರೋಶವನ್ನು ವ್ಯಕ್ತಪಡಿಸಿದರು.

ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರ ವತಿಯಿಂದ ಗಾಂಧಿ ಸರ್ಕಲ್ ದಿಂದ ನಗರದ ಬಸವ ಸರ್ಕಲ್ ತನಕ ಮಾರ್ಗವಾಗಿ ಅಂದಾಜು ಸರಿ ಸುಮಾರು 01 ಕೋಟಿ 55 ಲಕ್ಷ ರೂಪಾಯಿ ವೆಚ್ಚದಲ್ಲಿ 800 ಮೀಟರ್ ವರೆಗೆ ಈ ಮುಖ್ಯರಸ್ತೆ ಡಾಂಬರೀಕರಣ ಕಾಮಗಾರಿಗಳು ಕೆಲಸ ಬೇಕಾಬಿಟ್ಟಿ ಸರ್ಕಾರದ ಎಸ್ಟಿಮೇಟ್ ನಿಯಮಗಳನ್ನು ಗಾಳಿಗೆ ತೂರಿ ರಸ್ತೆಗಳು ಗುಣಮಟ್ಟ ಇಲ್ಲದೆ ಅರಬರಿ ಡಾಮರೀಕರಣ ಕಾಮಗಾರಿ ನಡೆಯುತ್ತಿದೆ ಎನ್ನುವ ವೇದಾಂತ ನಗರ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಹರಿದಾಡುತ್ತಿದೆ. ಯಾವುದೇ ಕಾಮಗಾರಿಗಳು ಕೆಲಸ ನಡೆಸಬೇಕಾದರೆ. ಸ್ಥಳದಲ್ಲಿ ಸಂಬಂಧಿಸಿ ಅಧಿಕಾರಿಗಳು ಅಥವಾ ಸಿಬ್ಬಂದಿ ವರ್ಗದವರು ಹಾಜರಿರುತ್ತಾರೆ. ಆದರೆ ಇಲ್ಲಿ ಯಾವ ಅಧಿಕಾರಿಗಳೂ ಇಲ್ಲದೆ ಎಲ್ಲರೂ ಮಾಯವಾಗಿದ್ದಾರೆ ಎಂದರೆ.

ಗುಣಮಟ್ಟದ ಕಾಮಗಾರಿಗಳ ಮರೆಮಾಚುವ ಕೆಲಸವಾಗಿದೆ ಎಂದು ಸಾರ್ವಜನಿಕರು ಮಾತನಾಡುವ ಮಾತುಗಳಲ್ಲೇ ಕೇಳಿಬರುತ್ತಿದೆ.ಸಿಎಂ ಸಿದ್ದರಾಮಯ್ಯ ಆಗಮನ ಹಿನ್ನೆಲೆಯಲ್ಲಿ ಒಟ್ಟಾರೆ ಕಾಮಗಾರಿಗಳು ಕೆಲಸ ಅತಿವೇಗವನ್ನು ಪಡೆದುಕೊಂಡಿದ್ದು.ಸರ್ಕಾರದ ಅನುದಾನ ದುರ್ಬಳಿಕೆ ಆಗುತ್ತಿರುವುದಂತೂ ಖಂಡಿತ ಇದನ್ನು ಅರಿತು ಜನಪ್ರತಿನಿಧಿಗಳು ಹಾಗೂ ಮೇಲಾಧಿಕಾರಿಗಳು ಗುಣಮಟ್ಟದ ಕಾಮಗಾರಿಗಳು ಕೆಲಸ ಅನುಷ್ಠಾನಕ್ಕೆ ತರಲು ಮುಂದಾಗುತ್ತೋರು ಅಥವಾ ಎಲ್ಲವೂ ಕಾದು ನೋಡಬೇಕಾಗಿದೆ ಕಾದು ನೋಡಬೇಕಾಗಿದೆ.


## : CITATION :

**IN THE COURT OF THE I ADDL. CIVIL JUDGE AND JMFC., AT HUMNABAD.**

**CRL. MISC. No.4461/2025.**

**Petitioners:**

**1.Mohammed Khalil S/o late Mohammed Ataulla,** Age: 69-yrs. Occu: Agriculture. R/o Kunabi Wada Near Nabikhana Chitguppa.

**2.Badarannisa D/o late Mohammed Ataulla,** W/o Abdul Samad, Age: 70-yrs. Occu: Household. R/o Chitguppa. Now at Fatey Manzil Wadi Chitapur.

**3.Rabiya Begum W/o late Rahematulla,** Age: 68-yrs. Occu: Household. R/o Kunabi Wada Near Nabikhana Chitguppa.

**4.Khatib Sajedabanu W/o late Khatib Majrulla,** Age: 62-yrs. Occu: House hold. R/o Chitguppa. Now at Umarwada Surat Gujrat.

**5.Khateeb Zakerabegum W/o late Zafarullah,** Age: 63-yrs. Occu: House hold. R/o Chitguppa. Now at Umarwada Surat Gujrat.

**6.Gurmitkal Aktar Begum W/o late Mohammed** Kaleem, Age: 51-yrs. Occu:Household. R/o Chitguppa. Now at Maheboob Nagar-AP.

**Respondent:**

The Registrar of Birth and Death through the Chief officer TMC Chitguppa.

***Sub: Petition U/Sec. 13(3) of Birth and Death Registration Act-1969***

Whereas, the above mentioned petitioners have filed the petition under section 13(3) of Birth and Death Registration, Act-1969 praying this Honorable Court to issue Death Certificate of Grand Son and Daughter of petitioner No.1 and 2 and Grand Father in law of petitioner No.3 to 6 by namely LATE. BIKKU MIYAN S/O MOHD AKBAR, he was died on 02.02.1972 at our house of Town, Chitguppa. Dist. Bidar. The petitioners claiming the Death Certificate of said for transfer of property and other official purpose and home record.

Therefore, it is hereby proclaimed that if any persons have got any objection in this regard, may approach to this Court on 29.01.2026 at 11.00 AM in person or any authorized pleader to answer such claim otherwise the matter will be heard and determined in your absence as per law.

**Given under my hand and seal of he court, this the 26-12-2025**

**//By order of the court//**

**Chief Ministerial Officer,**

**Prl. Civil Judge & JMFC Court,**

**Humnabad.**

## : CITATION :

**IN THE COURT OF THE I ADDL. CIVIL JUDGE AND JMFC., AT HUMNABAD.**

**CRL. MISC. No.4459 /2025.**

**Petitioners:**

**1.Mohammed Khalil S/o late Mohammed Ataulla,** Age: 69-yrs. Occu: Agriculture. R/o Kunabi Wada Near Nabikhana Chitguppa.

**2.Badarannisa D/o late Mohammed Ataulla, W/o Abdul Samad,** Age: 70-yrs. Occu: Household. R/o Chitguppa. Now at Fatey Manzil Wadi Chitapur.

**3.Rabiya Begum W/o late Rahematulla,** Age: 68-yrs. Occu: Household. R/o Kunabi Wada Near Nabikhana Chitguppa.

**4.Khatib Sajedabanu W/o late Khatib Majrulla,** Age: 62-yrs. Occu: House hold. R/o Chitguppa. Now at Umarwada Surat Gujrat.

**5.Khateeb Zakerabegum W/o late Zafarullah,** Age: 63-yrs. Occu: House hold. R/o Chitguppa. Now at Umarwada Surat Gujrat.

**6.Gurmitkal Aktar Begum W/o late Mohammed Kaleem,** Age: 51-yrs. Occu: Household. R/o Chitguppa. Now at Maheboob Nagar-AP.

**Respondent:**

The Registrar of Birth and Death through the Chief officer TMC Chitguppa.

***Sub: Petition U/Sec. 13(3) of Birth and Death Registration Act-1969***

Whereas, the above mentioned petitioners have filed the petition under section 13(3) of Birth and Death Registration Act-1969 praying this Honorable Court to issue Death Certificate of Grand Son and Daughter of petitioner No.1 and 2 and Grand Mother in law of petitioner No.3 to 6 by namely LATE. SAJJAN BEE W/O BIKKU MIYAN, she was died on 01.06.1970 at our house of Town, Chitguppa. Dist. Bidar. The petitioners claiming the Death Certificate of said for transfer of property and other official purpose and home record.

Therefore, it is hereby proclaimed that if any persons have got any objection in this regard, may approach to this Court on 29.01.2026 at 11.00 AM in person or any authorized pleader to answer such claim otherwise the matter will be heard and determined in your absence as per law.

**Given under my hand and seal of he court, this the 26-12-2025**

**//By order of the court//**

**Chief Ministerial Officer,**

**Prl. Civil Judge & JMFC Court,**

**Humnabad.**

## : CITATION :

**IN THE COURT OF THE I ADDL. CIVIL JUDGE AND JMFC., AT HUMNABAD.**

**CRL. MISC. No.4462 /2025.**

**Petitioners:**

**1.Mohammed Khalil S/o late Mohammed Ataulla,** Age: 69-yrs. Occu: Agriculture. R/o Kunabi Wada Near Nabikhana Chitguppa.

**2.Badarannisa D/o late Mohammed Ataulla, W/o Abdul Samad,** Age: 70-yrs. Occu: Household. R/o Chitguppa. Now at Fatey Manzil Wadi Chitapur.

**3.Rabiya Begum W/o late Rahematulla,** Age: 68-yrs. Occu: Household. R/o Kunabi Wada Near Nabikhana Chitguppa.

**4.Khatib Sajedabanu W/o late Khatib Majrulla,** Age: 62-yrs. Occu: House hold. R/o Chitguppa. Now at Umarwada Surat Gujrat.

**5.Khateeb Zakerabegum W/o late Zafarullah,** Age: 63-yrs. Occu: House hold. R/o Chitguppa. Now at Umarwada Surat Gujrat.

**6.Gurmitkal Aktar Begum W/o late Mohammed Kaleem,** Age: 51-yrs. Occu: Household. R/o Chitguppa. Now at Maheboob Nagar-AP.

**Respondent:**

The Registrar of Birth and Death through the Chief officer TMC Chitguppa.

***Sub: Petition U/Sec. 13(3) of Birth and Death Registration Act-1969***

Whereas, the above mentioned petitioners have filed the petition under section 13(3) of Birth and Death Registration Act-1969 praying this Honorable Court to issue Death Certificate of Father of petitioner No.1 and 2 and Father in law of petitioner No.3 to 6 by namely LATE. MOHAMMED ATAULLA S/O MOHD. BIKKU MIYAN, he was died on 04.04.1992 at our house of Town, Chitguppa. Dist. Bidar. The petitioners claiming the Death Certificate of said for transfer of property and other official purpose and home record.

Therefore, it is hereby proclaimed that if any persons have got any objection in this regard, may approach to this Court on 29.01.2026 at 11.00 AM in person or any authorized pleader to answer such claim otherwise the matter will be heard and determined in your absence as per law.

**Given under my hand and seal of he court, this the 26-12-2025**

**//By order of the court//**

**Chief Ministerial Officer,**

**Prl. Civil Judge & JMFC Court,**

**Humnabad.**

## : CITATION :

**IN THE COURT OF THE I ADDL. CIVIL JUDGE AND JMFC., AT HUMNABAD.**

**CRL. MISC. No.4460 /2025.**

**Petitioners:**

**1.Mohammed Khalil S/o late Mohammed Ataulla,** Age: 69-yrs. Occu: Agriculture. R/o Kunabi Wada Near Nabikhana Chitguppa.

**2.Badarannisa D/o late Mohammed Ataulla, W/o Abdul Samad,** Age: 70-yrs. Occu: Household. R/o Chitguppa. Now at Fatey Manzil Wadi Chitapur.

**3.Rabiya Begum W/o late Rahematulla,** Age: 68-yrs. Occu: Household. R/o Kunabi Wada Near Nabikhana Chitguppa.

**4.Khatib Sajedabanu W/o late Khatib Majrulla,** Age: 62-yrs. Occu: House hold. R/o Chitguppa. Now at Umarwada Surat Gujrat.

**5.Khateeb Zakerabegum W/o late Zafarullah,** Age: 63-yrs. Occu: House hold.R/o Chitguppa. Now at Umarwada Surat Gujrat.

**6.Gurmitkal Aktar Begum W/o late Mohammed Kaleem,** Age: 51-yrs. Occu: Household. R/o Chitguppa. Now at Maheboob Nagar-AP.

**Respondent:**

The Registrar of Birth and Death through the Chief officer TMC Chitguppa.

***Sub: Petition U/Sec. 13(3) of Birth and Death Registration Act-1969***

Whereas, the above mentioned petitioners have filed the petition under section 13(3) of Birth and Death Registration Act-1969 praying this Honorable Court to issue Death Certificate of Mother of petitioner No.1 and 2 and Mother in law of petitioner No.3 to 6 by namely LATE. NAJMUNNISA BEGUM W/O MOHAMMED ATAULLA, she was died on 01.10.1992 at our house of Town, Chitguppa. Dist. Bidar. The petitioners claiming the Death Certificate of said for transfer of property and other official purpose and home record.

Therefore, it is hereby proclaimed that if any persons have got any objection in this regard, may approach to this Court on 29.01.2026 at 11.00 AM in person or any authorized pleader to answer such claim otherwise the matter will be heard and determined in your absence as per law.

**Given under my hand and seal of he court, this the 26-12-2025**

**//By order of the court//**

**Chief Ministerial Officer,**

**Prl. Civil Judge & JMFC Court,**

**Humnabad.**

# ಕರಾವಳಿ ಉತ್ಸವದಲ್ಲಿ ಪ್ರಾಣಿಪ್ರಿಯರನ್ನು ಆಕರ್ಷಿಸಿದ ಶ್ವಾನ ಪ್ರದರ್ಶನ





• **ಮಲ್ಲಮ್ಮ ನುಡಿ ವಾರ್ತೆ, ಕಾರವಾರ:**

ಕರಾವಳಿ ಉತ್ಸವದ ಅಂಗವಾಗಿ ಕಾರವಾರದ ಮಾಲಾದೇವಿ ಮೈದಾನದಲ್ಲಿ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಪಶುಪಾಲನಾ ಇಲಾಖೆವತಿಯಿಂದ ಶನಿವಾರ ಆಯೋಜಿಸಿದ್ದ ಶ್ವಾನ ಪ್ರದರ್ಶನದಲ್ಲಿ, ಲ್ಯಾಬ್ರಾಡರ್, ಜರ್ಮನ್ ಶೆಪರ್ಡ್, ಗೋಲ್ಡನ್ ರಿಟ್ರಿವರ್, ಮುಧೋಳ ಹೌಂಡ್, ಪೊಮೇರಿಯನ್, ವೇನಸ್ ಕಾರ್ಗಿ, ರಾಜ ಪಾಳ್ಯಮ್, ಬೆಲ್ಜಿಯನ್ ಮೆಲಿನಯ್ಸ್ ಸೇರಿದಂತೆ ವಿವಿಧ ತಳಿಯ ನಾಯಿಗಳು ಹಾಗೂ ಜಿಲ್ಲಾ ಪೊಲೀಸ್ ಇಲಾಖೆ ಮತ್ತು ಕೈಗಾದ ಕೈಗಾರಿಕಾ ಭದ್ರತಾ ಪಡೆ-ಯ ಶ್ವಾನಗಳು ತಮ್ಮ ಸಾಹಸ, ಬುದ್ದಿವಂತಿಕೆ ಮತ್ತು ಕೌಶಲ್ಯವನ್ನು ಪ್ರದರ್ಶಿಸಿ, ನೆರೆದಿದ್ದ ನೂರಾರು ಸಂಖ್ಯೆಯ ಸಾರ್ವಜನಿಕರನ್ನು ಆಶ್ಚರ್ಯಚಕಿತಗೊಳಿಸಿದವು.

ಪೊಲೀಸ್ ಇಲಾಖೆಯ ಶೈನಿ, ಮಾರ್ವೆಲ್ ಮತ್ತು ಅಖಿರ ಹೆಸರಿನ ಶ್ವಾನಗಳು ಶಿಸ್ತಿನ ಆದೇಶಗಳನ್ನು ಪ್ರದರ್ಶಿಸಿದರೆ ಮತ್ತು ಕೈಗಾರಿಕಾ ಭದ್ರತಾ ಪಡೆಯ ಐರಾ, ಅಭಯ್ ಮತ್ತು ಭೈರವ ಶ್ವಾನಗಳು ರೋಮಾಂಚಕ ಸಾಹಸ ಚಟುವಟಿಕೆಗಳನ್ನು ಪ್ರದರ್ಶಿಸುವ ಮೂಲಕ ಸಾರ್ವಜನಿರ ಮೆಚ್ಚುಗೆಗೆ ಪಾತ್ರವಾದವು, ಈ ಎರಡೂ ಇಲಾಖೆಗಳ ಶ್ವಾನಗಳಿಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ದೀಪನ್ ಎಂ.ಎನ್. ರೂ. 10,000 ಗಳ ನಗದು ಬಹುಮಾನ ನೀಡಿ, ಅಭಿನಂದಿಸಿದರು.

ಬೆಂಗಳೂರಿನಿಂದ ಆಗಮಿಸಿದ್ದ ಕುಮಾರ್ ಅವರ 2 ಶ್ವಾನಗಳು ವಿವಿಧ ಆಕರ್ಷಕ ಬುದ್ದಿವಂತ ಚಟುವಟಿಕೆಗಳನ್ನು ಪ್ರದರ್ಶಿಸುವ ಮೂಲಕ ಸಾರ್ವಜನಿಕರ ಪ್ರಶಂಸೆಗೆ ಪಾತ್ರವಾದವು.

ಶ್ವಾನ ಪ್ರದರ್ಶನದಲ್ಲಿ ಜಿಲ್ಲೆಯ ಮತ್ತು ಹೊರ ಜಿಲ್ಲೆಯ ಶ್ವಾನಗಳು ಭಾಗವಹಿಸಿದ್ದು, ಚಾಂಪಿಯನ್ ವಿಭಾಗದಲ್ಲಿ ವಿಜೇತವಾದ ಶ್ವಾನಗಳಿಗೆ ಮತ್ತು ಪ್ರತಿ ವಿಭಾಗದಲ್ಲೂ ವಿಜೇತವಾದ ಶ್ವಾನಗಳಿಗೆ ಬಹುಮಾನ ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ನಾಯಿಗಳನ್ನು ಆರೋಗ್ಯಕರವಾಗಿ ಪೋಷಣೆ ಮಾಡುವ ಬಗ್ಗೆ, ಅವುಗಳಿಗೆ ಅಗತ್ಯ ಲಸಿಕೆಗಳನ್ನು ನೀಡುವ ಬಗ್ಗೆ ಪಶು ವೈದ್ಯರು ಮಾಹಿತಿಯನ್ನು ನೀಡಿದರು, ದೇಶಿ ತಳಿಯ ನಾಯಿ ಮರಿಗಳನ್ನು ಉಚಿತವಾಗಿ ದತ್ತು ನೀಡಲು ಸೌಲಭ್ಯ ಕಲ್ಪಿಸಲಾಗಿತ್ತು.

ಶ್ವಾನಗಳ ಸ್ಪರ್ಧೆಯಲ್ಲಿ ಸುನೀಲ್ ಉಡಾಡಿ ಅವರ ಜರ್ಮನ್ ಶೆಫರ್ಡ್ ಶ್ವಾನಕ್ಕೆ ಪ್ರಥಮ ಬಹುಮಾನ ರೂ.25,000, ವೆಂಕಪ್ಪ ನವಲಗಿ ಮುಧೋಳ ಅವರ ಮುಧೋಳ ತಳಿ ಶ್ವಾನಕ್ಕೆ ದ್ವಿತೀಯ ಬಹುಮಾನ ರೂ.15,000 ಮತ್ತು ಸುಹಾಸ್ ದಾವಣಗೆರೆ ಅವರ ಬೀಗಲ್ ತಳಿ ಶ್ವಾನಕ್ಕೆ ತೃತೀಯ ಬಹುಮಾನವಾಗಿ ರೂ.10,000 ನೀಡಲಾಯಿತು.

ಶ್ವಾನ ಪ್ರದರ್ಶನಕ್ಕಾಗಿ ಒಟ್ಟು 118 ಸಂಖ್ಯೆಯ 25 ತಳಿಗಳ ಶ್ವಾನಗಳನ್ನು ನೋಂದಣಿ ಮಾಡಲಾಗಿದ್ದು, ಸ್ಪರ್ಧೆಗೆ 21 ತಳಿಗಳ 52 ನಾಯಿಗಳು ಭಾಗವಹಿಸಿದ್ದು, ಶ್ವಾನ ಮರಿಗಳ ವಿಭಾಗದಲ್ಲಿ 11 ಶ್ವಾನಗಳು ಭಾಗವಹಿಸಿದ್ದವು.

ಜಿಲ್ಲಾಧಿಕಾರಿ ಕೆ.ಲಕ್ಷ್ಮೀಪ್ರಿಯಾ, ಜಿಲ್ಲಾ ಪಂಚಾಯತ್ ಸಿಇಓ ಡಾ.ದಿಲೀಷ್ ಶಶಿ, ಅಪರ ಜಿಲ್ಲಾಧಿಕಾರಿ ಸಾಜಿದ್ ಮುಲ್ಲಾ, ಪಶುಪಾಲನೆ ಇಲಾಖೆಯ ಉಪನಿರ್ದೇಶಕ ಡಾ.ಮೋಹನ್ ಕುಮಾರ್, ಜಿ.ಪಂ. ಮುಖ್ಯ ಲೆಕ್ಕಾಧಿಕಾರಿ ಆನಂದಸಾಹಬೀಬ್ ಹಾಗೂ ಪಶುಪಾಲನಾ ಇಲಾಖೆಯ ಅಧಿಕಾರಿಗಳು ಶ್ವಾನ ಪ್ರದರ್ಶನವನ್ನು ವೀಕ್ಷಿಸಿ, ಬಹುಮಾನ ವಿತರಿಸಿದರು.

# ನೌಕಾನೆಲೆಗೆ ಭೇಟಿ ನೀಡಿದ ರಾಷ್ಟ್ರಪತಿಗಳು



• **ಮಲ್ಲಮ್ಮ ನುಡಿ ವಾರ್ತೆ, ಕಾರವಾರ:**

ಕಾರವಾರದ ಕದಂಬ ನೌಕಾನೆಲೆಗೆ ಭಾನುವಾರ ಆಗಮಿಸಿದ ಗೌರವಾನ್ವಿತ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ರಾಜ್ಯಪಾಲ ಥಾವರ್ ಚಂದ್ ಗೆಹಲೋಟ್, ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲ ಸಾರಿಗೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ಎಸ್ ವೈದ್ಯ ಸ್ವಾಗತಿಸಿದರು.

ನಂತರ ಗೌರವಾನ್ವಿತ ರಾಷ್ಟ್ರಪತಿ ಅವರು ನೌಕಾಪಡೆಯ ಐ.ಎನ್.ಎಸ್. ವಾಗ್‌ಶೀರ್ ಜಲಾಂತರ್ಗಾಮಿ ನೌಕೆಯಲ್ಲಿ ಸಮುದ್ರದಲ್ಲಿ ಪ್ರಯಾಣಿಸಿದರು.

ಈ ಸಂದರ್ಭದಲ್ಲಿ ಪ್ರಾದೇಶಿಕ ಆಯುಕ್ತೆ ಜಾನಕಿ, ಜಿಲ್ಲಾಧಿಕಾರಿ ಕೆ. ಲಕ್ಷ್ಮೀಪ್ರಿಯಾ. ಎಡಿಜಿಪಿ ಹಿತೇಂದ್ರ, ಐಜಿಪಿ ಅಮಿತ್ ಸಿಂಗ್, ಎಸ್ಪಿ ದೀಪನ್ ಎಂ. ಎನ್. ಹಾಗೂ ಚೀಫ್ ಆಫ್ ದ ನೇವಲ್ ಸ್ಟಾಫ್ ಅಡ್ಮಿರಲ್ ದಿನೇಶ್ ಕುಮಾರ್ ತ್ರಿಪಾಟಿ, ಕಾರವಾರ ನೇವಲ್ ಬೇಸ್ ನ ಫ್ಲಾಗ್ ಆಫೀಸರ್ ಕಮಾಂಡಿಂಗ್ ರಿಯರ್ ಅಡ್ಮಿರಲ್ ವಿಕ್ರಂ ಮೆನನ್ ಹಾಗೂ ನೌಕಾಪಡೆಯ ಹಿರಿಯ ಅಧಿಕಾರಿಗಳು ಇದ್ದರು.

# ಶಾಂತರಾಮ ಹಿಚಕಡ ನಾಯಕರಿಗೆ ಸನ್ಮಾನ




ಅಂಕೋಲಾ :ಆದರ್ಶ ಶಿಕ್ಷಕ, ಕವಿ, ಭಾವಜೀವಿಯಾಗಿರುವ ಶಾಂತಾರಾಮ ನಾಯಕರಿಗೆ ಪ್ರತಿಷ್ಠಿತ ಕರ್ನಾಟಕ ಸಂಘದ ಸ.ಪ. ಗಾಂವಕರ ದತ್ತಿ ಪ್ರಶಸ್ತಿ ಬಂದಿರುವುದು ನಮಗೆಲ್ಲಾ ಸಂತಸತಂದಿದೆ. ಶಾಂತಾರಾಮ ಸರ್ ಪರಿಪೂರ್ಣ ಶಿಕ್ಷಕರಾಗುವ ಜೊತೆ ಸಾಮಾಜಿಕ ಪ್ರಜ್ಞೆ ಹಾಗೂ ಹೊಣೆಗಾರಿಕೆಯುಳ್ಳ ವ್ಯಕ್ತಿಯಾಗಿ ನಮಗೆಲ್ಲಾ ಆದರ್ಶಪ್ರಾಯರಾಗಿದ್ದಾರೆಂದು ಕೆನರಾ ವೆಲ್‌ಫರ್ ಟ್ರಸ್ಟಿನ ಆಡಳಿತಾಧಿಕಾರಿ ಹಾಗೂ ದಿನಕರ ವೇದಿಕೆಯ ಸ್ಥಾಪಕ ಅಧ್ಯಕ್ಷ ಶ್ರೀ ರವೀಂದ್ರ ಕೇಣಿ ಹೇಳಿದರು. ಅವರು ಸಾಹಿತಿ ಶಾಂತಾರಾಮ ನಾಯಕರನ್ನು ಹಿಚಕಡದ ಅವರ ಮನೆಯಂಗಳದಲ್ಲಿ ದಿನಕರ ವೇದಿಕೆಯ ಪರವಾಗಿ ಸನ್ಮಾನಿಸಿ ಮಾತನಾಡುತ್ತಿದ್ದರು.

ಎಲ್ಲರನ್ನೂ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದ ದಿನಕರ ವೇದಿಕೆಯ ಕಾರ್ಯದರ್ಶಿ ಸಂದೇಶ ಉಳ್ಳೆಕಾಶಿ, ಶಾಂತಾರಾಮ ನಾಯಕ ಸರ್ ಅವರು ಶಿಕ್ಷಕ ವೃತ್ತಿಜೀವನ ಪ್ರಾರಂಭಿಸಿದ್ದು ಪಿ.ಎಂ. ಹೈಸ್ಕೂಲಿನಿಂದ ಎಂಬುದು ನಮಗೆಲ್ಲಾ ಹೆಮ್ಮೆಯ ಸಂಗತಿಯಾಗಿದೆ ಎಂದರು. ಅವರು ಬದುಕು ಬರಹದಲ್ಲಿ ಸಮನ್ವಯತೆ ಸಾಧಿಸಿದವರು. ಸನ್ಮಾನ ಸ್ವೀಕರಿಸಿ ಮಾತನಾಡಿದ ಶಾಂತರಾಮ ಸರ್ ಪ್ರಶಸ್ತಿಗಳಿಗಿಂತ ತಮ್ಮೆಲ್ಲರ ಪ್ರೀತಿ ವಿಶ್ವಾಸ ನನಗೆ ದೊಡ್ಡದೆಂದರು.

ಆತ್ಮೀಯ ವಾತಾವರಣದಲ್ಲಿ ಜರುಗಿದ ಈ ಕಾರ್ಯಕ್ರಮವನ್ನು ನಿವೃತ್ತ ಶಿಕ್ಷಕ ಎಂ.ಎಂ. ಕರ್ಕಿಕರ ಹಾಗೂ ಲೇಖಕ ಮಹಾಂತೇಶ ರೇವಡಿ ಸಂಘಟಿಸಿದರು. ಪದಾಧಿಕಾರಿಗಳಾದ ಶ್ರೀಧರ ನಾಯ್ಕ ವಂದಿಸಿದರು. ಈ ಸಂದರ್ಭದಲ್ಲಿ ಎನ್.ವಿ. ರಾಠೋಡ, ರೋಶನ್ ಕೇಣಿ, ಪ್ರದೀಪ ನಾಯಕ, ಮಹೇಶ ನಾಯಕ, ದಿಪ್ತಿ ನಾಯಕ, ಶಾಂತಾರಾಮ ನಾಯಕ ಸರ್ ಕುಟುಂಬ ವರ್ಗದವರು ಹಾಗೂ ಊರ ನಾಗರಿಕರು ಉಪಸ್ಥಿತಿರಿದ್ದರು.

# ಗಣಿಗಾರಿಕೆಗಾಗಿ ಅರಣ್ಯ ಪ್ರದೇಶದಲ್ಲಿ ದಾರಿ

ಫೋಟೋ : 29ಅಂಕೋಲಾ5

ಅಂಕೋಲಾ: ಚಿರೆಕಲ್ಲು ಗಣಿಗಾರಿಕೆ ನಡೆಸಲು ಅರಣ್ಯ ಇಲಾಖೆಯ ಜಾಗದಲ್ಲಿ ರಸ್ತೆಯನ್ನು ಮಾಡಿಕೊಂಡು ಸಂಚರಿಸುತ್ತಿರುವದರಿಂದ ಸ್ಥಳೀಯರು ಲೋಕಾಯುಕ್ತಕ್ಕೆ ದೂರು ನೀಡಿದ್ದರು. ಅದರಂತೆ ಹೊನ್ನಾವರ ಡಿಸಿಎಫ್ ಅವರು ಸ್ಥಳಕ್ಕೆ ಆಗಮಿಸಿದಾಗ ಸ್ಥಳೀಯರು ಪ್ರತಿಭಟನೆ ನಡೆಸಿದ ಘಟನೆ ಭಾನುವಾರ ಸಂಜೆ ಸಗಡಗೇರಿ ಗ್ರಾ.ಪಂ. ವ್ಯಾಪ್ತಿಯ ದೇವಿಗದ್ದೆಯಲ್ಲಿ ನಡೆದಿದೆ.

ಕಳೆದ ನಾಲ್ಕು ವರ್ಷಗಳಿಂದ ಚಿರೆಕಲ್ಲು ಗಣಿಗಾರಿಕೆ ನಡೆಸಲಾಗುತ್ತಿದೆ. ಅದಕ್ಕೆ ಕೆಲವೊಮ್ಮೆ ಸ್ಫೋಟಕಗಳನ್ನು ಬಳಸಬೇಕಾಗಿರುವುದರಿಂದ ಅದರ ತೀವ್ರತೆಗೆ ಮನೆಯ ಗೋಡೆಗಳು ಬಿರುಕು ಬಿಡುತ್ತಿವೆ. ಹೀಗಾಗಿ ಯದರ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ಮನವಿ ಸಲ್ಲಿಸಲಾಗಿತ್ತು. ಅರಣ್ಯ ಇಲಾಖೆಯ ಪ್ಲೆಂಟೆಶನ್ ಪ್ರದೇಶದಲ್ಲಿ ನೀಡಲಾದ ಗೇರು ಗಿಡಗಳನ್ನು ತೆಗೆದು ರಸ್ತೆ ನಿರ್ಮಿಸಿದ್ದರು. ಇದರಿಂದಾಗಿ ಲೋಕಾಯುಕ್ತಕ್ಕೆ ದೂರು ನೀಡಬೇಕಾಯಿತು. ಲೋಕಾಯುಕ್ತರು ವರದಿ ಸಲ್ಲಿಸುವಂತೆ ಡಿಸಿಎಫ್‌ಗೆ ವಿವರಣೆ ಕೇಳಿದ್ದರಿಂದಾಗಿ ಸ್ವತಃ ಅವರೇ ಸ್ಥಳಕ್ಕೆ ಖುದ್ದಾಗಿ ಆಗಮಿಸಿದ್ದರು.

ಅತಿಕ್ರಮಣ ಮಾಡಿಕೊಂಡು ವಾಸಿಸುವ ಸಣ್ಣಪುಟ್ಟ ಜನರಿಗೆ ಅರಣ್ಯ ಇಲಾಖೆಯವರು ದೌರ್ಜನ್ಯ ನಡೆಸುತ್ತಿದ್ದಾರೆ. ಆದರೆ ರಾಜಾರೋಷವಾಗಿ 40 ರಿಂದ 50 ಟನ್ ಕಲ್ಲುಗಳನ್ನು ಸಾಗಾಟ ಮಾಡುತ್ತಿದ್ದರು. ಇಲಾಖೆ ಕೈಕಟ್ಟಿ ಕುಳಿತಿರುವ ಹಿಂದಿನ ಮರ್ಮವೇನು ಎಂದು ಸ್ಥಳೀಯರು ಅಧಿಕಾರಿಗಳಿಗೆ ತರಾಟೆಗೆ ತೆಗೆದುಕೊಂಡಿದ್ದಾರೆ.



ಡಿಸಿಎಫ್ ರವಿಶಂಕರ ಮಾತನಾಡಿ, ಈ ಬಗ್ಗೆ ಸಮಗ್ರವಾಗಿ ಪರಿಶೀಲನೆ ನಡೆಸಿ ಕ್ರಮ ಕೈಗೊಳ್ಳಲಾಗುವುದು ಯಾರೇ ತಪ್ಪು ಮಾಡಿದರೂ ಅಂತವರ ಬಗ್ಗೆ ಮೂಲಾಜಿಲ್ಲದೇ ಕ್ರಮ ತೆಗೆದುಕೊಳ್ಳುತ್ತೇವೆ ಎಂದರು. ಈ ಸಂದರ್ಭದಲ್ಲಿ ಸಗಡಗೇರಿಯ ತಿಮ್ಮಣ್ಣನಾಯಕ, ಗ್ರಾ.ಪಂ. ಸದಸ್ಯರಾದ ಗುರು ಗೌಡ, ವಿನಯ ಗೌಡ, ವೆಂಕಟೇಶ ಗೌಡ, ಹರೀಶ ಗೌಡ, ಪ್ರದೀಪ ಗೌಡ, ಮಹಾಬಲೇಶ್ವರ ಗೌಡ, ಸುರೇಶ ಗೌಡ, ರಾಮ ಗೌಡ, ಬಲಿಯಾ ಗೌಡ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಶಿಸ್ತುಬದ್ಧ ಜೀವನ ರೂಪಿಸಲು ಕ್ರೀಡೆಗಳು ಸಹಕಾರಿ:ಪಟ್ಟದ್ದೇವರು

• **ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ,**

ವಿದ್ಯಾರ್ಥಿಗಳಲ್ಲಿ ಶಿಸ್ತುಬದ್ಧ ಜೀವನ ರೂಪಿಸಲು ಕ್ರೀಡೆಗಳು ಸಹಕಾರಿಯಾಗಿವೆ ಎಂದು ಬಸವಕಲ್ಯಾಣ ಅನುಭವ ಮಂಟಪದ ಅಧ್ಯಕ್ಷ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ಹೇಳಿದರು. ತಾಲೂಕಿನ ಕರಡ್ಯಾಳ ಚನ್ನಬಸವೇಶ್ವರ ಗುರುಕುಲ ಪಬ್ಲಿಕ್ ಶಾಲೆಯ ಆವರಣದಲ್ಲಿ ಹಿರೇಮಠ ಸಂಸ್ಥಾನ ವಿದ್ಯಾಪೀಠ ಟ್ರಸ್ಟ್‌ನ ವತಿಯಿಂದ ಸೋಮವಾರ ಆಯೋಜಿಸಿದ್ದ ವಾರ್ಷಿಕ ಕ್ರೀಡಾ-ಕೂಟ ಸಮಾರಂಭದ ದಿವ್ಯಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.




ಕ್ರೀಡೆಗಳಿಂದ ವಿದ್ಯಾರ್ಥಿಗಳಲ್ಲಿ ದೈಹಿಕ, ಮಾನಸಿಕ ಬೆಳವಣಿಗೆ, ಧೈರ್ಯ, ಸಾಹಸ ಗುಣಗಳು ವೃದ್ಧಿಸುತ್ತವೆ. ಇದು ಏಕಾಗ್ರತೆ, ಸ್ಪರ್ಧಾ ಮನೋಭಾವ ಮತ್ತು ಸಹೋದರತ್ವ ಬೆಳೆಸಲು ಅತ್ಯಂತ ಸಹಕಾರಿಯಾಗಿವೆ. ಕ್ರೀಡೆಗಳಲ್ಲಿ ಸೋಲುಗೆಲುವು ಸಮನಾಗಿ ಸ್ವೀಕರಿಸಿ ಉತ್ತಮ ಸಾಧನೆ ಮಾಡಬೇಕು ಎಂದು ತಿಳಿಸಿದರು.

ಬೆಂಗಳೂರಿನ ನ್ಯಾಯವಾದಿ ಸಂತೋಷ ನಾಗರಾಳೆ ಮಾತನಾಡಿ, ವಿದ್ಯಾರ್ಥಿಗಳಿಗೆ ಕ್ರೀಡೆಗಳು ದೈಹಿಕ ಆರೋಗ್ಯ, ಮಾನಸಿಕ ಬೆಳವಣಿಗೆ ಮತ್ತು ಆತ್ಮವಿಶ್ವಾಸ ಮೂಡಿಸಲು ಅತ್ಯಂತ ಸಹಕಾರಿಯಾಗಿವೆ ಎಂದು ತಿಳಿಸಿದರು.

ಹಿರೇಮಠ ಸಂಸ್ಥಾನದ ಕಾರ್ಯದರ್ಶಿ ಮಹಾಲಿಂಗ ಸ್ವಾಮೀಜಿ ನೇತೃತ್ವ ವಹಿಸಿದ್ದರು.

ಈ ಸಂದರ್ಭದಲ್ಲಿ ಆಡಳಿತಾಧಿಕಾರಿ ಮೋಹನ ರೆಡ್ಡಿ, ಪ್ರಾಚಾರ್ಯ ಬಸವರಾಜ ಮೊಳಕೀರೆ, ಪಬ್ಲಿಕ್ ಶಾಲೆಯ ಪಾಚಾರ್ಯರಾದ ಎನ್. ರಾಜು, ರಂಗಾರೆಡ್ಡಿ, ಜಯಕ್ಕಾ ಗಾಂವಕಾರ್, ಜಯಲಕ್ಷ್ಮಿ, ವೀರಶೆಟ್ಟಿ, ರೂಪಾದೇವಿ ಆಣದೂರೆ ಸೇರಿದಂತೆ ಮುಂತಾದವರು ಇದ್ದರು.

ಕೋಟ್

ವಾರ್ಷಿಕ ಕ್ರೀಡಾಕೂಟವೂ ವಿದ್ಯಾರ್ಥಿಗಳಿಗೆ ಕೇವಲ ಸ್ಪರ್ಧೆಗಳಲ್ಲ, ಬದಲಾಗಿ ಅವರ ಸಂಪೂರ್ಣ ಬೆಳವಣಿಗೆಗೆ ಒಂದು ಉತ್ತಮ ವೇದಿಕೆಯಾಗಿವೆ.- ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ಹಿರೇಮಠ ಸಂಸ್ಥಾನ ಭಾಲ್ಕಿ

## ಅಪ್ರೆಂಟಿಸ್ ತಾತ್ಕಾಲಿಕ ಆಯ್ಕೆಪಟ್ಟಿಗೆ ಆಕ್ಷೇಪಣೆ ಆಹ್ವಾನ

• **ಮಲ್ಲಮ್ಮ ನುಡಿ ವಾರ್ತೆ ರಾಯಚೂರು**

ಪರಿಶಿಷ್ಟಜಾತಿ ಮತ್ತು ಪರಿಶಿಷ್ಟಪಂಗಡಕ್ಕೆ ಸೇರಿದ ಪತ್ರಿಕೋದ್ಯಮ ಪದವೀಧರರಿಗೆ ರಾಯಚೂರು ಜಿಲ್ಲೆಯ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಕಚೇರಿಯಲ್ಲಿ ಮಾಧ್ಯಮ ಚಟುವಟಿಕೆಗಳ ಕಾರ್ಯನಿರ್ವಹಣೆ ಕುರಿತು 12 ತಿಂಗಳ ಅವಧಿಯ ಅಪ್ರೆಂಟಿಸ್ ತರಬೇತಿಗೆ ಮೆರಿಟ್ ಆಧಾರದ ಮೇಲೆ ಆಯ್ಕೆಯಾದ ಅರ್ಹ ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆಪಟ್ಟಿಯನ್ನು ಈ ಕಚೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದೆ.

ಈ ಆಯ್ಕೆಪಟ್ಟಿಗೆ ಆಕ್ಷೇಪಣೆ ಸಲ್ಲಿಸಲು 2026ರ ಜನವರಿ 3 ಕೊನೆಯ ದಿನವಾಗಿದೆ. ಜನವರಿ 3 ನಂತರ ಬರುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ. ಜನವರಿ 3ರೊಳಗೆ ಆಕ್ಷೇಪಣೆಗಳು ಬಾರದಿದ್ದಲ್ಲಿ ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿನ ಅಭ್ಯರ್ಥಿಗಳನ್ನೇ ಅಂತಿಮ ಆಯ್ಕೆಪಟ್ಟಿಗೆ ಪರಿಗಣಿಸಲಾಗುವುದು ಎಂದು ರಾಯಚೂರು ಜಿಲ್ಲಾ ವಾರ್ತಾಧಿಕಾರಿಗಳ ಕಚೇರಿಯ ಪ್ರಕಟಣೆ ತಿಳಿಸಿದೆ.

## ಯೋಜನಾ ಸಮಿತಿ ಚುನಾವಣೆ ಅಧಿಸೂಚನೆ ಪ್ರಕಟ

**ಮಲ್ಲಮ್ಮ ನುಡಿ ವಾರ್ತೆ ರಾಯಚೂರು**

ಜಿಲ್ಲಾಪಂಚಾಯತಿಯ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು, ರಾಯಚೂರು ರವರಿಂದ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್(ಜಿಲ್ಲಾ ಯೋಜನಾ ಸಮಿತಿ ಸದಸ್ಯರ ಚುನಾವಣೆ-2025) ನಿಯಮಗಳು 1996 ನಿಯಮ 08 ರಡಿ ರಾಯಚೂರು ಜಿಲ್ಲಾ ಯೋಜನಾ ಸಮಿತಿ ಸದಸ್ಯರ ಚುನಾವಣೆ ಅಧಿಸೂಚನೆ ಹೊರಡಿಸಲಾಗಿರುತ್ತದೆ. ಪ್ರಸ್ತುತವಾಗಿ ನಗರ ಸ್ಥಳೀಯ ಸಂಸ್ಥೆಗಳಿಂದ 06 ಸದಸ್ಯರನ್ನು (ಪುರಸಭೆ, ಮಸ್ಕಿ ಮತ್ತು ಪಟ್ಟಣ ಪಂಚಾಯತ್, ಕವಿತಾಳ, ತುರವಿಹಾಳ, ಬಳಗಾನೂರು ಮತ್ತು ಸಿರವಾರ ಮತಕ್ಷೇತ್ರ ಒಳಗೊಂಡಂತೆ) ಆಯ್ಕೆಮಾಡಬೇಕಾಗಿರುತ್ತದೆ. ಈ ಕುರಿತು ನಾಮಪತ್ರ ಸಲ್ಲಿಸುವ ದಿನಾಂಕ 30.12.2025 ರಿಂದ 12.01.2026 ರವರೆಗೆ ನಾಮಪತ್ರ ಸಲ್ಲಿಸುವುದು, ನಾಮಪತ್ರ ಪರಿಶೀಲನೆ ದಿನಾಂಕ 13.01.2026 ಹಾಗೂ ನಾಮಪತ್ರ ಹಿಂತೆದುಕೊಳ್ಳುವ ಕೊನೆಯ ದಿನಾಂಕ 16.01.2026 ಚುನಾವಣೆ ದಿನಾಂಕ 22.01.2026 ರಂದು ಜರುಗಿಸಲಾಗುವುದು ಎಂದು ರಾಯಚೂರು ಜಿಲ್ಲಾ ಪಂಚಾಯತ್ ಪ್ರಕಟಣೆ ತಿಳಿಸಿದೆ.


**PRIMARY AGRICULTURE CREDIT CO-OPERATIVE SOCIETY LTD., HALLIKHED(B)**
**Tq: Humnabad, District: Bidar, Karnataka 585414.**

Ref: No. PACS Hallikhed (B) /PACS-AS-MSC/NABARD/CC/18 /2022-23 **Date: 29/12/2025**

**TENDER NOTICE**

Competitive tenders in a sealed cover are invited from experienced contractors having GST/PAN No. for the below mentioned work so as to reach this office on or before 3:00PM on Tender date final 08/01/2026 . Tenders will be opened at 3:30pm on the same day.

| SL No. | Name of the Work | Details of the work | Time for completion |
|---|---|---|---|
| 1 | Construction of 10 Shop Commercial complexes Godown at PACS Hallikhed (B), Hallikhed (B) village, in Humnabad Taluka, in Bidar district. | 10 shop commercial complex with size 11*16*12 feet. The estimated cost of the Commercial Complex is 38.62 lakh. The technicalities of the project can be availed from our office during the office hours (9:30am to 4:30pm) on working days. | The ready to use 10 shops should be handed over to the CEO of PACS Hallikhed (B) within a stipulated time period of 12 months from the date of finalization of the project. |

The tender should be accompanied by a preliminary agreement on Stamp paper worth Rs 200/- and EMD 3% of quoted amount in the form of cash deposit with us or as DD in favour of the CEO PACS Hallikhed (B), payable at Bidar DCC Bank branch Hallikhed (B). The tender without EMD will be rejected. The schedule and other details of the project can be had from our office during office hours (9:30am to 4:30 pm) on working days. The CEO of PACS Hallikhed B reserves the right to reject/modify any or all the tenders without assigning any reasons thereof.

**Terms and conditions:**

1. Contractors have to execute the works using their own relevant machineries for the items of work. All ingredient materials and machineries have to be procured by the contractors only and PACS Hallikhed (B) will not supply any materials and machineries.
2. The various materials to be used for the items of work of the tender has to be got tested for its suitability from quality control laboratory at their own cost as and when necessary, as per the directions of the Engineer in charge.
3. Those contractors who have not completed the works taken in this Division in the stipulated tender period are not eligible to participate in the tender process.
4. The right of rejecting part or full tender is reserved with the under signed.
5. If any date mentioned in the calendar of events happens to be declared as general holiday, then immediate next working day will be considered for that particular event.

Sd/-
**Chief Executive Officer,**
**PACS Hallikhed B, Tq: Humnabad, Dist: Bidar,**
**Karnataka – 585414.**

## ಜನವರಿ 12ರಿಂದ 14ರ ವರೆಗೆ ಕನಕ ಗುರುಪೀಠದಲ್ಲಿ ಹಾಲುಮತ ಸಾಹಿತ್ಯ ಸಮ್ಮೇಳನ -ಸಿದ್ಧರಾಮಾನಂದ ಸ್ವಾಮೀಜಿ



• **ಮಲ್ಲಮ್ಮ ನುಡಿ ವಾರ್ತೆ,ರಾಯಚೂರು:**

ಜನವರಿ 12ರಿಂದ 14ರ ವರೆಗೆ ಕನಕ ಗುರುಪೀಠದಲ್ಲಿ ಹಾಲುಮತ ಸಾಹಿತ್ಯ ಸಮ್ಮೇಳನ ಹಾಗೂ ಪೂಜಾರಿಗಳ ತರಬೇತಿ ಶಿಬಿರ ನಡೆಯಲಿದೆ ಎಂದು ಕನಕ ಗುರುಪೀಠದ ಸಿದ್ಧರಾಮಾನಂದ ಸ್ವಾಮೀಜಿ,ಹೇಳಿದರೆಇಂದು ಪತ್ರಿಕಾ ಭವನದಲ್ಲಿ ಸಿದ್ಧರಾಮಾನಂದ ಸ್ವಾಮೀಜಿ,ಕಾಗಿನೇಲೆ ಮಹಾಸಂಸ್ಥಾನ ಕನಕ ಗುರುಪೀಠ, ತಿಂಥಿಣಿ ಬ್ರಿಜ್ ಮಾತನಾಡಿದ ಅವರು ಮೂರು ದಿನಗಳ ಕಾಲ ನಡೆಯುವ ಈ ಒಂದು ಉತ್ಸವದಲ್ಲಿ ಹಲವಾರು ವಿದ್ವಾಂಸರು ಸಂಶೋಧಕರು "ಸಿದ್ಧ ಪರಂಪರೆ", "ಬಹುಜನರ ಸಂಸ್ಕೃತಿಗಳ ಅಸ್ತಿತ್ವ", "ಹಾಲುಮತ ಒಂದು ಪಂಥ" ಹೀಗೆ ಹಲವು ವಿಷಯಗಳನ್ನು ಮಂಡಿಸಲಿದ್ದಾರೆ.

ಅಲ್ಲದೆ ಮೈಲಾರಲಿಂಗೇಶ್ವರ, ಬೀರದೇವರುಮತ್ತುರೇವಣಸಿದ್ದೇಶ್ವರರ ಪರಂಪರೆಯ

ಪೂಜಾರಿಗಳು ಧಾರ್ಮಿಕ ವಿಧಿ ವಿಧಾನಗಳಿಂದ ವಂಚಿತರಾದ ಕಾರಣ ಅವರಿಗೆ ಮೂರು ದಿನಗಳಕಾಲ ಶಿಬಿರವನ್ನು ಏರ್ಪಡಿಸಲಾಗಿದೆ. ನಾಡಿನಾದ್ಯಂತ ಇರುವ ಶಿವಸಿದ್ಧ ಪರಂಪರೆಯ ಪೂಜಾರಿಗಳು ಇದರ ಸದುಪಯೋಗವನ್ನು ಪಡೆದುಕೊಳ್ಳಲಿದ್ದಾರೆ. ಹಲವಾರು ಪೂಜಾರಿಗಳು,ಹೆಸರಾಂತ ಚಿಂತಕರು ಸಾಹಿತಿ-ಸಂಶೋಧಕರುಆಹ್ವಾನಿಸುತ್ತಿದ್ದು ಪೂಜಾರಿಗಳಿಗೆ ಮತ್ತು ಸಾಹಿತ್ಯಸಕ್ತರಿಗೆ ಮೂರು ದಿನಗಳ ಕಾಲ ಮಠದಲ್ಲಿ ತಂಗಲು (ಉಳಿದುಕೊಳ್ಳಲು) ವ್ಯವಸ್ಥೆ ಮಾಡಿಕೊಳ್ಳಲಾಗಿದೆ. ಅಲ್ಲದೇ, ಶ್ರೀಮಠದಲ್ಲಿ ಯಾವುದೇ ಜಾತಿ ಅಥವಾ ಸಮುದಾಯದ ದಂಪತಿಗಳು ಉಚಿತವಾಗಿ ವಿವಾಹ ಮಾಡಿಕೊಳ್ಳಲು ಪೆಬ್ರುವರಿ 15 ಶಿವರಾತ್ರಿಯಂದು ಉಚಿತ ಸಾಮೂಹಿಕ ವಿವಾಹವನ್ನು ಏರ್ಪಡಿಸಲಾಗಿದೆ. ಅಂದು ರಾತ್ರಿ1108 ಶಿವಲಿಂಗಗಳನ್ನು1108ದಂಪತಿಗಳಿಂದ ಪೂಜಿಸುವ ಕಾರ್ಯಕ್ರಮವನ್ನು ಮತ್ತು ರಾತ್ರಿ ಪರ್ಯಂತ ಹೆಸರಾಂತ ಕಲಾತಂಡಗಳಿಂದ ಭಕ್ತಿಸಂಗೀತ ನೃತ್ಯ ನಾಟಕಗಳನ್ನು ಹಮ್ಮಿಕೊಳ್ಳಲಾಗಿದೆ. ಮೇಲ್ಕಂಡ ಕಾರ್ಯಕ್ರಮಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಆಗಮಿಸಿ ಕಾರ್ಯಕ್ರಮ ಯಶಸ್ವಿ ಗೊಳಿಸಬೇಕೆಂದು ಹೇಳಿದರು.

ಈ ಸಂದರ್ಭದಲ್ಲಿ ಲಕ್ಷ್ಮಣ ಪೂಜಾರಿ, ಗುಂಡಪ್ಪಸಾಹುಕಾರ್(ಜಿಲ್ಲಾಅಧ್ಯಕ್ಷರು), ಶೇಖರ್ ವಾರದ್, ಮಹದೇವ್ ಮಿರ್ಜಾಪುರ, ಹನುಮಂತಪ್ಪ, ನಾಗರಾಜ್, ಬಸಯ್ಯ ಸಾಹುಕಾರ್ ಸೇರಿದಂತೆ ಹಲವಾರು ಸಮಾಜದ ಮುಖಂಡರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಸಂಪುಟ ಪುನರ್‌ರಚನೆಯಲ್ಲಿ ಕೆ.ಎನ್. ರಾಜಣ್ಣರಿಗೆ ಸಚಿವ ಸ್ಥಾನ ನೀಡಿ – ಎನ್. ರಘುವೀರ ನಾಯಕ ಆಗ್ರಹ

• **ಮಲ್ಲಮ್ಮ ನುಡಿ ವಾರ್ತೆ ರಾಯಚೂರು:**

ಸಾಮಾನ್ಯ ಕ್ಷೇತ್ರದಲ್ಲಿ ಗೆದ್ದು ಸಹಕಾರ ಸಚಿವರಾಗಿದ್ದ ಕೆ.ಎನ್. ರಾಜಣ್ಣ ಅವರ ಸಚಿವ ಸ್ಥಾನವನ್ನು ಹಿಂಪಡೆದ ಬಳಿಕ ಅವರಿಗೆ ಇದುವರೆಗೆ ಯಾವುದೇ ಗೌರವಯುತ ಸ್ಥಾನಮಾನ ನೀಡದಿರುವುದು ವಿಷಾದಕರ ಸಂಗತಿಯಾಗಿದ್ದು, ಮುಂದಿನ ಸಚಿವ ಸಂಪುಟ ವಿಸ್ತರಣೆ ಹಾಗೂ ಪುನರ್‌ರಚನೆಯಲ್ಲಿ ಕೆ.ಎನ್. ರಾಜಣ್ಣ ಅವರ ಸಚಿವ ಸ್ಥಾನ ಹಾಗೂ ವಾಲ್ಮೀಕಿ ಸಮುದಾಯಕ್ಕೆ ನ್ಯಾಯ ಒದಗಿಸಬೇಕು ಎಂದು ಹೈದ್ರಾಬಾದ್ ಕರ್ನಾಟಕ ಪ್ರದೇಶ ವಾಲ್ಮೀಕಿ ನಾಯಕ ಸಂಘದ ವಿಭಾಗೀಯ ಕಾರ್ಯದರ್ಶಿ ಎನ್. ರಘುವೀರ ನಾಯಕ ಅವರು ಆಗ್ರಹಿಸಿದರು.

ನಗರದ ಪತ್ರಿಕಾ ಭವನದಲ್ಲಿ ಇಂದು ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ಮೀಸಲು ಕ್ಷೇತ್ರಗಳಿಂದ ಆಯ್ಕೆಯಾದ ವಾಲ್ಮೀಕಿ ಸಮುದಾಯದ ಇಬ್ಬರು ಶಾಸಕರಿಗೆ ಸಚಿವ ಸ್ಥಾನ ನೀಡುವುದರ ಜೊತೆಗೆ, ಸಾಮಾನ್ಯ ಕ್ಷೇತ್ರದಲ್ಲಿ ಗೆದ್ದು ಹಿರಿಯ ನಾಯಕನಾಗಿ ಗುರುತಿಸಿಕೊಂಡಿರುವ ಕೆ.ಎನ್. ರಾಜಣ್ಣ ಅವರಿಗೆ ಕೂಡಲೇ ಸಚಿವ ಸ್ಥಾನ ನೀಡಬೇಕು ಎಂದು ಒತ್ತಾಯಿಸಿದರು.

ರಾಜ್ಯ ಜನಸಂಖ್ಯೆಯಲ್ಲಿ ಮಹತ್ವದ ಸ್ಥಾನ ಹೊಂದಿರುವ ವಾಲ್ಮೀಕಿ ಸಮುದಾಯಕ್ಕೆ ನಿರ್ಣಾಯಕ ಹುದ್ದೆಗಳಲ್ಲಿ ಸಮರ್ಪಕ ಪ್ರಾತಿನಿಧ್ಯ ಸಿಗುತ್ತಿಲ್ಲ ಎಂಬ ಬೇಸರವನ್ನು ವ್ಯಕ್ತಪಡಿಸಿದರು.

ಸಾಮಾಜಿಕ, ಶೈಕ್ಷಣಿಕ ಹಾಗೂ ಸಂಘಟನಾ ಕ್ಷೇತ್ರದಲ್ಲಿ ದೀರ್ಘ ಅನುಭವ ಹೊಂದಿರುವ ಕೆ.ಎನ್. ರಾಜಣ್ಣ ಅವರಿಗೆ ಜವಾಬ್ದಾರಿಯುತ ಸ್ಥಾನ ನೀಡುವುದರಿಂದ ಸಮುದಾಯಕ್ಕೆ ನ್ಯಾಯ ಸಿಗಲಿದೆ.





ರಾಯಚೂರು ಜಿಲ್ಲೆಯಲ್ಲಿ ಪ್ರಸ್ತುತ ಕೇವಲ ಮೂರು ಆಶ್ರಮ ಶಾಲೆಗಳಿದ್ದು, ಕನಿಷ್ಠ ಏಳು ಆಶ್ರಮ ಶಾಲೆಗಳ ಅಗತ್ಯವಿದೆ. ಪ್ರತಿಷ್ಠಿತ ಶಾಲೆಗಳ ದಾಖಲಾತಿಗೆ ಜಿಲ್ಲೆಗೆ ಕೇವಲ 63 ಸ್ಥಾನಗಳ ಗುರಿ ನಿಗದಿಯಾಗಿದ್ದು, ಅದನ್ನು ಕನಿಷ್ಠ 200ಕ್ಕೆ ಹೆಚ್ಚಿಸಬೇಕು. ಅಲ್ಲದೇ ರಾಯಚೂರು ನಗರದಲ್ಲಿ ಒಂದೂ ಪ್ರತಿಷ್ಠಿತ ಶಾಲೆ ನೋಂದಣಿಯಾಗದಿರುವುದು ಆಡಳಿತದ ವೈಫಲ್ಯವನ್ನು ತೋರಿಸುತ್ತದೆ ಎಂದು ಟೀಕಿಸಿದರು.

ಇದು ಕೇವಲ ಒಂದು ಜಿಲ್ಲೆಯ ಸಮಸ್ಯೆಯಲ್ಲ; ಇಡೀ ರಾಜ್ಯದಾದ್ಯಂತ ವಾಲ್ಮೀಕಿ ಸಮುದಾಯ ಎದುರಿಸುತ್ತಿರುವ ಅನೇಕ ಸಮಸ್ಯೆಗಳಿವೆ. ಈ ಸಮಸ್ಯೆಗಳಿಗೆ ಪರಿಹಾರ ದೊರಕಬೇಕಾದರೆ ಸಂಬಂಧಿತ ಇಲಾಖೆಗೆ ಸಮುದಾಯದ ಸಚಿವರ ನೇಮಕ ಅಗತ್ಯವಾಗಿದ್ದು, ಕೂಡಲೇ ಮಂತ್ರಿಗಳನ್ನು ನೇಮಿಸಿ ಸಮುದಾಯದ ಹಿತವನ್ನು ಕಾಪಾಡಬೇಕೆಂದು ರಾಜ್ಯ ಸರ್ಕಾರವನ್ನು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಸಂಘದ ಜಿಲ್ಲಾಧ್ಯಕ್ಷ ಮಲ್ಲಿಕಾರ್ಜುನ ನಾಯಕ, ರಾಮು ನಾಯಕ, ರಮೇಶ್ ನಾಯಕ, ನರೇಂದ್ರ ನಾಯಕ, ಮಹೇಶ್ ನಾಯಕ, ರಾಮು ನಾಯಕ ಜಳ್ಳಿ ಹಾಗೂ ಬೋಳಬಂಡಿ ವಡವಟ್ಟಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

## ಮಸ್ಕಿ ಕುಡಿಯುವ ನೀರು ಪೂರೈಕೆ ವ್ಯತ್ಯಯ



• **ಮಲ್ಮನ ನುಡಿ ವಾರ್ತೆ. ಮಸ್ಕಿ:**

ಪಟ್ಟಣದ ಜನರಿಗೆ ಕುಡಿಯುವ ನೀರು ಪೂರೈಕೆಯ ಮೋಟಾರ್ ಹಾಳಾಗಿರುವ ಕಾರಣದಿಂದಾಗಿ ಎರಡು ದಿನ ನೀರು ಪೂರೈಕೆ ಯಲ್ಲಿ ವ್ಯತ್ಯಯವಾಗಲಿದೆ ಸಾರ್ವಜನಿಕರು ಸಹಕಾರ ನೀಡಬೇಕೆಂದು ಮುಖ್ಯಾಧಿಕಾರಿ ಪತ್ರಿಕೆ ಪ್ರಕಟನೆಯಲ್ಲಿ ತಿಳಿಸಿದ್ದಾರೆ.



ಭಾಲ್ಕಿ : ಪ್ರಸನ್ನ ಪ್ರಕಾಶ್ ಖಂಡ್ರೆ ಅವರ ಜನ್ಮದಿನದ ಪ್ರಯುಕ್ತ ಸುಕ್ಷೇತ್ರ ಚಳಕಾಪುರದ ಹನುಮಾನ್ ದೇವಸ್ಥಾನಕ್ಕೆ ಭೇಟಿ ನೀಡಿ, ದೇವರ ದರ್ಶನ ಪಡೆದರು. ಈ ಸಂದರ್ಭದಲ್ಲಿ ಕೆ ಡಿ ಗಣೇಶ್, ಡಾ. ಜಗದೀಶ ಭೂರೆ ಉಪಸ್ಥಿತರಿದ್ದರು

## ಸತ್ಯ ನ್ಯಾಯ ಪ್ರಾಮಾಣಿಕತೆಯನ್ನು ಜನರಿಗೆ ತಲುಪಿಸುವ ಕಾರ್ಯ ಮಾಧ್ಯಮಗಳದ್ದು: ಶಿವಾನಂದ ತಗಡೂರು

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಪತ್ರಕರ್ತರು ಸಮಾಜದ ಕಣ್ಣು, ಕಿವಿಗಳಾಗಿದ್ದು, ಸತ್ಯ, ನ್ಯಾಯ ಮತ್ತು ಪ್ರಾಮಾಣಿಕತೆಯನ್ನು ಜನಸಾಮಾನ್ಯರಿಗೆ ತಲುಪಿಸುವ ಮಹತ್ತರ ಹೊಣೆಗಾರಿಕೆ ಮಾಧ್ಯಮಗಳದ್ದಾಗಿದೆ ಎಂದು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಅಧ್ಯಕ್ಷ ಶಿವನಾಂದ ತಗಡೂರು ಅಭಿಪ್ರಾಯಪಟ್ಟಿದ್ದಾರೆ.

ಅವರು ಇಂದು ನಗರದ ಛೇಂಬರ್ ಆಫ್ ಕಾಮರ್ಸ್ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಮತ್ತು ತಾಲೂಕು ಘಟಕದ ಪದಾಧಿಕಾರಿಗಳ, ಕಾರ್ಯಕಾರಿ ಸಮಿತಿ ಸದಸ್ಯರ ಪದಗ್ರಹಣ ಸಮಾರಂಭ ಉದ್ಘಾಟನೆ ಮಾಡಿ ಮಾತನಾಡುತ್ತಿದ್ದರು. ಇಂದಿನ ಡಿಜಿಟಲ್ ಯುಗದಲ್ಲಿ ಸುದ್ದಿ ವೇಗವಾಗಿ ಹರಡುವಂತಾಗಿರುವುದರಿಂದ, ಪತ್ರಕರ್ತರು ಇನ್ನಷ್ಟು ಜವಾಬ್ದಾರಿಯಿಂದ ವರದಿ ಮಾಡಬೇಕಾದ ಅಗತ್ಯವಿದೆ ಎಂದು ಹೇಳಿದರು. ಕಾರ್ಯನಿರತ ಪತ್ರಕರ್ತರು ಯಾವುದೇ ಒತ್ತಡಗಳಿಗೆ ಮಣಿಯದೇ, ಜನಪರ ಹಾಗೂ ನಿಷ್ಪಕ್ಷಪಾತ ಪತ್ರಿಕೋದ್ಯಮವನ್ನು ಮುಂದುವರಿಸಬೇಕು ಎಂದು ಕರೆ ನೀಡಿದ ಅವರು. "ಸಂಘಟನೆ ಬಲವಾಗಿದ್ದರೆ ಮಾತ್ರ ಪತ್ರಕರ್ತರ ಹಕ್ಕುಗಳು, ಭದ್ರತೆ ಮತ್ತು ಗೌರವವನ್ನು ಕಾಯ್ದುಕೊಳ್ಳಲು ಸಾಧ್ಯ. ನೂತನವಾಗಿ ಪದಗ್ರಹಣ ಮಾಡಿದ ಪದಾಧಿಕಾರಿಗಳು ಸಂಘಟನೆಯನ್ನು ಇನ್ನಷ್ಟು ಚುರುಕಾಗಿ ನಡೆಸಿ, ಜಿಲ್ಲೆಯ ಪತ್ರಕರ್ತರ ಸಮಸ್ಯೆಗಳಿಗೆ ಸ್ಪಂದಿಸಬೇಕು" ಎಂದು ಸಲಹೆ ನೀಡಿದರು. ಪತ್ರಕರ್ತರ ಕಲ್ಯಾಣ, ವಿಮೆ, ತರಬೇತಿ ಹಾಗೂ ವೃತ್ತಿಪರ ರಕ್ಷಣೆಗೆ ಸಂಘ ನಿರಂತರವಾಗಿ ಶ್ರಮಿಸಲಿದೆ ಎಂದು ಭರವಸೆ ನೀಡಿದರು. ವಿಧಾನ ಪರಿಷತ್ ಸದಸ್ಯ ವೈ.ಎಂ.ಸತೀಶ್ ಅವರು ಮಾತನಾಡಿ, ನೀವೆಲ್ಲ ನಿಷ್ಪಕ್ಷಪಾತವಾಗಿ ವರದಿ ಮಾಡಿ, ಧೈರ್ಯವಾಗಿ ಮಾತನಾಡುವ ವ್ಯಕ್ತಿತ್ವ ನಿಮ್ಮದಾಗಲಿ,





ವೃತ್ತಿಯನ್ನು ಸಮಾಜದ ಒಳಿತಿಗಾಗಿ ಉಪಯೋಗಿಸಿಕೊಳ್ಳಿ ಎಂದರು. ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್ ಕೆ.ಮಾತನಾಡಿ, ಪ್ರಾಮಾಣಿಕತೆಯಿಂದ ಜನರಿಗೆ ಉತ್ತಮ ಕೆಲಸ ಮಾಡುವ ಉದ್ದೇಶವಿಟ್ಟುಕೊಂಡು ಕಾರ್ಯ ನಿರ್ವಹಿಸಲು ಮನವಿ ಮಾಡಿದರು.

ಎಸ್ಪಿ ಡಾ.ಶೋಭಾರಾಣಿ ಅವರು ಮಾತನಾಡಿ, ಸಾಮಾಜಿಕ ಮಾಧ್ಯಮಗಳ ಮೂಲಕ ನಿಜವಾದ ಸುದ್ದಿ ಯಾವುದು ಎಂಬಂತಾಗಿದೆ. ಅದಕ್ಕಾಗಿ ಸತ್ಯಾಸತ್ಯತೆಯ ಸುದ್ದಿಕೊಡುವ ಮಾಧ್ಯಮಗಳು ಮುಖ್ಯ ಎಂದರು.

ಲಿಡ್ಕರ್ ಅಧ್ಯಕ್ಷ ಮುಂಡ್ರಿಗಿ ನಾಗರಾಜ್ ಮಾತನಾಡಿ, ಖಡ್ಗಕ್ಕಿಂತ ಹರಿತವಾದ ಪೆನ್ನನ್ನು ಹೊಂದಿರುವ ಪತ್ರಕರ್ತರು ಸಮಾಜದ ಕೆಟ್ಟ ಸಂಸ್ಕೃತಿಯನ್ನು ಹೋಗಲಾಡಿಸುವ ಕೆಲಸ ಮಾಡಬೇಕು ಎಂದರು. ಮೇಯರ್ ಪಿ. ಗಾದೆಪ್ಪ ಮಾತನಾಡಿ, ನಗರದ ದುರ್ಗಮ್ಮ ದೇವಸ್ಥಾನದ ಅಭಿವೃದ್ಧಿ ವಿಷಯದಲ್ಲಿ ಮಾಧ್ಯಮಗಳ ಪಾತ್ರ ಮಹತ್ವದ್ದು ಎಂದ ಅವರು, ಪಾಲಿಕೆಯಲ್ಲಿ ಪತ್ರಕರ್ತರ ಕ್ಷೇಮಾಭಿವೃದ್ಧಿ ನಿಧಿ ಸ್ಥಾಪಿಸಿ ಅವರ ಸಂಕಷ್ಟಗಳಿಗೆ ಸ್ಪಂದಿಸುವ ಕೆಲಸ ಈ ಬಾರಿಯ ಬಜೆಟ್ ನಲ್ಲಿ ಮಾಡಲಿದೆಂದು ಭರವಶೆ ನೀಡಿದರು. ಅಧ್ಯಕ್ಷತೆವಹಿಸಿದ್ದ ಸಂಘದ ಅಧ್ಯಕ್ಷ ಎನ್.ವೀರಭದ್ರಗೌಡ, ಮಾತನಾಡಿ ಪತ್ರಿಕಾ ಭವನದ ಅಭಿವೃದ್ಧಿ, ಪತ್ರಕರ್ತರ ಕ್ಷೇಮಾಭಿವೃದ್ಧಿ ನಿಧಿ ಸ್ಥಾಪನೆ ಮೊದಲಾದ ಕಾರ್ಯಗಳ ಮೂಲಕ ಸಂಘವು ಕ್ರಿಯಾತ್ಮಕವಾಗಿ ನಡೆಯಲಿದೆ. ಇಂದು ಸಂಘದ ಕ್ಷೇಮಾಭಿವೃದ್ಧಿ ನಿಧಿಗೆ ತಲಾ ಎರಡು ಲಕ್ಷರೂಗಳನ್ನು ನೀಡಿದ ಶಾಸಕರೂ, ಮಾಜಿ ಸಚಿವರಾದ ಬಿ.ನಾಗೇಂದ್ರ, ನಗರ ಶಾಸಕ ನಾರಾ ಭರತ್ ರೆಡ್ಡಿ ಅವರಿಗೆ ಧನ್ಯವಾದ ಸಲ್ಲಿಸಿದರು.

ಈ ವೇಳೆ ಈ ಬಾರಿಯ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಮಾಧ್ಯಮ ಕ್ಷೇತ್ರದ ಕೆ.ಎನ್. ಗಂಗಾಧರ, ಚುನಾವಣಾಧಿಕಾರಿಗಳಾಗಿ ಕಾರ್ಯನಿರ್ವಹಿಸಿದ ಎಸ್.ನಾಗರಾಜ್, ಸಿದ್ದು ಪೂಜಾರ್ ಅವರನ್ನು ಸನ್ಮಾನಿಸಿ ಗೌರವಿಸಲಾಯ್ತು. ಸಮಾರಂಭದಲ್ಲಿ ಶಾಸಕರಾದ ಬಿ.ನಾಗೇಂದ್ರ, ನಾರಾ ಭರತ್ ರೆಡ್ಡಿ, ಡಿಸಿಸಿ ಅಧ್ಯಕ್ಷ ಅಲ್ಲಂ ಪ್ರಶಾಂತ್, ಪಾಲಿಕೆಯ ಪ್ರತಿಪಕ್ಷದ ನಾಯಕ ಶ್ರೀನಿವಾಶ್ ಮೋತ್ಕರ್, ಜಿಪಂ ಸಿಇಓ ಮಹಮ್ಮದ್ ಹಾರೀಶ್ ಸುಮೇರ, ಸಂಘದ ರಾಜ್ಯ ಸಮಿತಿ ಸದಸ್ಯ, ಹೆಚ್.ಬಸವರಾಜ್, ಕೆಪಿಸಿಸಿ ವಕ್ತಾರ ವೆಂಕಟೇಶ್ ಹೆಗಡೆ ಮೊದಲಾದವರು ಇದ್ದರು. ಸಂಘದ ಪ್ರಧಾನ ಕಾರ್ಯದರ್ಶಿ ನರಸಿಂಹಮೂರ್ತಿ ಕುಲಕರ್ಣಿ ಸ್ವಾಗತ, ಕಾರ್ಯಕಾರಿ ಸದಸ್ಯ ಕೆ.ಎಂ.ಮಂಜುನಾಥ ಕಾರ್ಯಕ್ರಮ ನಿರೂಪಣೆ, ವೆಂಕಟೇಶ್ ದೇಸಾಯಿ ವಂದನಾರ್ಪಣೆ, ಶೃತಿ ಹಂದ್ಯಾಳ್ ಪ್ರಾರ್ಥನೆ ಸಲ್ಲಿಸಿದರು.

## ಶಾಲೆಯ ವಾರ್ಷಿಕೋತ್ಸವ



ಭಾಲ್ಕಿ, ತಾಲೂಕಿನ ಹಾಲಹಳ್ಳಿ(ಕೆ) ಗ್ರಾಮದ ಕೆ.ಎಲ್.ಪಬ್ಲಿಕ್ ಶಾಲೆಯಲ್ಲಿ ಸೋಮವಾರ ಸಾಯಂಕಾಲ 4 ಗಂಟೆಗೆ 13ನೇ ವಾರ್ಷಿಕೋತ್ಸವ ಸಮಾರಂಭ ಜರುಗಲಿದೆ. ಹಿರೇಮಠ ಸಂಸ್ಥಾನದ ಪೀಠಾಧಿಪತಿ ಗುರುಬಸವ ಪಟ್ಟದ್ದೇವರು ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ. ಶಾಸಕರಾದ ಡಾ.ಶೈಲೇಂದ್ರ ಬೆಲ್ದಾಳೆ, ಡಾ.ಸಿದ್ಧಲಿಂಗ ಪಾಟೀಲ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಮಾಜಿ ಶಾಸಕ ಪ್ರಕಾಶ ಖಂಡ್ರೆ, ನಾರಂಜಾ ಸಕ್ಕರೆ ಕಾರ್ಖಾನೆ ಮಾಜಿ ಅಧ್ಯಕ್ಷ ಡಿ.ಕೆ.ಸಿದ್ರಾಮ ಪೂಜೆ ನೆರವೇರಿಸಲಿದ್ದಾರೆ.

ಕಲರ್ಸ್ ವಾಹಿನಿಯ ಭಾರ್ಗವಿ ಎಲ್‌ಎಲ್‌ಬಿ ಧಾರವಾಹಿ ನಟಿ ರಾಧಾ ಭಗವತಿ, ನಾರಂಜಾ ಕಾರ್ಖಾನೆ ಅಧ್ಯಕ್ಷ ಸೂರ್ಯಕಾಂತ ನಾಗಮಾರಪಳ್ಳಿ, ಸೋಮಶೇಖರ ಬಿರಾದಾರ್, ಸುರೇಶ ಚನ್ನಶೆಟ್ಟಿ, ಪ್ರಭುಲಿಂಗ ತೂಗಾಂವೆ, ಸಿ.ಜಿ.ಹಳ್ಳದ, ಡಾ.ರವೀಂದ್ರ ಪಾಟೀಲ್, ಡಾ.ಶೈಲಜಾ ವಾಸಿರೆಡ್ಡಿ, ವಿಶ್ವರಾಧ್ಯ, ಶಿರೋಮಣಿ, ಅಶೋಕ ಜಾಧವ, ಸಂಜುಕುಮಾರ ಸಿದ್ದಾಪೂರ, ಶ್ರೀಕಾಂತ ದಾನೆ, ವೀರಶೆಟ್ಟಿ ಪಟ್ನೆ, ನಾಗೇಂದ್ರ ಸೊರಳ್ಳಿ, ಅನಿಲಕುಮಾರ ಹಂಗರಗೆ, ನಾಗರಾಜ ಜೋಗಿ ಸೇರಿದಂತೆ ಮುಂತಾದವರು ಪಾಲ್ಗೊಳ್ಳಲಿದ್ದಾರೆ ಎಂದು ಸಂಸ್ಥೆಯ ಅಧ್ಯಕ್ಷ ರಾಜಕುಮಾರ ಲಿಂಗಬಶೆಟ್ಟಿ, ಕಾರ್ಯದರ್ಶಿ ಅರ್ಚನಾ ಲಿಂಗಬಶೆಟ್ಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕಂಪ್ಯೂಟರ್ ಆಪರೇಟರ್ ದಿನಾಚರಣೆ

• **ಮಲ್ಲಮ್ಮ ನುಡಿ ವಾರ್ತೆ ರಾಯಚೂರು:**

ತಾಲೂಕ ಪಂಚಾಯತ ರಾಯಚೂರು ಹಾಗೂ ಕರ್ನಾಟಕ ರಾಜ್ಯ ಗ್ರಾಮ ಪಂಚಾಯತಿ ಕ್ಲರ್ಕ್ ಕಂ ಡಾಟಾ ಎಂಟ್ರಿ ಆಪರೇಟರ್ ಗಳ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಕಂಪ್ಯೂಟರ್ ಪಿತಾಮಹ ಚಾರ್ಲ್ಸ್ ಬ್ಯಾಬೇಜ್ ರವರ ಹುಟ್ಟುಹಬ್ಬದ ಪ್ರಯುಕ್ತ ಕಂಪ್ಯೂಟರ್ ಆಪರೇಟರ್ ದಿನಾಚರಣೆ ಕಾರ್ಯಕ್ರಮವನ್ನು ಶುಕ್ರವಾರ ರಾಯಚೂರು ತಾಲೂಕ ಪಂಚಾಯತ್ ಕಾರ್ಯಾಲಯದ ಸಭಾಂಗಣದಲ್ಲಿ ಆಚರಿಸಲಾಯಿತು.

ಮೊದಲಿಗೆ ಚಾರ್ಲ್ಸ್ ಬ್ಯಾಬೇಜ್ ರವರ ಭಾವಚಿತ್ರಕ್ಕೆ ನರೇಗಾ ಸಹಾಯಕ ನಿರ್ದೇಶಕರಾದ ಹನುಮಂತಪ್ಪ ಮತ್ತು ರಾಜ್ಯಾಧ್ಯಕ್ಷ ಭೀಮರೆಡ್ಡಿ ಪಾಟೀಲ್ ಹಾಗೂ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಕಾರ್ಯದರ್ಶಿಗಳು ಮತ್ತು ಎಸ್ಡಿಎ ರವರು ಪೂಜೆ ನೆರವರಿಸಿದರು. ನಂತರ ಕಾರ್ಯಕ್ರಮವನ್ನು ಉದ್ದೇಶಿಸಿ ಸಂಘದ ರಾಜ್ಯಾಧ್ಯಕ್ಷ ಭೀಮರೆಡ್ಡಿ ಪೊಲೀಸ್ ಪಾಟೀಲ್ ಮಾತನಾಡಿ, ರಾಜ್ಯ ಸರ್ಕಾರ ಗ್ರಾಮ ಪಂಚಾಯತಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕ್ಲರ್ಕ್-ಕಂ



ಡಾಟಾ ಎಂಟ್ರಿ ಆಪರೇಟರ್ಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಕಂಪ್ಯೂಟರ್ ಪಿತಾಮಹ ಚಾರ್ಲ್ಸ್ ಬ್ಯಾಬೇಜ್ ರವರ ಜನ್ಮದಿನ ಪ್ರತಿ ವರ್ಷ ಕ್ಲರ್ಕ್ ಕಂ ಡಾಟಾ ಎಂಟ್ರಿ ಆಪರೇಟರ್ ದಿನವನ್ನಾಗಿ ಆಚರಿಸುವಂತೆ ಆದೇಶ ಹೊರಡಿಸಿರುವುದರಿಂದ ಇಂದು ಕಂಪ್ಯೂಟರ್ ಆಪರೇಟರ್ ದಿನಾಚರಣೆ ಆಚರಿಸಲಾಗುತ್ತಿದೆ. ಚಾರ್ಲ್ಸ್ ಬ್ಯಾಬೇಜ್ ರವರ ಶ್ರಮದ ಫಲವಾಗಿ ಕಂಪ್ಯೂಟರ್ ನ ಮಹತ್ವ ತಿಳಿಸಲು ಸಾಧ್ಯವಾಯಿತು. ಸಾರ್ವಜನಿಕರಿಗೆ ಸಿಗುವ ಸೌಲಭ್ಯಗಳನ್ನು ಸಕಾಲಕ್ಕೆ ತಲುಪಿಸಲು ಸಾಧ್ಯವಾಗಿದೆ. ಇಂದಿನ ಆಧುನಿಕಯುಗದಲ್ಲಿ ಕಂಪ್ಯೂಟರ್ ಅವಶ್ಯಕತೆ ಪ್ರತಿಯೊಬ್ಬರಿಗೆ ಅತಿ ಅಗತ್ಯವಾಗಿದೆ. ದೇಶದಲ್ಲಿ ತಂತ್ರಜ್ಞಾನವು ವೇಗವಾಗಿ ಬೆಳೆಯುತ್ತಿದೆ. ಕಂಪ್ಯೂಟರ್ ಆಪರೇಟರ್ ಮೇಲೆ ಇತ್ತೀಚಿನ ದಿನಗಳಲ್ಲಿ ನರೇಗಾ ಸೇರಿದಂತೆ ಇನ್ನಿತರ ಸರ್ಕಾರದ ನಾನಾ ಯೋಜನೆಗಳನ್ನು ಸಕಾಲಕ್ಕೆ ಜನರಿಗೆ ಒದಗಿಸುವ ಕೆಲಸ ಮಾಡಬೇಕೆಂದರು. ಪಂಚಾಯತಿ ಅಭಿವೃದ್ಧಿ ಸಂಘದ ಅಧ್ಯಕ್ಷೆ ರೇಖಾ ಮಾತನಾಡಿ, ಈ ಜಾಗತಿಕ ಯುಗಕ್ಕೆ ಕಂಪ್ಯೂಟರ್ ಅವಶ್ಯಕತೆ ಇದ್ದು ಆದ್ದರಿಂದ ಎಲ್ಲರೂ ಗೌರವಿಸುವುದು ಅವಶ್ಯ ಎಂದರು. ಕರಿಯಪ್ಪ ಸರ್ಕಾರ ನೌಕರರ ಸಂಘದ ನಿರ್ದೇಶಕರು ಮಾತನಾಡಿ ಗ್ರಾಮ ಪಂಚಾಯತಿ ಡಾಟಾ ಎಂಟ್ರಿ ಆಪರೇಟರ್ ಗ್ರಾಮ ಪಂಚಾಯತಿ ಸೇವೆಗೆ ಅವಶ್ಯ ಎಂದರು. ಭೀಮರೆಡ್ಡಿ ಪಾಟೀಲ್ ರಾಜ್ಯ ಅಧ್ಯಕ್ಷರು ಮಾತನಾಡಿ ಕಂಪ್ಯೂಟರ್ ಆಪರೇಟರ್ ದಿನಾಚರಣೆ ದಿಂದ ಇಂದು ನಮ್ಮ ನೌಕರನ್ನು ಪ್ರೋತ್ಸಾಹಿಸುವುದು ಹಾಗೂ ಗುರುತಿಸುವಂತಾಗಿದೆ ಎಂದರು. ಈ ಸಂದರ್ಭದಲ್ಲಿ ಕಂಪ್ಯೂಟರ್ ಆಪರೇಟರ್ ಸಂಘದ ರಾಜ್ಯಾಧ್ಯಕ್ಷರಾದ ಭೀಮರೆಡ್ಡಿ ಪೋಲೀಸ್ ಪಾಟೀಲ್, ಅವರಿಗೆ ತಾಲೂಕು ಘಟಕದ ವತಿಯಿಂದ ಸನ್ಮಾನಿಸಲಾಯಿತು. ಹಾಗೂ ತಾಲೂಕಿನ ವತಿಯಿಂದ ಉತ್ತಮ ಕ್ರಿಯಾಶೀಲ ಆಪರೇಟರ್ ಎಂದು ಶ್ರೀ ಕೃಷ್ಣ, ಶರಣಪ್ಪ, ಭೀಮಣ್ಣ ಮತ್ತು ಬಸವರಾಜ ಇವರನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಮತ್ತು ಕಾರ್ಯದರ್ಶಿಗಳು, ಚಿಕ್ಕಸುಗೂರು ಗ್ರಾಪಂ ಅಧ್ಯಕ್ಷ ಶ್ರೀನಿವಾಸ ಏಗನೂರು, ಎಸ್ಡಿಎ ಗಳು, ತಾ.ಪಂ ಸಿಬ್ಬಂದಿ ವರ್ಗದವರು, ಬಾಯಿದೊಡ್ಡಿ ಗ್ರಾಪಂ ಅಧ್ಯಕ್ಷರು, ಶಾಖವಾದಿ ಗ್ರಾಪಂ ಅಧ್ಯಕ್ಷರು ಹಾಗೂ ಗ್ರಾಮ ಪಂಚಾಯಿತಿಯ ಕಂಪ್ಯೂಟರ್ ಆಪರೇಟರ್ ಗಳು ಹಾಜರಿದ್ದರು

## ಕುವೆಂಪು ಜನ್ಮ ದಿನಾಚರಣೆ



• **ಮಲ್ಲಮ್ಮ ನುಡಿ ವಾರ್ತೆ ಮುದಗಲ್ :**

ಪಟ್ಟಣದ ಪುರಸಭೆ ಕಾರ್ಯಾಲಯ, ನಾಡ ಕಾರ್ಯಾಲಯ, ಸರಕಾರಿ ಪ್ರಥಮ ಧರ್ಜೆ ಕಾಲೇಜು, ರೈತ ಸಂಪರ್ಕ ಕೇಂದ್ರ, ಕೃಷಿ ಮಾರುಕಟ್ಟೆ ಸೇರಿದಂತೆ ವಿವಿಧ ಶಾಲೆಗಳಲ್ಲಿ ರಾಷ್ಟ್ರಕವಿ ಕುವೆಂಪು ಜನ್ಮ ದಿನಾಚರಣೆ ಸೋಮವಾರ ಆಚರಣೆ ಮಾಡಿದರು.

ರಾಷ್ಟ್ರಕವಿ ಕುವೆಂಪು ಅವರ ಭಾವ ಚಿತ್ರಕ್ಕೆ ಪುರಸಭೆ ಮುಖ್ಯಾಧಿಕಾರಿ ಪ್ರವೀಣ್ ಬೋಗಾರ ಪುಷ್ಪಾರ್ಚನೆ ಮಾಡಿದರು. ಸಿಬ್ಬಂದಿ ಸಮೂದಾಯ ಸಂಘಟನಾಕಾರರು ಚೆನ್ನಮ್ಮ ದಳವಾಯಿ ಮಠ, ನಾಡಕಾರ್ಯಾಲಯದಲ್ಲಿ ಮುನಿರ್ ಪಾಷ, ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಡಾ. ಸಿದ್ಧರಾಮ ಪಾಟೀಲ್ ಪೂಜೆ ಸಲ್ಲಿಸಿ ಪುಷ್ಪಾರ್ಚನೆ ಮಾಡಿದರು.

ಈ ವೇಳೆ ಪುರಸಭೆ ಸಿಬ್ಬಂದಿಗಳು ನಿಸ್ಸಾರ ಅಹ್ಮದ್, ಬಸವರಾಜ ಕೊಟ್ಟುರ, ರಂಗನಾಥ, ಎಫ್ ಡಿಸಿ ಮರಿಲಿಂಗಪ್ಪ, ರವಿಕುಮಾರ, ದೀಪಾ ಎಂ. ಬಡಿಗೇರ, ರೇಣುಕಾ ಬೋವಿ, ಬಸವರಾಜ, ಖಾದರಸಾಬ್, ವಿನೋದ ಕುಮಾರ, ಶಿವುಕುಮಾರ, ಇಕ್ತಾರ ಪಾಷ, ಚಂದ್ರು, ಅಲ್ಲಾವಲಿ, ದುರ್ಗಪ್ಪ, ಸೇರಿದಂತೆ ಇತರರಿದ್ದರು.

## ಅಧಿಕಾರಿಗಳ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲು ಗ್ರಾಮಸ್ಥರ ಒತ್ತಾಯ

• **ಮಲ್ಲಮ್ಮ ನುಡಿ ವಾರ್ತೆ ಕಮಲನಗರ:**

ಜಲ ಜೀವನ್ ಮಿಷನ್ (ಜೆಜೆಎಂ) ಯೋಜನೆಯ ಕಾಮಗಾರಿಯನ್ನು ಗ್ರಾಮ ಪಂಚಾಯತಿಗೆ ಹಸ್ತಾಂತರಿಸುವ ಸಂದರ್ಭದಲ್ಲಿ ಅಧಿಕಾರಿಗಳು ಅಕ್ರಮ ಮಾಡಿದ್ದಾರೆ. ಪಂಚಾಯಿತಿಯ ಅಧ್ಯಕ್ಷರ ನಕಲಿ ಸಹಿ ಮಾಡಿ ಕಾಮಗಾರಿ ಹಸ್ತಾಂತರಿಸಿದ್ದಾರೆ. ಈ ಅಧಿಕಾರಿಗಳ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಬೇಕೆಂದು ಚಾಂಡೇಶ್ವರ ಗ್ರಾಮಸ್ಥರು ಶಾಸಕರಾದ ಪ್ರಭು ಬಿ.ಚವ್ಹಾಣ ಅವರನ್ನು ಒತ್ತಾಯಿಸಿದರು.

ಗ್ರಾಮ ಸಂಚಾರದ ನಿಮಿತ್ತ ಶಾಸಕರು ಸೋಮವಾರ ರಂದು ಚಾಂಡೇಶ್ವರ ಗ್ರಾಮಕ್ಕೆ ಭೇಟಿ ನೀಡಿದ ವೇಳೆ ಸಾರ್ವಜನಿಕರು ಗ್ರಾಮದಲ್ಲಾದ ಜೆಜೆಎಂ ಕಾಮಗಾರಿಯ ಬಗ್ಗೆ ದೂರುಗಳನ್ನು ಸಲ್ಲಿಸಿದರು. ತಾವು ಪ್ರಯತ್ನಪಟ್ಟು ಕೋಟ್ಯಂತರ ಅನುದಾನ ತಂದು ಕಾಮಗಾರಿ ಇಟ್ಟಿದ್ದೀರಿ. ಆದರೆ ಅಧಿಕಾರಿಗಳು ಮತ್ತು ಗುತ್ತಿಗೆದಾರರು ಸೇರಿಕೊಂಡು ಕಾಮಗಾರಿಯ ಹಣವನ್ನು ನುಂಗಿ ಹಾಕಿದ್ದಾರೆ. ಅರ್ಧ ಗ್ರಾಮಕ್ಕೆ ನೀರಿನ ಸಂಪರ್ಕವೇ ಕಲ್ಪಿಸಿಲ್ಲ. ಪೈಪ್ ಲೈನ್ ಗಾಗಿ ಕೊರೆದ ತಗ್ಗು ಗುಂಡಿಗಳನ್ನು ಮುಚ್ಚಿಲ್ಲ. ಕೆಲಸ ಮಾಡದೇ ಬಿಲ್ಲುಗಳನ್ನು ಮಾಡಲಾಗಿದೆ ಎಂದು ಆರೋಪಿಸಿದರು.

ಗ್ರಾಮ ಪಂಚಾಯತಿಯ ಅಧ್ಯಕ್ಷರು



ಮತ್ತು ಸದಸ್ಯರ ಗಮನಕ್ಕೆ ತರದೇ ಅಧ್ಯಕ್ಷರ ನಕಲಿ ಸಹಿ ಮಾಡಿ ಕಾಮಗಾರಿಯನ್ನು ಪಂಚಾಯಿತಿಗೆ ಹಸ್ತಾಂತರಿಸಿದ್ದಾರೆ. ಹಿಂದೆ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಎಇಇ ಪ್ರಭಾರದಲ್ಲಿದ್ದ ಸುಭಾಷ, ಜೆಇ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿ ಅವರನ್ನು ಜೈಲಿಗೆ ಕಳುಹಿಸಬೇಕು ಮತ್ತು ಗುತ್ತಿಗೆದಾರರನ್ನು ಕಪ್ಪು ಪಟ್ಟಿಗೆ ಸೇರಿಸಬೇಕೆಂದು ಶಾಸಕರನ್ನು ಒತ್ತಾಯಿಸಿದರು.

ಈ ವೇಳೆ ಮಾತನಾಡಿದ ಶಾಸಕರು, ಜನತೆಗೆ ಕುಡಿಯುವ ನೀರಿನ ಸೌಲಭ್ಯ ಒದಗಿಸಬೇಕೆಂದು ಸಾಕಷ್ಟು ಪ್ರಯತ್ನಪಟ್ಟು 240 ಕೋಟಿಗೂ ಹೆಚ್ಚಿನ ಅನುದಾನ ತಂದಿದ್ದೇನೆ. ಆದರೆ ಎಲ್ಲಿಯೂ ಕೆಲಸ ಸರಿಯಾಗಿ ಆಗಿಲ್ಲ. ಹೋದ ಕಡೆಗಳೆಲ್ಲೆಲ್ಲ ಜೆಜೆಎಂ ಬಗ್ಗೆ ದೂರುಗಳು ಬರುತ್ತಿವೆ. ಕುಡಿಯುವ ನೀರಿನ ವಿಷಯದಲ್ಲಿಯೂ ಅಕ್ರಮ ಮಾಡಿದರೆ ಜನತೆಯ ಶಾಪಕ್ಕೆ ಗುರಿಯಾಗುತ್ತೀರಿ ಎಂದು ಅಧಿಕಾರಿಗಳನ್ನು ತೀವ್ರ ತರಾಟೆಗೆ ತೆಗೆದುಕೊಂಡರು.

ಜೆಜೆಎಂ ಕಾಮಗಾರಿ ಹಸ್ತಾಂತರಿಸುವ ಮುನ್ನ ಎಲ್ಲ ಮನೆಗಳಿಗೆ ಭೇಟಿ ನೀಡಿ ನೀರು ಸರಬರಾಜು ಆಗುತ್ತಿರುವುದು ಖಚಿತವಾದ ನಂತರ ಗ್ರಾಮ ಸಭೆ ನಡೆಸಿ ಒಪ್ಪಿಗೆ ಪಡೆಯಬೇಕೆಂಬ ನಿಯಮವಿದೆ. ನಾನು ಕೂಡ ಅಧಿಕಾರಿಗಳಿಗೆ ಅನೇಕ ಬಾರಿ ಹೇಳಿದ್ದೇನೆ. ಆದರೂ ನಿಯಮಗಳನ್ನು ಗಾಳಿಗೆ ತೂರಿ ಮನಸ್ಸಿಗೆ ಬಂದಂತೆ ಕೆಲಸ ಮಾಡಿದ್ದಾರೆ. ಅಧ್ಯಕ್ಷರ ನಕಲಿ ಸಹಿ ಮಾಡಿ ಮಾಡಿದ್ದಾರೆಂದು ಜನತೆ ಆರೋಪಿಸುತ್ತಿದ್ದಾರೆ. ಇಂತಹ ಕೆಲಸ ಅಕ್ಷಮ್ಯ ಅಪರಾಧ. ಜನತೆಯ ಬೇಡಿಕೆಯಂತೆ ತಪ್ಪು ಮಾಡಿದ ಅಧಿಕಾರಿಗಳ ವಿರುದ್ಧ ಕ್ರಮವಾಗಬೇಕು. ಈ ಬಗ್ಗೆ ಕೂಡಲೇ ಕ್ರಮ ಜರುಗಿಸಬೇಕೆಂದು ತಾಲ್ಲೂಕು ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿಗೆ ಶಾಸಕರು ನಿರ್ದೇಶನ ನೀಡಿದರು. ಹಾಗೆಯೇ ಈ ಬಗ್ಗೆ ಗ್ರಾಮಸ್ಥರು ಲಿಖಿತ ದೂರು ಸಲ್ಲಿಸುವಂತೆ ಗ್ರಾಮಸ್ಥರಿಗೆ ತಿಳಿಸಿದರು. ತಾಲೂಕಿನ ಡಿಗ್ಗಿ ಗ್ರಾಮದಲ್ಲಿ ನಡೆದ ಗ್ರಾಮ ಸಂಚಾರ ಕಾರ್ಯಕ್ರಮದಲ್ಲಿ ಗ್ರಾಮದ ವಿವಿಧ ಸಮಸ್ಯೆ ಮತ್ತು ಆಗಬೇಕಾದ ಅಭಿವೃದ್ಧಿ ಕೆಲಸದ ಬಗ್ಗೆ ಯುವ ಮುಖಂಡ ಬಂಟಿ ರಾಂಪುರೆ ಅವರು ಶಾಸಕ ಗಮನಕ್ಕೆ ತಂದರು, ಕಳೆದ ವರ್ಷ ಆಶ್ವಾಸನೆ ನೀಡಿದ ಕೆಲಸದ ಬಗ್ಗೆ ಬೇಸರ ವ್ಯಕ್ತ ಪಡಿಸಿದರು.

ಔರಾದ(ಬಿ) ಮತಕ್ಷೇತ್ರದಲ್ಲಿ ಮೊದಲಿನಿಂದಲೂ ನೀರಿನ ಸಮಸ್ಯೆಯಿದೆ. ಜನತೆಗೆ ಕುಡಿಯುವ ನೀರಿನ ಶಾಶ್ವತ ಪರಿಹಾರ ಕಂಡುಕೊಳ್ಳಬೇಕೆಂಬ ಉದ್ದೇಶದಿಂದ ಜೆಜೆಎಂ ಯೋಜನೆಗೆ ಅನುದಾನ ತಂದಿದ್ದೇನೆ. ಬಹಳಷ್ಟು ಕಡೆಗಳಲ್ಲಿ ಕಾಮಗಾರಿ ಕಳಪೆಯಾಗಿ ಮಾಡಿದ್ದಾರೆಂಬ ದೂರುಗಳು ಬಂದಿವೆ. ನಾನು ಈ ಬಗ್ಗೆ ಸರ್ಕಾರಕ್ಕೆ ಪತ್ರಗಳನ್ನು ಬರೆದು ಕಳಪೆ ಕಾಮಗಾರಿ ಮಾಡಿದವರ ವಿರುದ್ಧ ಕ್ರಮ ಜರುಗಿಸಬೇಕೆಂದು ಸರ್ಕಾರಕ್ಕೆ ಮನವಿ ಮಾಡಿದ್ದೇನೆ. ವಿಧಾನಸಭಾ ಅಧಿವೇಶನದಲ್ಲಿಯೂ ಧ್ವನಿ ಎತ್ತಿದ್ದೇನೆ. ಕಾಮಗಾರಿ ಸರಿಪಡಿಸುವ ವರೆಗೆ ನಾನು ಸುಮ್ಮನಿರುವುದಿಲ್ಲ ಎಂದು ಹೇಳಿದರು. ಕೊಟಗ್ಯಾಳ, ರಾಂಪೂರ, ಚಾಂಡೇಶ್ವರ, ಹುಲಸೂರ, ಸೋನಾಳವಾಡಿ, ಸೋನಾಳ, ಹೊರಂಡಿ, ಡಿಗ್ಗಿ ಹಾಗೂ ಡೋಣಗಾಂವ (ಎಂ) ನಲ್ಲಿ ಗ್ರಾಮ ಸಂಚಾರ ನಡೆಸಿ ಸಾರ್ವಜನಿಕರ ಅಹವಾಲುಗಳನ್ನು ಆಲಿಸಿದರು. ಈ ಸಂದರ್ಭದಲ್ಲಿ ತಹಸೀಲ್ದಾರರಾದ ಅಮಿತಕುಮಾರ ಕುಲಕರ್ಣಿ, ತಾಲ್ಲೂಕು ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿ ಹಣಮಂತರಾಯ ಕೌಟಗೆ, ತಾಲ್ಲೂಕು ಆರೋಗ್ಯಾಧಿಕಾರಿ ಡಾ.ಗಾಯತ್ರಿ, ಲೋಕೋಪಯೋಗಿ ಇಲಾಖೆ ಎಇಇ ಪ್ರೇಮಸಾಗರ, ಪಂಚಾಯತ ರಾಜ್ ಎಂಜಿನಿಯರಿಂಗ್ ಇಲಾಖೆ ಎಇಇ ಸುನೀಲ ಚಿಲ್ಲರ್ಗೆ, ಜೆಸ್ಕಾಂ ಎಇಇ ರವಿ ಕಾರಬಾರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಎಇಇ ಮಾರುತಿ ರಾಠೋಡ, ಪಿಎಂಜಿಎಸ್‌ವೈ ಎಇಇ ಸುಭಾಷ ವಾಗಮಾರೆ, ಶಿಶು ಅಭಿವೃದ್ಧಿ ಯೋಜನಾಧಿಕಾರಿ ಇಮಲಪ್ಪ, ಮುಖಂಡರಾದ ವಸಂತ ಬಿರಾದಾರ, ಧೊಂಡಿಬಾ ನರೋಟೆ, ಶಿವಾಜಿರಾವ ಪಾಟೀಲ ಮುಂಗನಾಳ, ಶಿವರಾಜ ಅಲ್ಮಾಜೆ, ರಂಗಾರಾವ ಜಾಧವ, ಕಿರಣ ಪಾಟೀಲ, ಬಂಟಿ ರಾಂಪೂರೆ, ರಾಜಕುಮಾರ ಅಲಬಿದೆ, ಪ್ರವೀಣ ಕಾರಬಾರಿ, ಭರತ ಕದಂ, ಗಿರೀಶ್ ಒಡೆಯರ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಜಿಲ್ಲಾ ಕಾಂಗ್ರೆಸ್ ಕಛೇರಿಯಲ್ಲಿ 141ನೇ ಕಾಂಗ್ರೆಸ್ ಸಂಸ್ಥಾಪನ ದಿನಾಚರಣೆ ಆಚರಣೆ



• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಭಾನುವಾರ ಬೆಳಗ್ಗೆ ಗಂಟೆಗೆ ಬಳ್ಳಾರಿ ಜಿಲ್ಲಾ ಕಾಂಗ್ರೆಸ್ ಕಛೇರಿಯಲ್ಲಿ, ಬಳ್ಳಾರಿ ಜಿಲ್ಲಾ ಕಾಂಗ್ರೆಸ್ ಸಮಿತಿಯ* ಅಧ್ಯಕ್ಷರಾದ ಮಾನ್ಯ ಶ್ರೀ ಅಲ್ಲಂ ಪ್ರಶಾಂತ್ ರವರ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ ಪಕ್ಷದ 141ನೇ ಸಂಸ್ಥಾಪನ ದಿನವನ್ನು* " *ಸಮರ್ಪಣಾ ದಿನ" ವನ್ನಾಗಿ ಬಳ್ಳಾರಿ ಮಹಾಪೌರರಾದ ಗಾದೆಪ್ಪ ಅವರು ಪೂಜೆ ಮಾಡುವ ಮೂಲಕ ವಿಜೃಂಭಣೆಯಿಂದ ಆಚರಿಸಲಾಯಿತು.ಈ ಸಮಯದಲ್ಲಿ ಕಾಂಗ್ರೆಸ್ ಪಕ್ಷವನ್ನು ಸ್ಥಾಪಿಸಿದ ಅಲನ್ ಆಕ್ಟೇವಿಯನ್ ಹೂಮ್ ರವರ ಮತ್ತು ಗಾಂಧಿ ಯವರ ಭಾವಚಿತ್ರಗಳಿಗೆ ಪುಷ್ಪಗಳನ್ನು ಹಾಕುವ ಮೂಲಕ ಎಲ್ಲಾ ಕಾರ್ಯಕರ್ತರಿಗೆ ಶುಭಹಾರೈಸಿದರು.

ಕಾಂಗ್ರೆಸ್ ಪಕ್ಷದ ಸ್ಥಾಪನೆ ಮತ್ತು ಅಭಿವೃದ್ಧಿಗೆ ಶ್ರಮಿಸಿದ ಎಲ್ಲಾ ಮಹಾನ್ ಯಕರಿಗೆ ಗೌರವಗಳನ್ನು ಸಲ್ಲಿಸಲಾಯಿತು,ನಮ್ಮ ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಕಾಂಗ್ರೆಸ್ ಪಕ್ಷದ ಪಾತ್ರ ಮತ್ತು ನಾಯಕರ ತ್ಯಾಗ ಬಲಿದಾನಗಳನ್ನು ಸ್ಮರಿಸಲಾಯಿತು. ಅಧ್ಯಕ್ಷರು, ಮುಖಂಡರು ಮತ್ತು ಕಾರ್ಯಕರ್ತರು ಎಲ್ಲಾರೂ ಕಾಂಗ್ರೆಸ್ ಪಕ್ಷದ ಇತಿಹಾಸ, ಹೋರಾಟ ಮತ್ತು ದೇಶಕ್ಕೆ ನೀಡಿದ ಕೊಡುಗೆಗಳ ಬಗ್ಗೆ ಭಾಷಣಗಳನ್ನು ಮಾಡಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ಹಿರಿಯ ನಾಯಕರಾದ ಕಲ್ಲುಕಂಭ ಪಂಪಾಪತಿ, ಎಲ್. ಮಾರೆಣ್ಣ, ಜಿ.ಜೆ.ರವಿಕುಮಾರ್, ವಿರಸೇನಾ ರೆಡ್ಡಿ, ಡಿಸಿಸಿ ಕಾರ್ಯಾಧ್ಯಕ್ಷರಾದ ಭೋಯಪಾಟಿ ವಿಷ್ಣು, ಉಪಾಧ್ಯಕ್ಷರಾದ .ಶ್ರೀನಿವಾಸುಲು, ಕೆಪಿಸಿಸಿ ಸಂಯೋಜಕರಾದ ಬಿ.ಎಂ.ಪಾಟೀಲ್,ಪ್ರಚಾರ ಸಮಿತಿಯ ನಗರ ಅಧ್ಯಕ್ಷರಾದ ಜಿ.ಎಸ್.ಈರನ್ನ ಗೌಡ, ಡಿಸಿಸಿ ಕಾರ್ಯಕಾರಿಣಿ ಸದಸ್ಯರಾದ ವೆಂಕಟಲಕ್ಷ್ಮಿ ನಾರಾಯಣ, ಮುಂಚೂಣಿ ಘಟಕಗಳ ಅಧ್ಯಕ್ಷರುಗಳಾದ ಎರಕುಲ ಸ್ವಾಮಿ .ಎಸ್.ಮಂಜುಳ, ಕನೇಕಲ್ ಮಾಬುಸಾಬ್, ಚಾನಲ್ ಮಂಜುನಾಥ್, ಮುಖಂಡರುಗಳಾದ ಜಗನ್ನಾಥ್, ಮುರಳೀಧರ, ಎಸ್.ಸಮೀರ್, ಗೋನಾಳ್ ನಾಗಭೂಷಣ್ ಗೌಡ, ಮೇಟಿ ದಿವಾಕರ್ ಗೌಡ, ಎಸ್. ವಿಜಯ್ ಕುಮಾರ್, ಗಾದಿಲಿಂಗಪ್ಪ, ಲಿಂಗರಾಜ್, ಸತೀಶ್ ಚಕ್ರವರ್ತಿ, ಉಮ್ಮಿ ಸೌದ, ವಿಜಯ ಕುಮಾರಿ, ಗೌಸಿಯ, ಖಲೀಮ್, ಹುಸೇನ್ ಸಾಬ್, ಅನ್ವರ್ ಭಾಷ, ನರೇಂದ್ರ ಮತ್ತು ಇತರರು ಉಪಸ್ಥಿತರಿದ್ದರು.

# ಯುವಜನರನ್ನು ವೋಟ್ ಬ್ಯಾಂಕ್ ಮಾಡಿಕೊಂಡಿದ್ದೇವೆ: ಜಾನೇಕಲ್



• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ ಸಿಂಧನೂರು;

ಆಲ್ ಇಂಡಿಯಾ ಡೆಮಾಕ್ರೆಟಿಕ್ ಯೂತ್ ಆರ್ಗನೈಸೇಶನ್(ಎಐಡಿವೈಓ) ಅಖಿಲ ಭಾರತ ಸಮಿತಿಯ ಕರೆಯ ಮೇರೆಗೆ ಇಂದು ತಹಶೀಲ್ದಾರ್ ಕಚೇರಿ ಎದುರು ಸಹಿ ಸಂಗ್ರಹ ಅಭಿಯಾನ ನಡೆಸಲಾಯಿತು. ಕೇಂದ್ರ ಸರ್ಕಾರದ 78 ಇಲಾಖೆಗಳಲ್ಲಿ ಖಾಲಿ ಇರುವ 9.79 ಲಕ್ಷ ಹುದ್ದೆಗಳನ್ನು ಹಾಗೂ ಲಕ್ಷರಾಜ್ಯದ 43 ಇಲಾಖೆಗಳಲ್ಲಿನ 2.85 ಲಕ್ಷ ಹುದ್ದೆಗಳನ್ನು ಭರ್ತಿ ಮಾಡಬೇಕು.ಎಲ್ಲಾ ನೇಮಕಾತಿಗಳ ವಯೋಮಿತಿಯನ್ನು ಕನಿಷ್ಠ ಐದು ವರ್ಷ ಹೆಚ್ಚಿಸಬೇಕು.ಎಲ್ಲಾ ನೇಮಕಾತಿ ಪ್ರಕ್ರಿಯೆಗಳನ್ನು ಸಂಪೂರ್ಣವಾಗಿ ಪಾರದರ್ಶಕವಾಗಿ ನಡೆಸಬೇಕು.

ಎಲ್ಲಾ ರೀತಿಯ ಪರೀಕ್ಷಾ ಅಕ್ರಮಗಳನ್ನು ತಡೆಗಟ್ಟಬೇಕು. ನೇಮಕಾತಿಯ ಅರ್ಜಿ ಶುಲ್ಕವನ್ನು ಸಂಪೂರ್ಣವಾಗಿ ಕೈಬಿಡಬೇಕು ಹಾಗೂ ನೇಮಕಾತಿ ಪರೀಕ್ಷೆಗಳಿಗೆ ಪರೀಕ್ಷಾರ್ಥಿಗಳು ಹಾಜರಾಗಲು ಉಚಿತ ಸಾರಿಗೆ ವ್ಯವಸ್ಥೆ ಮಾಡಬೇಕು. ಖಾಲಿ ಇರುವ ಚಿತ್ರಕಲಾ, ಸಂಗೀತ, ದೈಹಿಕ ಶಿಕ್ಷಣ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಬೇಕು ಇನ್ನು ಮುಂತಾದ ಹಕ್ಕೊತ್ತಾಯಗಳ ಈಡೇರಿಕೆಗಾಗಿ ಈ ಸಹಿಸಂಗ್ರಹ ಅಭಿಯಾನವನ್ನು ನಡೆಸಲಾಯಿತು. ಈ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾಧ್ಯಕ್ಷರಾದ ಚನ್ನಬಸವ ಜಾನೇಕಲ್, ಕೇಂದ್ರ ಮತ್ತು ರಾಜ್ಯದಲ್ಲಿ ಅಧಿಕಾರ ನಡೆಸಿದ ವಿವಿಧ ಪಕ್ಷಗಳ ಸರ್ಕಾರಗಳು ಯುವಜನರನ್ನು ವೋಟ್ ಬ್ಯಾಂಕ್ ಆಗಿ ಮಾಡಿಕೊಂಡಿವೆ. ಅವರ ಬಗ್ಗೆ ಯಾವುದೇ ಕಾಳಜಿಯನ್ನು ವಹಿಸುತ್ತಿಲ್ಲ. ಉದ್ಯೋಗಗಳನ್ನು ಕೊಡುತ್ತಿಲ್ಲ. ಗುತ್ತಿಗೆ ಹೊರಗುತ್ತಿಗೆ ಅತಿಥಿ ಶಿಕ್ಷಕರ ಹೆಸರಿನಲ್ಲಿ ಗೌರವದಿಂದ ಬದುಕಲು ಸಾಧ್ಯವಿಲ್ಲದ ವೇತನದಲ್ಲಿ ಬಿಡಿಸಿಕೊಳ್ಳಲಾಗುತ್ತಿದೆ. ಇತ್ತೀಚಿಗೆ ಧಾರವಾಡದಲ್ಲಿ ಉದ್ಯೋಗ ಕೊಡಿ ಎಂದು ಶಾಂತಿಯುತವಾಗಿ ಹೋರಾಟ ನಡೆಸುತ್ತಿದ್ದ ಉದ್ಯೋಗ ಆಕಾಂಕ್ಷಿಗಳ ಮೇಲೆ ಲಾಠಿ ಪ್ರಹಾರ ನಡೆಸಲಾಗಿದೆ. ಇದು ಅತ್ಯಂತ ಖಂಡನೀಯ ಕ್ರಮವಾಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕೂಡಲೇ ಹುದ್ದೆಗಳನ್ನು ಭರ್ತಿ ಮಾಡಲು ಅಧಿಸೂಚನೆ ಹೊರಡಿಸಲು ಕ್ರಮ ಜರುಗಿಸಬೇಕೆಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಉಪನ್ಯಾಸಕರಾದ ಶಂಕರ್ ಗುರಿಕಾರ, ವಕೀಲರಾದ ಭೀಮರಾಯ, ಪತ್ರಕರ್ತರಾದ ನಾಗರಾಜ ಕವಿತಾಳ, ವೀರಭದ್ರಪ್ಪ ಜವಳಗೇರಾ, ಕರವೇ ಜಿಲ್ಲಾಧ್ಯಕ್ಷ ಗಂಗಣ್ಣ, ಕಾರ್ಯಾಧ್ಯಕ್ಷ ಉಮೇಶ್ ಗೌಡ ಹರಳಹಳ್ಳಿ, ವೆಂಕಟೇಶ್ ವಿನೋದ್ ಸೇರಿದಂತೆ ಸಹಿ ಮಾಡಿ ಬೆಂಬಲಿಸಿದರು. ಯುವಕರಾದ ರಾಘವೇಂದ್ರ ಇನ್ನು ಮುಂತಾದ ಯುವಜನರು, ಹಿರಿಯರು, ನೂರಾರು ನಾಗರಿಕರು ಸಹಿ ಸಂಗ್ರಹ ಅಭಿಯಾನದಲ್ಲಿ ಭಾಗವಹಿಸಿ, ಬೆಂಬಲಿಸಿದರು.

# ವಿಜೃಂಭಣೆಯಿಂದ ನಡೆದ ಹೊನ್ನಾರಾಕಾ ದೇವರ ಉತ್ಸವ



• ಮಲ್ಲಮ್ಮ ನುಡಿ ವಾರ್ತೆ ಅಂಕೋಲಾ :

ಇಲ್ಲಿಯ ಸಮೀಪದ ವಂದಿಗೆ ಗ್ರಾಮದ ಹೊನ್ನಾರಾಕಾ ನಾಗದೇವರ ವರ್ಧಂತಿ ಉತ್ಸವ ಶ್ರದ್ಧಾ ಭಕ್ತಿಯಿಂದ ನೆರವೇರಿತು. ಪ್ರತಿವರ್ಷ ನಡೆಯುವ ಈ ಉತ್ಸವಕ್ಕೆ ಸಾವಿರಾರು ಜನರು ಆಗಮಿಸಿ ಶ್ರೀ ದೇವರ ಕೃಪೆಗೆ ಪಾತ್ರರಾಗುತ್ತಿದ್ದಾರೆ. ಈ ಬಾರಿಯೂ ಕೂಡ ಸಾವಿರಾರು ಭಕ್ತರು ಆಗಮಿಸಿ ಶ್ರೀದೇವರ ದರ್ಶನ ಪಡೆದು ಅನ್ನಪ್ರಸಾದವನ್ನು ಸ್ವೀಕರಿಸಿದರು.

# ದಿನಕರ ವೇದಿಕೆಯಿಂದ ಸನ್ಮಾನ



• ಮಲ್ಲಮ್ಮ ನುಡಿ ವಾರ್ತೆ ಅಂಕೋಲಾ :

ಆದರ್ಶ ಶಿಕ್ಷಕ, ಕವಿ, ಭಾವಜೀವಿಯಾಗಿರುವ ಶಾಂತಾರಾಮ ನಾಯಕರಿಗೆ ಪ್ರತಿಷ್ಠಿತ ಕರ್ನಾಟಕ ಸಂಘದ ಸ.ಪ. ಗಾಂವಕರ ದತ್ತಿ ಪ್ರಶಸ್ತಿ ಬಂದಿರುವುದು ನಮಗೆಲ್ಲಾ ಸಂತಸ ತಂದಿದೆ. ಶಾಂತಾರಾಮ ನಾಯಕ ಅವರು ಪರಿಪೂರ್ಣ ಶಿಕ್ಷಕರಾಗುವ ಜತೆಗೆ ಸಾಮಾಜಿಕ ಪ್ರಜ್ಞೆ ಹಾಗೂ ಹೊಣೆಗಾರಿಕೆಯುಳ್ಳ ವ್ಯಕ್ತಿತ್ವದವರಾಗಿದ್ದವರು ಎಂದು ದಿನಕರ ವೇದಿಕೆಯ ಅಧ್ಯಕ್ಷ ರವೀಂದ್ರ ಕೇಣಿ ಹೇಳಿದರು.

ದಿನಕರ ವೇದಿಕೆಯ ಕಾರ್ಯದರ್ಶಿ ಸಂದೇಶ ಉಳ್ಳೆಕಾಶಿ, ನಿವೃತ್ತ ಶಿಕ್ಷಕ ಎಂ.ಎಂ. ಕರ್ಕಿಕರ, ಲೇಖಕ ಮಹಾಂತೇಶ ರೇವಡಿ,ಸಂಘಟಕರಾದಶ್ರೀಧರ ನಾಯ್ಕ, ಎನ್.ವಿ. ರಾಠೋಡ, ರೋಶನ್ ಕೇಣಿ, ಪ್ರದೀಪ ನಾಯಕ, ಮಹೇಶ ನಾಯಕ, ದಿಪ್ತಿ ನಾಯಕ ಇತರರು ಉಪಸ್ಥಿತಿರಿದ್ದರು.

# ಸಾಹಿತ್ಯದ ವಸ್ತು ತನ್ನಲ್ಲಿ ಲೀನ ಮಾಡಿಕೊಳ್ಳುತ್ತದೆ : ಸಿದ್ದರಾಮ ಕಲ್ಮಠ



ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:

ಕನ್ನಡದ ಯುಗದ ಕವಿ ಜಗದ ಕವಿ ರಾಷ್ಟ್ರಕವಿ ರಸಋಷಿ ಕರ್ನಾಟಕ ರತ್ನ ಕನ್ನಡದ ಪ್ರಪ್ರಥಮ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ಕುವೆಂಪುರವರ ಸಾಹಿತ್ಯವನ್ನು ಓದುವಾಗ ಸಾಹಿತ್ಯದ ವಸ್ತು ಓದುಗರನ್ನು ತನ್ನಲ್ಲಿ ಸೆಳೆದುಕೊಳ್ಳುತ್ತದೆ, ಅವರ ಕಾದಂಬರಿ ಮಲೆಗಳಲ್ಲಿ ಮದುವೆಗಳು ಕಾನೂರು ಸುಬ್ಬಮ್ಮ ಹೆಗ್ಗಡತಿ ಮಲೆನಾಡಿನ ಸೊಬಗನ್ನು ಮತ್ತು ಬದುಕನ್ನು ಕಣ್ಣು ಮುಂದೆ ತೆರೆದಿಡುತ್ತವೆ ಇಂತಹ ಕಥಾ ವಸ್ತುಗಳಿಂದಲೇ ಕುವೆಂಪು ರಾಷ್ಟ್ರಕವಿಯಾಗಿದ್ದಾರೆ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟ ಪೂರ್ವ ಬಳ್ಳಾರಿ ಜಿಲ್ಲೆ ಅಧ್ಯಕ್ಷ ಸಿದ್ದರಾಮ ಕಲ್ಮಠ ತಿಳಿಸಿದರು.

ಅವರು ಇಂದು ನಗರದ ಪಾರ್ವತಿ ನಗರದಲ್ಲಿನ ಕರ್ನಾಟಕ ರಕ್ಷಣಾ ವೇದಿಕೆ ಶಿವರಾಮೇಗೌಡ ಬಣ ವತಿಯಿಂದ ಹಮ್ಮಿಕೊಂಡಿದ್ದ ಕುವೆಂಪುರವರ 121ನೇ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿ, ಶಿವರಾಮೇ ಗೌಡ ನೇತೃತ್ವದ ಕರ್ನಾಟಕ ರಕ್ಷಣಾ ವೇದಿಕೆ ವತಿಯಿಂದ ಕನ್ನಡ ಸಂಘಟನೆಗಳ ಕಾರ್ಯಕರ್ತರಿಗೆ ಕನ್ನಡ ಸಾಹಿತಿ ಮತ್ತು ಸಾಹಿತ್ಯದ ಬಗ್ಗೆ ತಿಳಿಯುವ ತಿಳಿಸಿಕೊಡುವಂತಹ ಕಾರ್ಯಗಾರವನ್ನು ಹಮ್ಮಿಕೊಳ್ಳಬೇಕು ಇದರಿಂದ ಕನ್ನಡ ಸಂಘಟನೆಯ ಪ್ರತಿ ಕಾರ್ಯಕರ್ತನಿಗೆ

ಕನ್ನಡ ಸಾಹಿತ್ಯದ ಪರಿಚಯವಾಗುತ್ತದೆ ಎಂದು ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳ ಜಿಲ್ಲಾ ಅಧ್ಯಕ್ಷ ಕೆ ರಾಜಶೇಖರ್ (ರಾಜಣ್ಣ) ಅವರಿಗೆ ಕಿವಿಮಾತು ಹೇಳಿದರು.

ಈ ಸಂದರ್ಭದಲ್ಲಿ ರಾಜಣ್ಣ ಮಾತನಾಡಿ, ಸಿದ್ದರಾಮ ಕಲ್ಮಠ ಸರ್ ಅವರ ಸಲಹೆ ಇಂದಿನ ದಿನಗಳಲ್ಲಿ ಅತ್ಯಂತ ಉಚಿತವಾಗಿದೆ ಮುಂದಿನ ದಿನಗಳಲ್ಲಿ ಕಾರ್ಯಗಾರ ಅಥವಾ ಶಿಬಿರವನ್ನು ನಮ್ಮ ಕನ್ನಡ ಕಾರ್ಯಕರ್ತರಿಗಾಗಿ ಆಯೋಜಿಸುತ್ತೇನೆ ಎಂದರು.

ಈ ಸಂದರ್ಭದಲ್ಲಿ ಪಾಲಿಕೆಯ ಸದಸ್ಯ ಗುಡಿಗಂಟೆ ಹನುಮಂತ, ನಾಗರಾಜ ಸೇರಿದಂತೆ ಇನ್ನಿತರರು ಮಾತನಾಡಿದರು.

ಈ ಕಾರ್ಯಕ್ರಮದಲ್ಲಿ ವೇದಿಕೆಯ ಕಾರ್ಯಕರ್ತರಾದ ಕಟ್ಟಿಗೆ ಸೂರಿ ಡೇವಿಡ್ ರಾಮಮೂರ್ತಿ ಜಡೆ ಗೌಡ ಶ್ರೀಶೈಲ ಉಮಾಪತಿ ಮಲ್ಲಯ್ಯ ಮಾರಣ್ಣ ದುರ್ಗೇಶ್ ಗುರುರಾಜ ಪಾಂಡವ ತಿಪ್ಪೇಸ್ವಾಮಿ ಸೇರಿದಂತೆ ಹಲವಾರು ಜನ ರಕ್ಷಣಾ ವೇದಿಕೆಯ ಕಾರ್ಯಕರ್ತರು.

# ಸಮಗ್ರ ಕೃಷಿ ಪದ್ದತಿಗೆ ಜೆ ಎಸ್ ಡಬ್ಲ್ಯೂ ಪ್ರೋತ್ಸಾಹ



• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ .

ಜೆ ಎಸ್ ಡಬ್ಲ್ಯೂ ಫೌಂಡೇಶನ್ ವತಿಯಿಂದ ಸಂಡೂರು ತಾಲೂಕಿನ ತಾಳೂರು ಗ್ರಾಮದಲ್ಲಿ ರಾಷ್ಟ್ರೀಯ ರೈತರ ದಿನಾಚರಣೆ ಮತ್ತು ಮಾದರಿ ತೋಟದ ಪ್ರಾತ್ಯಕ್ಷಿತೆ ಕ್ಷೇತ್ರ ಭೇಟಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ತಾಳೂರು ಗ್ರಾಮದ ಪ್ರಗತಿಪರ ರೈತ ವೀರೇಶ್ ಟಿ ಅವರು ಸಮಗ್ರ ಕೃಷಿ ಪದ್ದತಿ ಅಳವಡಿಸಿಕೊಂಡಿದ್ದು ಎಲೆ ಬಳ್ಳಿ, ಬಾಳೆ, ಈರುಳ್ಳಿ ಮುಂತಾದ 23 ವಿವಿಧ ಬೆಳೆಗಳನ್ನು ಬೆಳೆದು ಉತ್ತಮ ಆದಾಯ ಗಳಿಸುವುದರ ಮೂಲಕ ಇತರ ರೈತರಿಗೂ ಮಾದರಿಯಾಗಿದ್ದಾರೆ. ಕಾರ್ಯಕ್ರಮದ ಉದ್ಘಾಟನೆ ಮಾಡಿ ಮಾತನಾಡಿದ ಜೆ ಎಸ್ ಡಬ್ಲ್ಯೂ ಫೌಂಡೇಶನ್ ಸೌತ್ ಝೋನಲ್ ಮುಖ್ಯಸ್ಥ ಪೆದ್ದಣ್ಣ ಬೀಡಲಾ " ಎಸ್ ಡಬ್ಲ್ಯೂ ಫೌಂಡೇಶನ್ ತಾಲೂಕಿನ 10 ಆಯ್ದ ಗ್ರಾಮಗಳಲ್ಲಿ ಒಟ್ಟು 300 ರೈತರಿಗೆ ಸಮಗ್ರ ಕೃಷಿಗೆ ಉತ್ತೇಜನ ನೀಡುತ್ತಿದ್ದು ಈಗಾಗಲೇ ಎಲ್ಲರಿಗೂ ಪ್ರಾಥಮಿಕ ಹಂತದ ತರಬೇತಿಯನ್ನು ನೀಡಲಾಗಿದ್ದು, ಮುಂದಿನ ವಾರ ಮಣ್ಣು ಪರೀಕ್ಷೆ, ಜೈವಿಕ ರಸಗೊಬ್ಬರ ಮತ್ತು ತರಕಾರಿ ಬೀಜಗಳ ವಿತರಣೆ, ಹೆರೆಹುಳು ಸಮೇತ ಹೆರೆಹುಳು ತೊಟ್ಟಿ ಚೀಲ, 20 ಗಿರಿರಾಜ ತಳಿ ದೇಶೀ ಕೋಳಿಮರಿಗಳ ವಿತರಣೆ ಮತ್ತು 1 ರಿಂದ 2 ಎಕೆ–ರೆಗೆ ಪ್ರತಿ ರೈತರಿಗೆ ಅವಶ್ಯವಿರುವ ಗಿಡಗಳನ್ನು ಮತ್ತು ತರಬೇತಿಯನ್ನು ಉಚಿತವಾಗಿ ನೀಡಲಿದ್ದೇವೆ, ರೈತರು ಎಲ್ಲ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಅನುಕೂಲ ಪಡೆದುಕೊಳ್ಳಬೇಕೆಂದು" ತಿಳಿಸಿದರು

ಹಗರಿ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳಾದ ಡಾ. ಪಾಲಯ್ಯ ಮತ್ತು ಡಾ. ರವಿ ಯವರು ಸಮಗ್ರ ಕೃಷಿ ಪದ್ಧತಿ, ಮಣ್ಣು ಮತ್ತು ಮಳೆ ನೀರಿನ ಸದುಪಯೋಗ, ಕೀಟ ನಿರ್ವಹಣೆ, ಆಧುನಿಕ ಪದ್ದತಿಗಳು ಮತ್ತು ಸಂಡೂರು ಭಾಗದಲ್ಲಿನ ಬೆಳಗಳ ಕುರಿತು ರೈತರಿಗೆ ಮಾರ್ಗದರ್ಶನ ಮಾಡಿದರು ಮತ್ತು ರೈತರಿಗೆ ಪ್ರಶ್ನೆಗಳಿಗೆ ಸಲಹೆ ಸೂಚನೆಗಳನ್ನು ನೀಡಿದರು. ಇಫ್ಕೋ ಬಳ್ಳಾರಿ ಮ್ಯಾನೇಜರ್ ಹನಮಂತಪ್ಪ ಬೆಳೆಗಳ ಪ್ರತಿ ಪ್ಲಾಟ್ ನ ವಿವರಗಳನ್ನು ಅಂದರೆ ತಳಿ, ಒಟ್ಟು ಖರ್ಚು, ಒಟ್ಟು ಆದಾಯ ಮತ್ತು ಬೇಕಾದ ನಿರ್ವಹಣೆಯ ಕುರಿತು ರೈತರಿಗೆ ವಿವರವಾದ ಮಾಹಿತಿಯನ್ನು ತಿಳಿಸಿದರು

ಕಾರ್ಯಕ್ರಮದಲ್ಲಿ ಜೆ ಎಸ್ ಡಬ್ಲ್ಯೂ ಫೌಂಡೇಶನ್ ಕೃಷಿ ಕಾರ್ಯಕ್ರಮಗಳನ್ನು ಮುನ್ನಡೆಸುವ ನಾಗನಗೌಡ, ಅನುಷ್ಠಾನ ಸಂಸ್ಥೆ ಸ್ಕೋಡ್ ವೆಸ್ ಸಂಸ್ಥೆಯ ರಾಜ ಎನ್,ಪಿ. ಗಂಗಾಧರ ಮತ್ತು ಸಿಬ್ಬಂದಿಗಳು ಮತ್ತು ಸಂಡೂರು ಭಾಗದ ಪ್ರಗತಿಪರ ರೈತರಾದ ಬಸಪ್ಪ ಮತ್ತು 100 ಕ್ಕೂ ಅಧಿಕ ಆಸಕ್ತ ರೈತರು ಹಾಜರಿದ್ದರು

# ಕನ್ನಡ ನಾಡಿಗೆ ಕುವೆಂಪು ರವರ ಕೊಡುಗೆ ಅಪಾರ



ಮಲ್ಲಮ್ಮ ನುಡಿ ವಾರ್ತೆ ಬಸವಕಲ್ಯಾಣ:

ಕನ್ನಡ ನಾಡಿಗೆ ರಾಷ್ಟ್ರಕವಿ ಕುವೆಂಪು ರವರ ಕೊಡುಗೆ. ಕರ್ನಾಟಕಕ್ಕೆ ಕನ್ನಡ ಭಾಷೆಗೆ ಮೊಟ್ಟಮೊದಲ ಜ್ಞಾನಪೀಠ ಪ್ರಶಸ್ತಿ ಕೊಟ್ಟಂತಹ ಮಹಾನ್ ವ್ಯಕ್ತಿ ಇವರು ಆಗಿದ್ದರು ಎಂದು

ಮುಖ್ಯಗುರುಗಳಾದ ಚನ್ನವೀರ ಕೆ ಬಿರಾದಾರ ತಿಳಿಸಿದರು. ಇಲ್ಲಿನ ಶಾಂತಿನಿಕೇತನ ಪ್ರೌಢ ಶಾಲೆಯಲ್ಲಿ ರಾಷ್ಟ್ರಕವಿ ಕುವೆಂಪು ಅವರ ಜನ್ಮ ದಿನಾಚರಣೆಯ ಕಾರ್ಯಕ್ರಮದಲ್ಲಿ ಮಾತನಾಡಿದರು. ಈ ಸಂದರ್ಭದಲ್ಲಿ ಕನ್ನಡ ಶಿಕ್ಷಕ ಅಮರ್ ರಜಪೂತ. ರೇವಣಸಿದ್ಧ ಡೊಂಗರೆ. ಜ್ಯೋತಿ ಪಾಟೀಲ್. ವಿಧ್ಯಾರ್ಥಿನಿ ಅರ್ಪಿತಾ. ರೇಖಾ ಬೇಲೂರೆ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ವಾಲ್ಮೀಕಿ ಪುತ್ಥಳಿಯ ಅನಾವರಣ ಕ್ಷಣಗಣನೆ



• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:

ನಗರದ ವಾಲ್ಮೀಕಿ ವೃತ್ತ ನವೀಕರಣ ಮತ್ತು ಅಗಲೀಕರಣಗೊಳಿಸಿದ್ದು, ಶ್ರೀ ಮಹರ್ಷಿ ವಾಲ್ಮೀಕಿ ಪುತ್ಥಳಿ ನಿರ್ಮಾಣ ಕಾರ್ಯ ಅತ್ಯಂತ ಭರದಿಂದ ನಡೆದಿದ್ದು, ಇದೇ ಜನವರಿ 3 ರಂದು ನಡೆಯಲಿರುವ ಮಹರ್ಷಿ ಶ್ರೀ ವಾಲ್ಮೀಕಿಯವರ ಪುತ್ಥಳಿಯ ಅನಾವರಣ ಕಾರ್ಯಕ್ರಮಕ್ಕೆ ಕ್ಷಣಗಣನೆ ಆರಂಭವಾಗಿದೆ. ಪುತ್ಥಳಿ ಲೋಕಾರ್ಪಣೆ ಕಾರ್ಯಕ್ರಮಕ್ಕೆ ಸ್ವತಃ ನಗರ ಶಾಸಕ ನಾರಾ ಭರತ್ ರೆಡ್ಡಿಯವರೇ ಮುತುವರ್ಜಿ ವಹಿಸಿ ವಾಲ್ಮೀಕಿ ಸಮಾಜದ ಮುಖಂಡರಿಗೆ ಆಹ್ವಾನ ನೀಡುತ್ತಿದ್ದಾರೆ.

ಇದರ ಭಾಗವಾಗಿ ವಾಲ್ಮೀಕಿ ಸಮುದಾಯದ ನಿವೃತ್ತ ನ್ಯಾ. ಎನ್. ವೈ.ಹನುಮಂತಪ್ಪ ಅವರ ಸೋದರ ಪೆನ್ನೋಬಳಸ್ವಾಮಿ, ಮಾಜಿ ಜಿಪಂ ಉಪಾಧ್ಯಕ್ಷರಾದ ವೈ.ನೆಟ್ಟಕಲ್ಲಪ್ಪ, ಕಾಂಗ್ರೆಸ್ ಮುಖಂಡ ಯ–ರಿಸ್ವಾಮಿ(ಮಾಮ) ಸೇರಿದಂತೆ ಮತ್ತಿತರರಿಗೆ ನಾರಾ ಭರತ್ ರೆಡ್ಡಿ ಆಹ್ವಾನ ನೀಡಿದ್ದಾರೆ.

ಈ ಸಂದರ್ಭದಲ್ಲಿ ವಾಲ್ಮೀಕಿ ಸಮುದಾಯ ಪ್ರಭಾವಿ ಮುಖಂಡ ಪರಶುರಾಮುಡು (ಪರ್ಶಿ) ಹಾವಂಭಾವಿ ಲೋಕೇಶ್, ಹಗರಿ ಗೋವಿಂದ, ದೇವಿನಗರ ಹೊನ್ನೂರಪ್ಪ, ಪಿ.ಜಗನ್, ಎರಗುಡಿ ಮುದಿಮಲ್ಲಯ್ಯ, ಸತ್ಯನಾರಾಯಣ, ಎರಗುಡಿ ಸೋಮಣ್ಣ, ಗಂಗಪ್ಪ, ಗೋವಿಂದರಾಜ, ಸಂಗನಕಲ್ಲು ವಿಜಯ್ ಕುಮಾರ್, ಭವಾನಿ ಪ್ರಸಾದ್, ರಘು, ಉಮೇಶ್, ತಿರುಪಾಲ ರೆಡ್ಡಿ, ನರೇಂದ್ರ, ವೆಂಕಟೇಶ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

# ಪುಸ್ತಕ ಸಂಸ್ಕೃತಿ ಉಳಿಸಿ ಬೆಳೆಸಲು ಪುಸ್ತಕ ಸಂತೆಯಲ್ಲಿ ಭಾಗವಹಿಸಿ : ಪಟ್ಟದ್ದೇವರು

**ಜ, 24,25,26ರಂದು ಬೀದರನಲ್ಲಿ ವೀರಲೋಕ ಪುಸ್ತಕ ಸಂತೆ**



• ಮಲ್ಲಮ್ಮ ನುಡಿ ವಾರ್ತೆ ಬೀದರ:

ಪುಸ್ತಕ ಸಂಸ್ಕೃತಿ ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಭಾಲ್ಕಿಯ ಹಿರೇಮಠ ಅರ್ಪಿಸುವ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಹಯೋಗದೊಂದಿಗೆ ಜನವರಿ 24,25 ಮತ್ತು 26ರಂದು ಬೀದರ ನಗರದಲ್ಲಿ ವೀರಲೋಕ ಪುಸ್ತಕ ಸಂತೆ ನೆರವೇರುತ್ತಿದೆ ಪ್ರತಿಯೊಬ್ಬರು ಈ ಸಂತೆಯಲ್ಲಿ ಭಾಗವಹಿಸೋಣ ಎಂದು ಹಿರೇಮಠದ ಪೀಠಾಧಿಪತಿಗಳಾದ ಗುರುಬಸವ ಪಟ್ಟದ್ದೇವರು ಹೇಳಿದರು.ಬೀದರ ನಗರದ ವಿದ್ಯಾನಗರದ ಡಾ.ಚನ್ನಬಸವ ಪಟ್ಟದ್ದೇವರ ಪ್ರಸಾದ ನಿಲಯದ ಆವರಣದಲ್ಲಿ ನಡೆದ ಪುಸ್ತಕ ಸಂತೆಯ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು.

ಬೆಂಗಳೂರಿನ ಪುಸ್ತಕ ಸಂತೆಯಲ್ಲಿ ಭಾಗವಹಿಸಿ ಅಲ್ಲಿನ ಅಚ್ಚುಕಟ್ಟುತನ ಮತ್ತು ಯಶಸ್ಸನ್ನು ಕಣ್ತುಂಬಿಕೊಂಡಿದ್ದೇನೆ ಬೆಂಗಳೂರಿನ ಪುಸ್ತಕ ಸಂತೆಯನ್ನೂ ಮೀರಿಸುವಂತಹ ಸಂತೆಯನ್ನು ನಮ್ಮಲ್ಲಿ ಆಯೋಜಿಸಲು ತೀರ್ಮಾನಿಸಿದ್ದೇವೆ ಅದಕ್ಕೆ ಮಠದ ಭಕ್ತಾದಿಗಳು ಮತ್ತು ಸಮಸ್ತ ಕನ್ನಡಾಭಿಮಾನಿಗಳು ಪುಸ್ತಕ ಸಂತೆಯ ಆಯೋಜನೆಯಲ್ಲಿ ತೊಡಗಿಸಿಕೊಳ್ಳಬೇಕೆಂದು ಕೋರಿದರು.

ಬೀದರನಲ್ಲಿ ನಡೆಯಲಿರುವ ಪುಸ್ತಕ ಸಂತೆಯ ರೂವಾರಿಗಳಾದ ಗುರುನಾಥ ರಾಜಗೀರ ಅವರು ಪ್ರಾಸ್ತಾವಿಕವಾಗಿ ಮಾತನಾಡಿ ಬೀದರ ಮತ್ತು ಕಲ್ಯಾಣ ಕರ್ನಾಟಕ ಭಾಗದ ಪ್ರಕಾಶಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ತಮ್ಮ ಪುಸ್ತಕಗಳ ಪ್ರದರ್ಶನ ಮತ್ತು ಮಾರಾಟ ಮಾಡ 'ಬೇಕೆಂದರು ಸಂತೆಯಲ್ಲಿ ಕಲ್ಯಾಣ ಕರ್ನಾಟಕ ಭಾಗದ ಲೇಖಕರಿಗೆ ತಮ್ಮ ಪುಸ್ತಕಗಳನ್ನು ಬಿಡುಗಡೆಗೊಳಿಸುವ ಉದ್ದೇಶವಿದ್ದರೆ ವೀರಲೋಕ ಪುಸ್ತಕ ಸಂತೆಯಲ್ಲಿ ವೇದಿಕೆ ಮತ್ತು ಅತಿಥಿಗಳನ್ನು ಒದಗಿಸುವುದಾಗಿ ತಿಳಿಸಿದರು.

ವೀರಲೋಕ ಪುಸ್ತಕ ಸಂತೆಯಲ್ಲಿ ಪುಸ್ತಕಗಳ ಪ್ರದರ್ಶನ ಹಾಗೂ ಮಾರಾಟದ ಜೊತೆಗೆ ಮೂರು ದಿನವೂ ವಿವಧ ಗೋಷ್ಠಿಗಳು, ಸಂವಾದಗಳು ಸಂಜೆ ವೇಳೆ ವಚನ ಗಾಯನ, ಭಾವಗೀತೆ, ಜಾನಪದ ಗೀತೆ ಮತ್ತು ಗಝಲ್ ಗೀತಗಾಯನವಿರುತ್ತದೆ ಜೊತೆಗೆ ಸುಮಾರು 30ಕ್ಕೂ ಹೆಚ್ಚು ವೇದಿಕೆ ಕಾರ್ಯಕ್ರಮಗಳಿರುತ್ತವೆ ಎಂದು ತಿಳಿಸಿದರು.ಕಸಾಪ ಜಿಲ್ಲಾದ್ಯಕ್ಷ ಸುರೇಶ ಚನ್ನಶೆಟ್ಟಿ ಮಾತನಾಡಿ ಬೀದರನಲ್ಲಿ ನಡೆಯಲಿರುವ ವೀರಲೋಕ ಪುಸ್ತಕ ಸಂತೆಯಲ್ಲಿ ಬೆಂಗಳೂರು ಸೇರಿದಂತೆ ರಾಜ್ಯದ ನಾನಾ ಭಾಗಗಳಿಂದ ಸುಮಾರು ನೂರಕ್ಕೂ ಹೆಚ್ಚು ಲೇಖಕರು ಓದುಗ ಮತ್ತು ಲೇಖಕರ ಮುಖಾಮುಖಿಯಲ್ಲಿ ಭಾಗವಹಿಸುವುದಾಗಿ ತಿಳಿಸಿದರು.

ಈ ಪುಸ್ತಕ ಸಂತೆಗೆ ಕನ್ನಡದ ಮಠ ಎಂದೆ ಖ್ಯಾತಿ ಪಡೆದ ಭಾಲ್ಕಿಯ ಹಿರೇಮಠವು ಜೊತೆಯಾಗಿರುವುದು ಇನ್ನಷ್ಟು ಉತ್ಸಾಹ ಬಂದಿದೆ ಬೀದರ ಜಿಲ್ಲೆಯಿಂದ ಸುಮಾರು ಒಂದು ಲಕ್ಷ ಜನ ಭಾಗವಹಿಸುವ ನೀರಿಕ್ಷೆಯಿದ್ದು ಇದಕ್ಕಾಗಿ ಸ್ಥಳಿಯ ಸಂಘ ಸಂಸ್ಥೆಗಳು, ಕನ್ನಡ ಪರ ಸಂಘಟನೆಗಳು, ಶಿಕ್ಷಣ ಸಂಸ್ಥೆಗಳು ಜೊತೆಯಾಗಿ ನಿಲ್ಲಬೇಕಿದೆ ಎಂದರು.ಬೆಂಗಳೂರಿನ ಹಿರಿಯ ಲೇಖಕರು, ಸಂಶೋಧಕರಾದ ಡಾ.ಸಂತೋಷ ಹಾನಗಲ ಅವರು ಮಾತನಾಡಿ ಬೆಂಗಳೂರಿನ ಪುಸ್ತಕ ಸಂತೆಯ ಆಯೋಜನೆ ಮತ್ತು ಪರಿಣಾಮಗಳ ಕುರಿತಂತೆ ತಿಳಿಸಿ ರಾಜ್ಯದಲ್ಲಿ ಪುಸ್ತಕ ಸಂತೆ ಉಂಟು ಮಾಡಿರುವ ಸಂಚಲನ ತುಂಬಾ ದೊಡ್ಡದು ಅಂತಹ ಸಂಚಲನ ಬೀದರ ಜಿಲ್ಲೆಯಲ್ಲಿಯು ಸೃಷ್ಟಿಯಾಗಬೇಕಿದೆ ಅದಕ್ಕಾಗಿ ಕನ್ನಡ ಮಠವೆಂದೆ ಖ್ಯಾತಿಪಡೆದಿರುವ ಭಾಲ್ಕಿಯ ಹಿರೇಮಠದ ಪೂಜ್ಯರಾದ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು, ಪೂಜ್ಯ ಶ್ರೀ ಗುರುಬಸವ ಪಟ್ಟದ್ದೇವರು ಈ ಪುಸ್ತಕ ಸಂತೆಯ ನೇತೃತ್ವವಹಿಸಿಕೊಂಡು ಸಹಕರಿಸಬೇಕೆಂದು ಕೋರಿದರು.

ಈ ಪುಸ್ತಕ ಸಂತೆಯಲ್ಲಿ ನಾಡಿನ ಅನೇಕ ಪುಸ್ತಕ ಮಳಿಗೆಗಳು, ಹಿರಿಯ ಸಾಹಿತಿಗಳು, ಪ್ರಕಾಶಕರು, ಚಲನಚಿತ್ರ ಕಲಾವಿದರೂ, ಬೀದರ ಜಿಲ್ಲೆಗೆ ಬರುತಿದ್ದು ಜಿಲ್ಲೆಯ ಪ್ರತಿಯೊಬ್ಬ ಪ್ರಜ್ಞಾವಂತ ನಾಗರಿಕರು ಸಂತೆಯಲ್ಲಿ ಕುಟುಂಬ ಸಮೇತವಾಗಿ ಭಾಗವಹಿಸಿ ಪುಸ್ತಕ ಖರಿದಿಸೋಣವೆಂದು ಪೂರ್ವಭಾವಿ ಸಭೆಯಲ್ಲಿ ಭಾಗವಹಿಸಿದ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅದ್ಯಕ್ಷರಾದ ಶಶಿಧರ ಕೊಸಂಬೆ, ಜಾನಪದ ಅಕಾಡೆಮಿ ಸದಸ್ಯ ವಿಜಯಕುಮಾರ ಸೋನಾರೆ, ವನ್ಯಜೀವಿ ಮಂಡಳಿ ಸದಸ್ಯ ವಿನಯ ಮಾಳಗೆ, ಸೇರಿದಂತೆ ಪ್ರಮುಖರಾದ ಬಸವರಾಜ ಧನ್ನೂರ, ಜೈರಾಜ ಖಂಡ್ರೆ, ರೇವಣಸಿದ್ದಪ್ಪಾ ಜಲಾದೆ, ಕಲ್ಯಾಣರಾವ ಪಾಟೀಲ, ಶರತ ಅಭಿಮಾನ, ಮಹೇಶ ಗೋರನಾಳಕರ, ಗುರುನಾಥ ಅಕ್ಕಣ್ಣ, ವಿಜಯಕುಮಾರ ಗೌರೆ, ಲೋಕೇಶ ಉಡಬಾಳೆ, ಎಸ್. ಎಸ್ ಹೊಡಮನಿ, ಉಮಾಕಾಂತ ಮೀಸೆ, ಯೋಗೆಂದ್ರ ಯದಲಾಪುರೆ, ಬಿ ಜೆ ವಿಷ್ಣುಕಾಂತ, ರಜಿಯಾ ಬಳಬಟ್ಟಿ, ಜಗದೇವಿ ತಿಬಶೆಟ್ಟಿ, ಲಿಂಗಾರತಿ ನಾವದಗೇರಿ, ರೇಖಾ ಅಪ್ಪಾರಾವ ಸವದಿ, ಪಾರ್ವತಿ ಸೋನಾರೆ ಆದಿಯಾಗಿ ಅನೇಕ ಪ್ರಮುಖರು ಮಾತನಾಡಿ ಸಂತೆಯ ಯಶಸ್ಸಿಗೆ ಸಲಹೆಗಳನ್ನು ನೀಡಿದರು.

ಈ ಸಂದರ್ಭದಲ್ಲಿ ಪ್ರಮುಖರಾದ ವಿರುಪಾಕ್ಷ ಗಾದಗಿ, ಶೇಖರ ಬಿರಾದಾರ, ಡಾ. ಸಂತೋಷ ಹಂಗರಗಿ, ಸತ್ಯಮೂರ್ತಿ, ಬಸವರಾಜ ಮೂಲಗೆ, ದೇವಿದಾಸ ಜೋಶಿ, ರಾಜಕುಮಾರ ಬಿಜ್ಜಾ, ಸುನೀಲ ದಳವೆ, ಜಯದೇವಿ ಯದಲಾಪುರೆ, ರಾಜೇಂದ್ರ ಮಣಗೇರಿ, ಆಕಾಶ ಕೋಟೆ, ಯೋಗೆಶ ಮಠದ, ರಮೇಶ ಬಿರಾದಾರ, ಅಶೋಕ ದಿಡಗೆ ಸೇರಿದಂತೆ ಇತರರಿದ್ದರು.

# ಬೊಮ್ಮಗೊಂಡೇಶ್ವರ ಮಂದಿರ ನಿರ್ಮಾಣದ ಸಂಕಲ್ಪ ಶ್ಲಾಘನೀಯ: ರೇವಣ್ಣ



## ಫೋನ್ ಕರೆಯಲ್ಲೇ ಮಂದಿರಕ್ಕೆ ರೂ. ೫೦ ಲಕ್ಷ ಘೋಷಿಸಿದ ರಹಿಂಖಾನ್

• **ಮಲ್ಲಮ್ಮ ನುಡಿ ವಾರ್ತೆ ಬೀದರ:**

ಜನ್ಮಸ್ಥಳ ಚಿದ್ರಿಯಲ್ಲಿಯೇ ಬೊಮ್ಮಗೋಂಡೇಶ್ವರರ ಭವ್ಯ ಮಂದಿರ ನಿರ್ಮಾಣವಾಗುತ್ತಿರುವುದು ಸಂತೋಷದ ವಿಷಯ. ಮಂದಿರ ನಿರ್ಮಾಣಕ್ಕೆ ಎಲ್ಲರೂ ಕೂಡಿ ಶ್ರಮಿಸೋಣ ಎಂದು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ರಾಜ್ಯಾಧ್ಯಕ್ಷರು ಹಾಗೂ ಮಾಜಿ ಸಚಿವ ಎಚ್.ಎಂ.ರೇವಣ್ಣ ತಿಳಿಸಿದರು. ಮಹಾತ್ಮ ಬೊಮ್ಮಗೊಂಡೇಶ್ವರ ಜನ್ಮಸ್ಥಳ ಚಿದ್ರಿ ಗ್ರಾಮದಲ್ಲಿ ಸಮಾಜದ ವತಿಯಿಂದ ಆಯೋಜಿಸಿದ ಮಹಾತ್ಮ ಬೊಮ್ಮಗೊಂಡೇಶ್ವರರ ದೇವಸ್ಥಾನದ ಭೂಮಿಪೂಜೆಯನ್ನು ನೆರವೇರಿಸಿ ಮಾತನಾಡಿದರು. ಎರಡು ಗುಂಟೆ ಜಮೀನಿಗಾಗಿ ಹೊಡೆದಾಡುವ ಇಂದಿನ ಕಾಲದಲ್ಲಿ ಪಂಡಿತ್ ಚಿದ್ರಿ ಸಹೋದರರು ಬೊಮ್ಮಗೊಂಡೇಶ್ವರರ ದೇವಸ್ಥಾನ ನಿರ್ಮಾಣಕ್ಕೆ ಭೂದಾನ ಮಾಡಿರುವುದು ಹೆಮ್ಮೆಯ ಸಂಗತಿ. ಜಿಲ್ಲೆಯ ಪ್ರತಿಯೊಂದು ಗ್ರಾಮದಲ್ಲಿ ಇಲ್ಲಿಯ ಮುಖಂಡರು ಸೇರಿಕೊಂಡು ಬೊಮ್ಮಗೊಂಡೇಶ್ವರರ ಪುತ್ಥಳಿ ನಿರ್ಮಾಣ ಮಾಡಿದ್ದಾರೆ. ಹೀಗಿರುವಾಗ ನಾವೆಲ್ಲ ತನುಮನ ಧನದಿಂದ ಸಹಕರಿಸಿ ಭವ್ಯ ಮಂದಿರ ನಿರ್ಮಾಣಕ್ಕೆ ಸಾಕ್ಷಿಯಾಗೋಣ. ಎಲ್ಲಾ ಕಡೆ ಬೊಮ್ಮಗೊಂಡೇಶ್ವರರ ಪುತ್ಥಳಿಗಳಿವೆ. ಆದರೆ ಮಂದಿರದ ಕೊರತೆ ಎದ್ದು ಕಾಣುತಿತ್ತು. ಈ ನಿಟ್ಟಿನಲ್ಲಿ ಚಿದ್ರಿ ಸಹೋದರರು ಮಂದಿರ ನಿರ್ಮಾಣದ ಕೈಂಕರ್ಯ ಕೈಗೊಂಡಿದ್ದು ಸಂತಸ ತಂದಿದೆ ಎಂದರು. ಪೌರಾಡಳಿತ ಸಚಿವ ರಹಿಂಖಾನ್ ಅವರಿಗೆ ಮಾತನಾಡುವಾಗಲೇ ಕರೆ ಮಾಡಿದ ರೇವಣ್ಣ ಅವರು ಎರಡು ಮಾತನಾಡುವಂತೆ ಸೂಚಿಸಿದರು. ಫೋನ್ ಕರೆಯಲ್ಲೇ ಸಚಿವ ರಹಿಂಖಾನ್ ಅವರು ಮಂದಿರ ನಿರ್ಮಾಣಕ್ಕೆ ರೂ. 50 ಲಕ್ಷ ತಕ್ಷಣವೇ ನೀಡುವುದಾಗಿ ಘೋಷಿಸಿದರು. ಸಭೀಕರು ಕರತಾಡನ ಮೂಲಕ ಸಂತಸ ವ್ಯಕ್ತಪಡಿಸಿದರು. ಅಲ್ಲದೇ ರಾಜ್ಯದಲ್ಲಿ ಕುರುಬರೇ ಗೊಂಡರು. ಗೊಂಡರೇ ಕುರುಬರು ಎಂಬುದನ್ನು ಘೋಷಿಸಿ ರಾಜ್ಯ ಸರ್ಕಾರ ಗೊಂಡ ಪ್ರಮಾಣ ಪತ್ರಗಳನ್ನು ನೀಡುತ್ತಿದೆ. ಈ ಕುರಿತು ಕೇಂದ್ರಕ್ಕೂ ಮನವಿ ಸಲ್ಲಿಸಲಾಗಿದೆ. ಬೀದರ ದಕ್ಷಿಣ ಕ್ಷೇತ್ರದ ಶಾಸಕ ಡಾ. ಶೈಲೇಂದ್ರ ಕೆ ಬೆಲ್ದಾಳೆ ಮಾತನಾಡಿ ಬೊಮ್ಮಗೊಂಡೇಶ್ವರರು ಜನಿಸಿದ ಚಿದ್ರಿ ಗ್ರಾಮದಲ್ಲಿ ಜನಿಸಿದ ತಾವೆಲ್ಲರೂ ಸೌಭಾಗ್ಯವಂತರು. ಮಂದಿರ ನಿರ್ಮಾಣ ಇದೊಂದು ಸಮಾಜದ ಕಾರ್ಯ. ನಾನು ವೈಯಕ್ತಿಕವಾಗಿ ರೂ. 1 ಲಕ್ಷ ನೀಡುತ್ತೇನೆ ಎಂದು ಭರವಸೆ ನೀಡಿದರು. ಮಾಜಿ ಸಚಿವ ರಾಜಶೇಖರ ಪಾಟೀಲ ಅವರು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ ಮಂದಿರ ನಿರ್ಮಾಣ ಕಾರ್ಯ ಪುಣ್ಯದ ಕಾರ್ಯ. ವಿಧಾನ ಪರಿಷತ್ತಿನ ಮಾಜಿ ಸಭಾಪತಿ ರಘುನಾಥರಾವ ಮಲ್ಕಾಪುರೆ ಮಾತನಾಡುತ್ತ ಈ ಹಿಂದೆ ಸಿದ್ಧರಾಮಯ್ಯ ಉಪಮುಖ್ಯಮಂತ್ರಿ, ಜೆ.ಎಚ್.ಪಟೇಲರು ಮುಖ್ಯಮಂತ್ರಿಯಾಗಿದ್ದಾಗ ಕುರುಬರೇ ಗೊಂಡರು. ಗೊಂಡರೆ ಕುರುಬರು ಎಂದು ಘೋಷಿಸಿ ಎಸ್‌ಟಿ ಗೊಂಡ ಪ್ರಮಾಣ ಪತ್ರ ನೀಡುವ ಕುರಿತು ಕೇಂದ್ರಕ್ಕೆ ಕಳುಹಿಸಲಾಗಿದೆ. ಕೆಲಸ ಮಾಡುವುದು ಅಷ್ಟೊಂದು ಸುಲಭವಲ್ಲ. ಆದರೂ ಕೂಡಾ ಸಮಾಜದ ಬಾಂಧವರೆಲ್ಲ ಸೇರಿಕೊಂಡು ಪಕ್ಷಾತೀತವಾಗಿ ಒಂದು ತಾಯಿ ಮಕ್ಕಳಂತೆ ಹೋರಾಟ ಮಾಡೋಣ ಎಂದರು.

ಸಾನಿಧ್ಯವನ್ನು ಅವಧೂತಪೂರ ಯಲ್ಲಾಲಿಂಗ ಮಠದ ಪೂಜ್ಯ ಮಚ್ಚೇಂದ್ರ ಮುತ್ಯಾ, ಚೊಂಡಿ ಮಠದ ಜಗನ್ನಾಥ ಮಹಾರಾಜ, ಉಚ್ಚಾದ ಗೋಪಾಲ ಮಹಾರಾಜ, ಹುಮನಾಬಾದಿನ ಸಿದ್ದಯ್ಯ ಆಧುನಿಕ ಒಡೆಯರ್, ಮೈಲಾರದ ಪೂಜ್ಯ ಮಲ್ಲಪ್ಪ ಹಿರೇವಗ್ಗೆ, ಚಿದ್ರಿ ಹಿರೇಮಠದ ಪೂಜ್ಯ ಸಿದ್ದೇಶ್ವರ ಸ್ವಾಮಿಗಳು ವಹಿಸಿದ್ದರು. ಭೂಮಿ ಪೂಜೆಯನ್ನು ರಾಜ್ಯ ಗ್ಯಾರಂಟಿ ಯೋಜನೆಗಳ ಅಧ್ಯಕ್ಷರು ಹಾಗೂ ಮಾಜಿ ಸಚಿವ ಹೆಚ್ ಎಂ ರೇವಣ್ಣ ನೆರವೇರಿಸಿದರು. ವೇದಿಕೆ ಮೇಲೆ ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷೆ ಗೀತಾ ಪಂಡಿತರಾವ ಚಿದ್ರಿ, ಬೆಂಗಳೂರಿನ ಆರ್.ಟಿ.ಓ ಕಚೇರಿಯ ರಾಜಶೇಖರ ಬಿರಾದಾರ ಚಿದ್ರಿ, ನಿಗಮ ಮಂಡಳಿ ಮಾಜಿ ಅಧ್ಯಕ್ಷರಾದ ಪಂಡಿತರಾವ ಚಿದ್ರಿ, ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಸೋಮಶೇಖರ ಬಿರಾದಾರ ಚಿದ್ರಿ, ಮಾಜಿ ವಿಧಾನ ಪರಿಷತ್ ಸದಸ್ಯರಾದ ಅರವಿಂದಕುಮಾರ ಅರಳಿ, ಕೆ. ಪುಂಡಲಿಕರಾವ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಅಬ್ದುಲ್ ಮನ್ನಾನ್ ಸೇಠ್, ಬಿಜೆಪಿ ಯುವ ಮುಖಂಡ ಈಶ್ವರ್‌ಸಿಂಗ್ ಠಾಕೂರ್, ಮಾಜಿ ಜಿಲ್ಲಾ ಪಂಚಾಯತ್ ಅಧ್ಯಕ್ಷ ವಿಜಯಕುಮಾರ ಖಾಶೆಂಪುರ, ಮಾಜಿ ಜಿಲ್ಲಾ ಪಂಚಾಯತ್ ಸದಸ್ಯ ಬಾಬುರಾವ್ ಮಲ್ಕಾಪುರೆ, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ರಾಜಕುಮಾರ ಮಾಳಗೆ, ಬುತ್ತಿ ಬಸವಣ್ಣ ದೇವಸ್ಥಾನ ಕಮಿಟಿ ಅಧ್ಯಕ್ಷ ರಮೇಶ ಮಾಶೆಟ್ಟಿ ಚಿದ್ರಿ, ನಗರಸಭೆ ಸದಸ್ಯರಾದ ಇಂದುಮತಿ ಚಿದ್ರಿ, ರಾಜಾರಾಮ ಚಿಟ್ಟಾ, ಗೊಂಡ ಸಮಾಜದ ಮಾಜಿ ಅಧ್ಯಕ್ಷ ಎಂ.ಎಸ್ ಕಟಗಿ, ಪತ್ರಕರ್ತ ಮಾಳಪ್ಪ ಅಡಸಾರೆ, ಗೊಂಡ ವಿದ್ಯಾರ್ಥಿ ಪರಿಷತ್ ಅಧ್ಯಕ್ಷ ಸಂತೋಷ ಜೋಳದಾಬಕೆ, ಉದ್ಯಮಿ ಡಾ.ರತಿಕಾಂತ ಮಜಗೆ ಹಾಗೂ ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಸಾವಿರಾರು ಜನರು ಪಾಲ್ಗೊಂಡು ಮಹಾಪ್ರಸಾದ ಸ್ವೀಕರಿಸಿ ಧನ್ಯರಾದರು. ಕೊನೆಯಲ್ಲಿ ಸಮಾಜದ ಬಾಂಧವರಿಂದ ವಿವಿದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

# ಕುವೆಂಪು ಜಯಂತೋತ್ಸವ ಆಚರಣೆ



• **ಮಲ್ಲಮ್ಮ ನುಡಿ ವಾರ್ತೆ ಮಸ್ಕಿ :**

ತಾಲೂಕಿನ ಕರ್ನಾಟಕ ರಕ್ಷಣಾ ವೇದಿಕೆ ಹೆಚ್ ಶಿವರಾಮಗೌಡರ ಬಣದ ವತಿಯಿಂದ ವಿಶ್ವ ಮಾನವ ರಾಷ್ಟಕವಿ 120ನೇ ಜಯಂತೋತ್ಸವವನ್ನು ಪಟ್ಟಣದ ಅಶೋಕ ವೃತ್ತದಲ್ಲಿ ರಾಷ್ಟಕವಿ ಕುವೆಂಪು ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವಾದರ ಮುಖಾಂತರ ಮತ್ತು ಸರ್ಕಾರಿ ಹಿರಿಯ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿ ಬಡ ರೋಗಿಗಳಿಗೆ ಹಣ್ಣು ಹಂಪಲವನ್ನು ವಿತರಣೆ ಮಾಡುವ ಮೂಲಕ ಕರ್ನಾಟಕ ರಕ್ಷಣಾ ವೇದಿಕೆ ತಾಲೂಕ ಘಟಕದ ವತಿಯಿಂದ ರಾಷ್ಟಕವಿ ಕುವೆಂಪು ಅವರ ಜಯಂತೋತ್ಸವವನ್ನು ಆಚರಣೆ ಮಾಡಲಾಯಿತು.

ಇದೇ ಸಂದರ್ಭದಲ್ಲಿ ಕರವೇ ತಾಲೂಕ ಅಧ್ಯಕ್ಷ ಆರ್ ಕೆ ನಾಯಕ ಹಾಗೂ ಹನುಮಂತ ಉಪ್ಪಾರ ದೇವಪ್ಪ ನಾಯಕ ಸಿದ್ದು ಮೇಟಿ ಮೆದಿಕಿನಾಳ ಯಮನೂರ ಬುದ್ದಿನ್ನಿ ಆಂಜನೇಯ ಮೋಚಿ ಮೌನೇಶ್ ಹಳ್ಳಿ ತುಗ್ಗಲದಿನ್ನಿ ಮೌನೇಶ್ ನಗನೂರ್ ಬಾಬು ಬಾಬು ರಾತೋಡ್ ಇನ್ನು ಇತರರು ಇದ್ದರು .

# ಸಂಭ್ರಮದ ಅಯ್ಯಪ್ಪಸ್ವಾಮಿ ಮಹಾಪೂಜೆ



• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**

ತಾಲೂಕಿನ ಶಿರೂರ ಪಟ್ಟಣದಲ್ಲಿ ರವಿವಾರ ಕರುಣಾಮೂರ್ತಿ ಅಯ್ಯಪ್ಪಸ್ವಾಮಿ ಸನ್ನಿಧಾನದ ಮಾಲಾಧಾರಿಗಳಿಂದ ಅಯ್ಯಪ್ಪಸ್ವಾಮಿ ಮಹಾಪೂಜೆ ಜರುಗಿತು.

ಬೆಳಿಗ್ಗೆ ಸ್ಥಳೀಯ ಸಿದ್ದೇಶ್ವರ ದೇವಸ್ಥಾನದ ಸನ್ನಿಧಾನದಲ್ಲಿ ಗುರುಸ್ವಾಮಿಗಳಿಂದ ಅಯ್ಯಪ್ಪಸ್ವಾಮಿ ಪೂಜೆ ನೆರವೇರಿದ ನಂತರ ಸ್ವಾಮಿಯ ಭಾವಚಿತ್ರದ ಮೆರವಣಿಗೆ ಹೊರಟು ಪಟ್ಟಣದ ಪ್ರಮುಖ ಬೀದಿಗಳಲ್ಲಿ ನಡೆಯಿತು.

ಓಣಿಗಳಲ್ಲಿ ಭಕ್ತರು ಅಯ್ಯಪ್ಪಸ್ವಾಮಿ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ನಮಿಸಿದರು. ಅಯ್ಯಪ್ಪಸ್ವಾಮಿ ಮಾಲಾಧಾರಿಗಳು ಭಜನೆ ಹಾಡುತ್ತ ಪಟ್ಟಣದ ಸಿದ್ದೇಶ್ವರ ಪ್ರೌಢಶಾಲೆಯ ಮೈದಾನದಲ್ಲಿ ನಿರ್ಮಿಸಿದ ಸನ್ನಿಧಾನಕ್ಕೆ ಸಾಗಿಬಂದರು.

ಸಾಯಂಕಾಲ ಕೇರಳದ ಗುರುಸ್ವಾಮಿ ಆರ್. ಕೃಷ್ಣಮೂರ್ತಿ ಅವರ ನೇತೃತ್ವದಲ್ಲಿ ಮಹಾಪೂಜೆ ನೆರವೇರಿಸಲಾಯಿತು. ಈ ಸಂದರ್ಭದಲ್ಲಿ ಮಾತನಾಡಿದ ಕೃಷ್ಣಮೂರ್ತಿ, ಅಯ್ಯಪ್ಪ ಮಾಲಾಧಾರಿಗಳು ನಿಷ್ಠೆ, ಭಕ್ತಿಯಿಂದ ವೃತಾಚರಣೆ ಮಾಡಿ ಸ್ವಾಮಿಯ ಕೃಪೆಗೆ ಪಾತ್ರರಾಗಬೇಕು ಎಂದು ಹೇಳಿದರು.

ನಂತರ ಅನ್ನ ಸಂತರ್ಪಣೆ ನಡೆಯಿತು. ಗುರುಸ್ವಾಮಿಗಳಾದ ಸಂಗಪ್ಪ ಗದ್ದನಕೇರಿ, ಈರಣ್ಣ ಕಲಬುರ್ಗಿ, ಆನಂದ ಗುರುಸ್ವಾಮಿ, ಮಲ್ಲಯ್ಯಸ್ವಾಮಿ ನಿಡಗುಂದಿ, ಕಾಜಗಾರ ಹುನಗುಂದ, ಶಿವು ಕಾಮರಡ್ಡಿ, ರವಿ ಪ್ಯಾಟಿಶೆಟ್ಟರ ಸೇರಿ ವಿವಿಧ ಗ್ರಾಮಗಳಿಂದ ಆಗಮಿಸಿದ್ದ ಗುರುಸ್ವಾಮಿಗಳು ಪೂಜೆಯಲ್ಲಿ ಪಾಲ್ಗೊಂಡಿದ್ದರು. ನಂತರ ಮಾಲಾಧಾರಿಗಳಿಂದ ಸ್ವಾಮಿಯ ಭಜನೆ, ಹಾಡು ಜರುಗಿದವು. ರಾತ್ರಿ ಮದ್ದು ಸುಡಲಾಯಿತು.

# ಗ್ರಾಹಕರ ಹಕ್ಕುಗಳ ದಿನಾಚರಣೆ:ಗುಣಮಟ್ಟ ಪರಿಶೀಲಿಸಿ ವಸ್ತು ಖರೀದಿಸಿ :ಡಿಸಿ



• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**

ಯಾವುದೇ ವಸ್ತುವನ್ನು ಖರೀದಿಸುವಾಗ ಪರಿಪೂರ್ಣವಾಗಿ ಪರಿಶೀಲಿಸಿ ಖರೀದಿ ಮಾಡಬೇಕು ಎಂದು ಜಿಲ್ಲಾಧಿಕಾರಿ ಸಂಗಪ್ಪ ಎಂ. ಹೇಳಿದರು. ನವನಗರದ ಡಾ.ಬಿ.ಆರ್.ಅಂಬೇಡ್ಕರ ಭವನದಲ್ಲಿ ಸೋಮವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಆಹಾರ ಇಲಾಖೆ, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ, ಕಾನೂನು ಮಾಪನ ಶಾಸ್ತ್ರ ಇಲಾಖೆ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ವಾರ್ತಾ ಇಲಾಖೆ, ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆ ಸಹಯೋಗದಲ್ಲಿ ಹಮ್ಮಿಕೊಂಡ ರಾಷ್ಟ್ರೀಯ ಗ್ರಾಹಕರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ವಸ್ತುಗಳ ಖರೀದಿಯಲ್ಲಿ ಜಾಗೃತಿ ವಹಿಸಿದಾಗ ಮಾತ್ರ ಗ್ರಾಹಕರು ಮೋಸ ಹೋಗುವುದನ್ನು ತಪ್ಪಿಸಬಹುದಾಗಿದೆ ಎಂದರು.

ಗ್ರಾಹಕರಿಲ್ಲದೇ ವರ್ತಕರು ವ್ಯವಹಾರ ಮಾಡಲು ಸಾಧ್ಯವಿಲ್ಲ. ಆದರೆ ವರ್ತಕರು ಒಂದಲ್ಲ ಒಂದು ರೀತಿಯಲ್ಲಿ ಗ್ರಾಹಕರಿಗೆ ಅನ್ಯಾಯ ಮಾಡುತ್ತಿದ್ದು, ವ್ಯವಹರಿಸುವಾಗ ಎಚ್ಚರಿಕೆಯಿಂದ ಇರಬೇಕು. ನಾವು ಕೊಡುವ ಮೌಲ್ಯಕ್ಕೆ ತಕ್ಕ ವಸ್ತು ಆಗಿರಬೇಕು. ಬಣ್ಣ, ರುಚಿಗೆ ಮರುಳಾಗದೇ ಗುಣಮಟ್ಟದ ವಸ್ತು ಖರೀದಿಗೆ ಮುಂದಾಗಬೇಕು. ಮೋಸ ಹೋದಲ್ಲಿ ಗ್ರಾಹಕರ ವೇದಿಕೆಗೆ ದೂರು ಸಲ್ಲಿಸಬೇಕು. ಈ ಬಗ್ಗೆ ಶಾಲಾ, ಕಾಲೇಜು ವಿದ್ಯಾರ್ಥಿಗಳು ಹಾಗೂ ನಾಗರಿಕರಲ್ಲಿ ಹೆಚ್ಚಿನ ಜಾಗೃತಿ ಮೂಡಿಸಿದಲ್ಲಿ ಮೋಸ ಹೋಗುವುದನ್ನು ತಪ್ಪಿಸಲು ಸಾದ್ಯವಾಗುತ್ತದೆ ಎಂದು ಜಿಲ್ಲಾಧಿಕಾರಿಗಳು ಹೇಳಿದರು. ಜಿ.ಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಶಿಧರ ಕುರೇರ ಕರಪತ್ರ ಬಿಡುಗಡೆಗೊಳಿಸಿ ಮಾತನಾಡಿ, ವಸ್ತು ಹಾಗೂ ಸೇವೆಗಳನ್ನು ಪಡೆಯುತ್ತಿರುವ ಗ್ರಾಹಕರಿಗೆ ಹಕ್ಕುಗಳ ರಕ್ಷಣೆಯ ಬಗ್ಗೆ ಅರಿವು ಇರಬೇಕು. ಕಾನೂನಿನ ಪ್ರಕಾರ ಹಕ್ಕು ಪಡೆದುಕೊಳ್ಳಬೇಕು. ಇಂದಿನ ಆಧುನಿಕ ಯುಗದಲ್ಲಿ ತಂತ್ರಜ್ಞಾನದ ಬಳಕೆಯಿಂದ ಡಿಜಿಟಲ್ ಅಪರಾಧಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗುತ್ತಿದ್ದು, ಅವುಗಳ ಬಗ್ಗೆ ಜಾಗೃತಿ ವಹಿಸುವ ಅಗತ್ಯವಿದೆ. ಮೋಸ ಹೋದಲ್ಲಿ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಆಯೋಗಕ್ಕೆ ದೂರು ಸಲ್ಲಿಸಲು ಮುಂದಾಗಬೇಕು ಎಂದು ತಿಳಿಸಿದರು.

ಪ್ರಧಾನ ಸಿವಿಲ್ ನ್ಯಾಯಾಧೀಶರಾದ ಮುರಗೇಂದ್ರ ತುಬಾಕೆ ಮಾತನಾಡಿ, ಗ್ರಾಹಕರ ಹಿತರಕ್ಷಣೆ ಕಾಪಾಡುವ ನಿಟ್ಟಿನಲ್ಲಿ ಸರಕಾರ ಗ್ರಾಹಕರ ಹಿತರಕ್ಷಣೆ ಕಾಯ್ದೆ ಜಾರಿಗೆ ತಂದಿದೆ. ವಸ್ತುಗಳನ್ನು ಖರೀದಿಸುವವರು ಮಾತ್ರ ಗ್ರಾಹಕರಲ್ಲಿ ಸೇವೆಗಳನ್ನು ಪಡೆಯುವವರು ಗ್ರಾಹಕರಾಗಿರುತ್ತಾರೆ. ಖರೀದಿ ಮತ್ತು ಸೇವೆಯಲ್ಲಿ ಮೋಸ ಹೋದಲ್ಲಿ ಜಿಲ್ಲಾ, ರಾಜ್ಯ ಹಾಗೂ ರಾಷ್ಟ್ರ ಮಟ್ಟದ ಗ್ರಾಹಕರ ವೇದಿಕೆಗೆ ದೂರು ಸಲ್ಲಿಸಿ ಪರಿಹಾರ ಕಂಡುಕೊಳ್ಳಬಹುದಾಗಿದ ಎಂದರು.

ನಿಕಟಪೂರ್ವ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷ ಡಿ.ವೈ.ಬಸಾಪೂರ ಉಪನ್ಯಾಸ ನೀಡಿ, ಗ್ರಾಹಕ ಹಕ್ಕುಗಳ ಪಡೆದುಕೊಳ್ಳುವಲ್ಲಿ ಗ್ರಾಹಕರು ಮುಂದಾಗಬೇಕಿದೆ. ಗ್ರಾಹಕ ಮೋಸ ಹೋದಲ್ಲಿ ಆಯೋಗಕ್ಕೆ ದೂರು ಸಲ್ಲಿಸಬಹುದಾಗಿದೆ. 5 ಲಕ್ಷ ರೂ.ಗಳವರೆಗೆ ಜಿಲ್ಲಾ ಹಂತದಲ್ಲಿ ದೂರು ಸಲ್ಲಿಸಬಹುದಾಗಿದೆ. ದೂರು ಸಲ್ಲಿಸಲು 5 ಲಕ್ಷದವರೆಗೆ ಉಚಿತವಾಗಿ ಪರಿಹಾರ ಕಂಡುಕೊಳ್ಳಬಹುದಾಗಿದೆ. 5 ರಿಂದ 10 ಲಕ್ಷದವರೆಗೆ 200 ರೂ, 10 ಲಕ್ಷ ಮೇಲ್ಪಟ್ಟಿದ್ದರೆ 400 ರೂ. ಮೊತ್ತ ಪಾವತಿಸಬೇಕಾಗುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷ ಪ್ರಭುಲಿಂಗಸ್ವಾಮಿ ಹಿರೇಮಠ ಹಾಗೂ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷ ಅನೀಲಕುಮಾರ ದಡ್ಡಿ ಮಾತನಾಡಿದರು. ಆಹಾರ ಇಲಾಖೆಯ ಜಂಟಿ ನಿರ್ದೇಶಕ ಶ್ರೀಶೈಲ ಕಂಕಣವಾಡಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಲೀಡ್ ಬ್ಯಾಂಕಿನ ಸಿಬ್ಬಂದಿ ಮಂಜುನಾಥ ಹಾದಿಮನಿ ನೇತೃತ್ವದ ತಂಡ ಸೈಬರ್ ಅಪರಾಧಗಳ ಕುರಿತು ನಟನೆಯ ಮೂಲಕ ಜಾಗೃತಿ ಮೂಡಿಸಿದರು.

ಕಾರ್ಯಕ್ರಮದಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಪುಂಡಲೀಕ ಕಾಂಬಳೆ, ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಎ.ಜಿ.ಮನ್ನಿಕೇರಿ, ಕಾನೂನು ಮಾಪನಶಾಸ್ತ್ರ ಇಲಾಖೆಯ ಸಹಾಯಕ ನಿರ್ದೇಶಕ ಎ.ಎಸ್.ಪಾಣಿಶೆಟ್ಟಿ, ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಎಸ್.ಬಡದಾನಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಮೂಢನಂಬಿಕೆಗೆ ವಿಜ್ಞಾನವೇ ಉತ್ತರ: ದರ್ಶನಾಪುರ

**ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ:**

ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಭಾರತ ವಿಶ್ವಮಟ್ಟದಲ್ಲಿ ಮುನ್ನಡೆ ಸಾಧಿಸಿದ್ದರೂ ಸಮಾಜದಲ್ಲಿ ಇನ್ನೂ ಮೂಢನಂಬಿಕೆಗಳು ಆಳವಾಗಿ ಬೇರೂರಿರುವುದು ಆತಂಕಕಾರಿ ಸಂಗತಿಯಾಗಿದೆ ಎಂದು ಸಣ್ಣ ಕೈಗಾರಿಕೆ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಶರಣಬಸಪ್ಪಗೌಡ ದರ್ಶನಾಪುರ ಹೇಳಿದ್ದಾರೆ.

ಯಾದಗಿರಿ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಕರ್ನಾಟಕ ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ತಿನಿಂದ ನಡೆಯುತ್ತಿರುವ ಮೂರು ದಿನಗಳ ರಾಜ್ಯ ಮಟ್ಟದ 5ನೇ ವೈಜ್ಞಾನಿಕ ಸಮ್ಮೇಳನದ ಸಮಾರಂಭವನ್ನು ಉದ್ಘಾಟಿಸಿದ ಬಳಿಕ ಸಚಿವರು ಮಾತನಾಡಿದರು.



ಇಂದು ಗುಡಿಗುಂಡಾರಗಳ ಹೆಸರಿನಲ್ಲಿ ಜನರನ್ನು ಭಯಪಡಿಸಿ, ಬಡವರಿಂದ ಅನಗತ್ಯವಾಗಿ ಹಣ ಖರ್ಚು ಮಾಡಿಸುವ ಪ್ರವೃತ್ತಿ ಇಂದಿಗೂ ಮುಂದುವರಿದಿದೆ. ಯಾವುದೇ ದೇವರು ಮನುಷ್ಯನಿಗೆ ಕೆಡುಕನ್ನು ಮಾಡುವುದಿಲ್ಲ; ಮನುಷ್ಯನೇ ಮನುಷ್ಯನಿಗೆ ಕೆಡುಕನ್ನು ಮಾಡುತ್ತಾನೆ, ವೇಗವಾಗಿ ಎಲ್ಲವನ್ನೂ ಮೇಟ್ಟಿ ನಿಲ್ಲುವ ಶಕ್ತಿ ವಿಜ್ಞಾನ ಮತ್ತು ತಂತ್ರಜ್ಞಾನಕ್ಕಿದೆ, ಜನರ ಮನಸನ್ನು ಬೇರೆಕಡೆಗೆ ಸೆಳೆತಯುವ ಶಕ್ತಿಗಳನ್ನು ವೈಜ್ಞಾನಿಕವಾಗಿ ಮಟ್ಟಹಾಕಬೇಕಾಗಿದೆ ಎಂದು ತಿಳಿಸಿದರು. ಇಂದಿನ ದಿನಗಳಲ್ಲಿ ವೈಜ್ಞಾನಿಕ ಸಮ್ಮೇಳನಗಳನ್ನು ಆಯೋಜಿಸುವುದು ಸುಲಭದ ಕೆಲಸವಲ್ಲ.

ಸರ್ಕಾರದ ನೆರವಿಲ್ಲದೆ ಇಂತಹ ಅದ್ದೂರಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿರುವುದು ಶ್ಲಾಘನೀಯ, ಮುಂದಿನ ದಿನಗಳಲ್ಲಿ ಇಂತಹ ಕಾರ್ಯಕ್ರಮಗಳಿಗೆ ಸರ್ಕಾರದಿಂದ ಹೆಚ್ಚಿನ ಅನುದಾನ ಒದಗಿಸಲು ಪ್ರಯತ್ನಿಸಲಾಗುವುದು ಎಂದು ಸಚಿವರು ಭರವಸೆ ನೀಡಿದರು.

**ಅಂಧ ನಂಬಿಕೆಗಳ ಹೋಗಲಾಡಿಸಲು ಪಣ: ಖಾಸಾಮಠಶ್ರೀ**

ಸಮಾರಂಭದ ಸಾನಿಧ್ಯ ವಹಿಸಿದ್ದ ಗುರುಮಠಕಲ್ ಖಾಸಮಠದ ಶ್ರೀ ಶಾಂತವೀರ ಗುರುಮುರುಘಾ ರಾಜೇಂದ್ರ ಮಹಾಸ್ವಾಮೀಜಿ ಮಾತನಾಡಿ, ಸಮಾಜದಲ್ಲಿ ಮೂಢನಂಬಿಕೆಗಳು ಮತ್ತು ಅಂಧಶ್ರದ್ಧೆಗಳೇನು ನಿನ್ನೆ ಮೊನ್ನೆ ಹುಟ್ಟಿಕೊಂಡಿದ್ದಲ್ಲ, ಸಾವಿರಾರು ವರ್ಷಗಳಿಂದ ನಿರಂತರವಾಗಿ ನಡೆದುಕೊಂಡು ಬಂದಿರುವ ದುರುಪಾಯಗಳಾಗಿವೆ ಎಂದು ಹೇಳಿದರು. ಅಂಧ ನಂಬಿಕೆಗಳನ್ನು ಒಂದೇ ಬಾರಿ ಸಂಪೂರ್ಣವಾಗಿ ಅಳಿಸಿ ಹಾಕುವುದು ಕಷ್ಟವಾದರೂ, ವೈಜ್ಞಾನಿಕ ಚಿಂತನೆ ಮತ್ತು ಜಾಗೃತಿಯ ಮೂಲಕ ಸಮಾಜಕ್ಕೆ ಬೆಳಕು ಚೆಲ್ಲುವ ಕೆಲಸವನ್ನು ವೈಜ್ಞಾನಿಕ ಸಮ್ಮೇಳನಗಳು ಮಾಡುತ್ತಿವೆ. ಈ ಹಿನ್ನೆಲೆಯಲ್ಲಿ ಯಾದಗಿರಿಯಲ್ಲಿ ಆಯೋಜಿಸಲಾದ ರಾಜ್ಯಮಟ್ಟದ ವೈಜ್ಞಾನಿಕ ಸಮ್ಮೇಳನವು ಅರ್ಥಪೂರ್ಣವಾಗಿದೆ. ಮೂಢನಂಬಿಕೆ ಮುಕ್ತ ಸಮಾಜ ನಿರ್ಮಾಣಕ್ಕೆ ಪೂರಕವಾಗಿದೆ ಎಂದು ಅಭಿಪ್ರಾಯಪಟ್ಟರು. ರಾಷ್ಟಕವಿ ಕುವೆಂಪು ಅವರ ನಾನು ಹಣತೆ ಹಚ್ಚುತ್ತೇನೆ ಎಂದು ಸಂಪೂರ್ಣ ಅಂಧಕಾರವನ್ನು ಅಳಿಸುವ ಭ್ರಮೆಯಿಂದಲ್ಲ, ಇರುವ ತನಕ ನನ್ನ ಮುಖವನ್ನು ನಾನು ನೋಡುತ್ತೇನೆ ಎಂಬ ನಂಬಿಕೆಯಿಂದ ಎಂಬ ವಾಕ್ಯವನ್ನು ಸ್ಮರಿಸಿದ ಶ್ರೀಗಳು, ವೈಜ್ಞಾನಿಕ ಚಿಂತನೆ ಎಂಬುದು ಬೆಳಕು ಹಚ್ಚುವ ಪ್ರಯತ್ನವೇ ಹೊರತು ಅಂಧಕಾರದ ವಿರುದ್ಧದ ಹೋರಾಟ ಮಾತ್ರವಲ್ಲ ಎಂದು ತಿಳಿಸಿದರು.

# ಕುವೆಂಪು ಜನ್ಮ ದಿನಾಚರಣೆ



**ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**

ನಗರದ ವಿದ್ಯಾ ಪ್ರಸಾರಕ ಮಂಡಳದ ಎಸ್.ಆರ್.ನರಸಾಪೂರ ಕಲಾ ಹಾಗೂ ಎಂ.ಬಿ.ಶಿರೂರ ವಾಣಿಜ್ಯ ಮಹಾವಿದ್ಯಾಲಯದ ಕನ್ನಡ ವಿಭಾಗದ ಆಶ್ರಯದಲ್ಲಿ ರಾಷ್ಟ್ರಕವಿ ಕುವೆಂಪುರವರ 121 ನೇ ಜನ್ಮ ದಿನಾಚರಣೆಯನ್ನು ಸೋಮವಾರ ಆಚರಿಸಲಾಯಿತು.

ಕುವೆಂಪು ಅವರ ಭಾವ ಚಿತ್ರಕ್ಕೆ ಪೂಜೆ ಸಲ್ಲಿಸಲಾಯಿತು. ಪ್ರಾಚಾರ್ಯ ಶ್ರೀನಿವಾಸ ನರಗುಂದ, ಕನ್ನಡ ವಿಭಾಗದ ಮುಖ್ಯಸ್ಥ ಕೃಷ್ಣ ಲಮಾಣಿ, ಎಸ್.ವಾಯ್.ಬೊಮ್ಮಣ್ಣವರ, ಎಂ.ಡಿ.ಕೋರವಾರ, ಏಕನಾಥ ರಾಠೋಡ, ನಾಗರಾಜ ಹಸಬಿ, ಬಸವರಾಜ ಮಾದರ, ಮುತ್ತು ಗೌಡರ, ರಾಜು ಚವ್ಹಾಣ, ಗೀತಾ ಕಿಲಬನೂರ, ಅಶ್ವಿನಿ ಬಿಲ್ಲಾರ, ಕೀರ್ತಿ ದಾಸರ, ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

# ನಿಶ್ಚಲ ಭಕ್ತಿಯೇ ನಿಜವಾದ ಸಂಪತ್ತು: ಹಾರಕೂಡ ಶ್ರೀ.



• **ಮಲ್ಲಮ್ಮ ನುಡಿ ವಾರ್ತೆ ಬಸವಕಲ್ಯಾಣ :**

ಗುರು ಹಾಗೂ ದೈವದ ಮೇಲೆ ಹೊಂದಿರುವ ಭಕ್ತರ ನಿಶ್ಚಲ ಭಕ್ತಿಯೇ ಆ ಧರ್ಮ ಪೀಠದ ನಿಜವಾದ ಸಂಪತ್ತು ಎಂದು ಹಾರಕೂಡದ ಪೂಜ್ಯ ಶ್ರೀ ಡಾ. ಚನ್ನವೀರ ಶಿವಾಚಾರ್ಯರು ನುಡಿದರು. ತಾಲೂಕಿನ ಹಾರಕೂಡ ಶ್ರೀಮಠದಲ್ಲಿ ಸದ್ಗುರು ಚನ್ನಬಸವ ಶಿವಯೋಗಿಗಳ 74ನೇ ಜಾತ್ರಾ ಮಹೋತ್ಸವದ ಹಂದರಂಬಲಿ ದಿನದಂದು ರಥದ ತಡಸಿ ಇಳಿಸುವ ಪೂಜೆಯ ಸಮಯದಲ್ಲಿ ಸಾನಿಧ್ಯ ವಹಿಸಿ ಮಾತನಾಡಿದ ಶ್ರೀಗಳು ಒಂದು ಧರ್ಮ ಪೀಠ ಉತ್ತರೋತ್ತರವಾಗಿ ಬೆಳೆಯಬೇಕಾದರೆ ಆ ಪೀಠದ ಒಡೆಯರ ಯೋಗಶಕ್ತಿ ಮತ್ತು ಭಕ್ತರ ಕದಡದ ಇಚ್ಛಾಶಕ್ತಿ ಪ್ರಮುಖ ಪಾತ್ರ ವಹಿಸುತ್ತವೆ. ಚನ್ನಬಸವ ಶಿವಯೋಗಿಗಳ ಗುರು ಕಾರುಣ್ಯದಿಂದ ಹಾರಕೂಡ ಜಾತ್ರೆ ವರ್ಷದಿಂದ ವರ್ಷಕ್ಕೆ ಹೊಸ ಮೆರಗು ಪಡೆಯುತ್ತಿರುವುದು ನಮಗೆ ಅತೀವ ಸಂತಸ ನೀಡಿದೆ. ಭಕ್ತರ ಮನದ ಎಲ್ಲಾ ತಲ್ಲಣಗಳು ದೂರವಾಗಿ ಹೊಸ ಜೀನೋತ್ಸವದಲ್ಲಿ ಬದುಕುವಂತಾಗಲಿ, ಎಲ್ಲರ ಬಾಳಲ್ಲಿ ನವ್ಯತೆ, ಭವ್ಯತೆ, ಹಾಗೂ ದಿವ್ಯತೆ ಮೂಡಿ ಬರಲಿ ಎಂದು ಶುಭ ಹಾರೈಸಿದರು. ಈ ಸಂದರ್ಭದಲ್ಲಿ ಶಾಸಕ ಶರಣು ಸಲಗರ, ಕಾಡ ಅಧ್ಯಕ್ಷ ಬಾಬು ಹೊನ್ನಾ ನಾಯಕ, ಜಿಲ್ಲಾ ಪಂಚಾಯಿತಿ ನಿವೃತ್ತ ಉಪ ಕಾರ್ಯದರ್ಶಿಗಳಾದ ಬಿ. ಕೆ. ಹಿರೇಮಠ, ಮಲ್ಲಿನಾಥ ಹಿರೇಮಠ, ಮುಖಂಡರಾದ ಮೇಘರಾಜ ನಾಗರಾಳೆ, ಎಪಿಎಂಸಿ ಮಾಜಿ ಅಧ್ಯಕ್ಷ ಸಿದ್ರಾಮಪ್ಪ ಗುದಗೆ, ಪಿಎ ಜಯ ಶ್ರೀ ಹೊಡಲ ಮುಂತಾದವರು ಉಪಸ್ಥಿತರಿದ್ದರು. ಹಂದರಂಬಲಿ ಕಾರ್ಯಕ್ರಮ ಇಂದು ಜಾತ್ರೆಯ ಪ್ರಮುಖ ಅಂಗವಾಗಿ ಮಾರ್ಪಟ್ಟಿದೆ.

ಈ ವರ್ಷ 50 ಸಾವಿರಕ್ಕಿಂತಲೂ ಅಧಿಕ ಭಕ್ತರು ಭಜ್ಜಿ, ಭರ್ತಾ, ರೊಟ್ಟಿ, ಹುಗ್ಗಿ, ಅನ್ನ, ಸಾರು, ಚಟ್ನಿ ಯಾವುದೇ ಭೇದ ಭಾವವಿಲ್ಲದೆ ಸಹಪಂಕ್ತಿಯಲ್ಲಿ ಪ್ರಸಾದ ಸ್ವೀಕರಿಸಿದರು. ಇದಕ್ಕೂ ಮೊದಲು ಹಾರಕೂಡ ಶ್ರೀಗಳು ತಮ್ಮ ಅಮೃತ ಹಸ್ತದಿಂದ ಬಾನಂಗಳಕ್ಕೆ ಆಕಾಶ ದೀಪ ಬಿಡುವ ಮನ್ಮೋಹಕ ದೃಶ್ಯ ಕಂಡು ಬಂತು.

## ಮೂಢನಂಬಿಕೆಗೆ ವಿಜ್ಞಾನವೇ ಉತ್ತರ:ದರ್ಶನಾಪುರ

ಯಾದಗಿರಿ: ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಭಾರತ ವಿಶ್ವಮಟ್ಟದಲ್ಲಿ ಮುನ್ನಡೆ ಸಾಧಿಸಿದ್ದರೂ ಸಮಾಜದಲ್ಲಿ ಇನ್ನೂ ಮೂಢನಂಬಿಕೆಗಳು ಆಳವಾಗಿ ಬೇರೂರಿರುವುದು ಆತಂಕಕಾರಿ ಸಂಗತಿಯಾಗಿದೆ ಎಂದು ಸಣ್ಣ ಕೈಗಾರಿಕೆ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಶರಣಬಸಪ್ಪಗೌಡ ದರ್ಶನಾಪುರ ಹೇಳಿದ್ದಾರೆ.ಯಾದಗಿರಿ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಕರ್ನಾಟಕ ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ತಿನಿಂದ ನಡೆಯುತ್ತಿರುವ ಮೂರು ದಿನಗಳ ರಾಜ್ಯ ಮಟ್ಟದ 5ನೇ ವೈಜ್ಞಾನಿಕ ಸಮ್ಮೇಳನದ ಸಮಾರಂಭವನ್ನು ಉದ್ಘಾಟಿಸಿದ ಬಳಿಕ ಸಚಿವರು ಮಾತನಾಡಿದರು. ಗುಡಿ ಗುಂಡಾರಗಳ ಹೆಸರಿನಲ್ಲಿ ಜನರನ್ನು ಭಯಪಡಿಸಿ, ಬಡವರಿಂದ ಅನಗತ್ಯವಾಗಿ ಹಣ ಖರ್ಚು ಮಾಡಿಸುವ ಪ್ರವೃತ್ತಿ ಇಂದಿಗೂ ಮುಂದುವರಿದಿದೆ. ಯಾವುದೇ ದೇವರು ಮನುಷ್ಯನಿಗೆ ಕೆಡುಕನ್ನು ಮಾಡುವುದಿಲ್ಲ; ಮನುಷ್ಯನೇ ಮನುಷ್ಯನಿಗೆ ಕೆಡುಕನ್ನು ಮಾಡುತ್ತಾನೆ, ವೇಗವಾಗಿ ಎಲ್ಲವನ್ನೂ ಮೇಟ್ಟಿ ನಿಲ್ಲುವ ಶಕ್ತಿ ವಿಜ್ಞಾನ ಮತ್ತು ತಂತ್ರಜ್ಞಾನಕ್ಕಿದೆ, ಜನರ ಮನಸನ್ನು ಬೇರೆಕಡೆಗೆ ಸೆಳೆತಯುವ ಶಕ್ತಿಗಳನ್ನು ವೈಜ್ಞಾನಿಕವಾಗಿ ಮಟ್ಟಹಾಕಬೇಕಾಗಿದೆ ಎಂದು ತಿಳಿಸಿದರು.

# ದ್ವೇಷ ಭಾಷಣ ಕಾಯ್ದೆ ವಿರೋಧಿಸಿ ಬಿಜೆಪಿ ಪ್ರತಿಭಟನೆ




• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**

ರಾಜ್ಯ ಸರ್ಕಾರದ ದ್ವೇಷ ಭಾಷಣ ಕಾಯ್ದೆ ವಿರೋಧಿಸಿ ಹಾಗೂ ಬಾಂಗ್ಲಾ ದೇಶದಲ್ಲಿ ಹಿಂದೂಗಳ ಮೇಲೆ ನಡೆಯುತ್ತಿರುವ ಕೊಲೆ ಮತ್ತು ಅತ್ಯಾಚಾರದ ಘಟನೆಗಳನ್ನು ಖಂಡಿಸಿ ನಗರದಲ್ಲಿ ಸೋಮವಾರ ಭಾರತೀಯ ಜನತಾ ಪಕ್ಷ ಪ್ರತಿಭಟನೆ ನಡೆಸಿತು.

ನಗರದ ಶಿವಾನಂದ ಜೀನ್‌ನಿಂದ ಬಸವೇಶ್ವರ ವೃತ್ತದವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿದ ಬಿಜೆಪಿ ಕಾರ್ಯಕರ್ತರು, ರಾಜ್ಯ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು. ಮಾಜಿ ಶಾಸಕ ವೀರಣ್ಣ ಚರಂತಿಮಠ ಮಾತನಾಡಿ, ಗಾಂಧೀಜಿಯವರು ಸ್ವಾತಂತ್ರ್ಯ ಬಂದ ನಂತರ ಕಾಂಗ್ರೆಸ್ ವಿಸರ್ಜನೆ ಮಾಡಬೇಕು ಎಂದು ಹೇಳಿದ್ದರು. ಆ ಮಾತನ್ನು ಕೇಳದ ಭಂಡ ಜನರು ಇಂದು ಕಾಂಗ್ರೆಸ್‌ನಲ್ಲಿ ಇದ್ದಾರೆ ಎಂದು ಟೀಕಿಸಿದರು.

100 ದಿನಗಳಿದ್ದ ನರೇಗಾ ಯೋಜನೆಯನ್ನು 125 ದಿನಗಳಿಗೆ ವಿಸ್ತರಿಸಲಾಗಿದೆ. ಈ ಯೋಜನೆಯಲ್ಲಿ ನಡೆಯುತ್ತಿದ್ದ ಭ್ರಷ್ಟಾಚಾರ ತಡೆಯಲು ಕೇಂದ್ರ ಸರ್ಕಾರ 60–40 ರ ಅನುಪಾತದ ವ್ಯವಸ್ಥೆ ತಂದಿದೆ. ಆದರೆ ರಾಜ್ಯ ಸರಕಾರ ಶೇ.40 ನೀಡಲು ಆಗದ ಹಿನ್ನೆಲೆ ಗಾಂಧೀಜಿಯ ಹೆಸರನ್ನು ಬಳಸಿಕೊಳ್ಳುತ್ತಿದೆ ಎಂದ ಚರಂತಿಮಠ, ಯಾವುದೇ ಯೋಜನೆ ಸ್ಥಗಿತಗೊಳಿಸಿಲ್ಲ. ಗಾಂಧೀಜಿಯವರ ಪರಮಗುರು ರಾಮಜಿಯವರ ಹೆಸರನ್ನು ಇಟ್ಟು 125 ದಿನಗಳ ಕೆಲಸ ನೀಡುವ ಮೂಲಕ ಬಡವರಿಗೆ ಅನುಕೂಲವಾಗುವಂತೆ ಹಾಗೂ ಭ್ರಷ್ಟಾಚಾರ ತಡೆಯುವ ಉದ್ದೇಶದಿಂದ ಕಾನೂನು ತಂದು ಯೋಜನೆಯನ್ನು ಮುಂದುವರೆಸಲಾಗಿದೆ ಎಂದು ಹೇಳಿದರು.

ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹಾಳಾಗಿದೆ ಎಂದು ದೂರಿದ ಚರಂತಿಮಠ, ದ್ವೇಷ ಭಾಷಣ ಕಾಯ್ದೆಯನ್ನು ವಾಪಸ್ ಪಡೆದು, ಕಾನೂನು ರಕ್ಷಣೆ ಮಾಡಲು ಆಗದಿದ್ದರೆ ಸರ್ಕಾರ ತಕ್ಷಣ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿದರು.

ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲೆ ನಡೆಯುತ್ತಿರುವ ದೌರ್ಜನ್ಯ, ಕೊಲೆ ಹಾಗೂ ಅತ್ಯಾಚಾರಗಳ ಬಗ್ಗೆ ಕಾಂಗ್ರೆಸ್ ಮೌನ ವಹಿಸಿರುವುದನ್ನು ಪ್ರಶ್ನಿಸಿದ ಅವರು, ಅದರ ಬಗ್ಗೆ ಮಾತನಾಡದ ಕಾಂಗ್ರೆಸ್ ಕೇರಳದಲ್ಲಿ ಅನಧಿಕೃತವಾಗಿ ವಾಸವಿರುವ ಒಂದು ಕೋಮಿನ ಜನರ ಬಗ್ಗೆ ಮಾತ್ರ ಮಾತನಾಡುತ್ತಿದೆ. ಇದನ್ನು ನೋಡಿದರೆ ಎಲ್ಲವೂ ಓಟಿನ ರಾಜಕಾರಣವೇ ಎನ್ನುವುದು ಸ್ಪಷ್ಟವಾಗುತ್ತದೆ ಎಂದು ಕಾಂಗ್ರೆಸ್ ವಿರುದ್ಧ ಟೀಕೆ ನಡೆಸಿದರು. ಪ್ರತಿಭಟನೆಯಲ್ಲಿ ನೂರಾರು ಜನ ಬಿಜೆಪಿ ಮುಖಂಡರು, ಕಾರ್ಯಕರ್ತರು ಭಾಗವಹಿಸಿದ್ದರು.



ಸಿಂಧನೂರು ಕಾಂಗ್ರೆಸ್ ಪಕ್ಷದ ಪರಿಶಿಷ್ಟ ಪಂಗಡದ ಅಧ್ಯಕ್ಷರು ಅಮರೇಶ ಗಿರಿಜಾಲಿ ಅವರು ನಮ್ಮ ಪತ್ರಿಕೆ ಓದುತ್ತಿರುವ ದೃಶ್ಯ

# ಮಹಾರಾಷ್ಟ್ರ–ಆಂಧ್ರದ ಗಡಿಯವರೆಗೆ ನಾಲ್ಕು ಪಥದ ರಸ್ತೆ: ಪ್ರಿಯಾಂಕ್ ಖರ್ಗೆ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ:

ಪ್ರಗತಿಯ ಪಯಣಕ್ಕೆ ರಸ್ತೆಗಳೇ ಪ್ರಮುಖ ಆಧಾರ.

ಮಹಾರಾಷ್ಟ್ರ ಗಡಿಯಿಂದ ಆಂಧ್ರ ಪ್ರದೇಶದ ಗಡಿಯವರೆಗೆ ನಾಲ್ಕು ಪಥದ ರಾಜ್ಯ ಹೆದ್ದಾರಿ ನಿರ್ಮಾಣದ ಕುರಿತಾಗಿ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಮತ್ತು ಕಲಬುರಗಿ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಹಾಗೂ ಆಳಂದ್ ಶಾಸಕ ಬಿ. ಆರ್. ಪಾಟೀಲ್ ಅವರ ಅಧ್ಯಕ್ಷತೆಯಲ್ಲಿ ಬೆಂಗಳೂರಿನಲ್ಲಿ ಸಭೆ ನಡೆಸಲಾಯಿತು.



ಮಹಾರಾಷ್ಟ್ರದ ವಾಗ್ದಾರಿಯಿಂದ ಆಂಧ್ರದ ರಿಬ್ಬನಪಲ್ಲಿವರೆಗೆ ನಾಲ್ಕು ಪಥವಾಗಿ ಉನ್ನತೀಕರಿಸಲು ಉದ್ದೇಶಿಸಲಾಗಿರುವ ರಾಜ್ಯ ಹೆದ್ದಾರಿಯು ಕಲಬುರಗಿ ಜಿಲ್ಲೆಯ ಆಳಂದ, ಕಲಬುರಗಿ, ಮಳಖೇಡ್, ಸೇಡಂ ಮಾರ್ಗವಾಗಿ ಹಾದುಹೋಗಲಿದೆ. ಇದ–ರಿಂದ ಕಲಬುರಗಿಯಿಂದ ಹೈದರಾಬಾದಗೆ ತೆರಳಲು 50 ಕೀಮಿ ಕಡಿಮೆಯಾಗಲಿದೆ. ಈ ಹೆದ್ದಾರಿ ನಿರ್ಮಾಣದಿಂದ ಕಲಬುರಗಿ ಜಿಲ್ಲೆಯ ಆರ್ಥಿಕ ಚಟುವಟಿಕೆಗಳಿಗೆ ವೇಗ ಪಡೆಯಲಿದೆ ಹಾಗು ಪ್ರಯಾಣಿಕರ ಸಮಯದ ಉಳಿತಾಯಕ್ಕೆ ಮತ್ತು ಸುರಕ್ಷತೆಗೆ ಅನುಕೂಲವಾಗಲಿದೆ.

ಸಭೆಯಲ್ಲಿ ಡಿಪಿಆರ್ ತಯಾರಿಸಲು ನಿರ್ದೇಶಿಸಲಾಗಿದ್ದು, ಶೀಘ್ರ ಅನುಷ್ಠಾನಕ್ಕೆ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ. ಇದರಿಂದ ಕಲಬುರಗಿ, ಆಳಂದ, ಸೇಡಂ, ಮಳಖೇಡ್ ಸೇರಿದಂತೆ ಹಲವು ನಗರಗಳಿಗೆ ಆರ್ಥಿಕ ಚಟುವಟಿಕೆ ಗರಿಗೆದರಲಿದೆ.

# ಕಾಂಗ್ರೆಸ್ ಕಾರ್ಯಕರ್ತರು ವೈ ಮನಸ್ಸು ಬಿಟ್ಟು ಪಕ್ಷದ ಸಂಘಟನೆಗೆ ಶ್ರಮಿಸಿ: ರಾಜಶೇಖರ್ ಪಾಟೀಲ



ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ: ಕಾಂಗ್ರೆಸ್ ಪಕ್ಷ ಸಮುದ್ರ ವಿದ್ದಂತೆ ತಮ್ಮ ವೈ ಮನಸುಗಳು ಬಿಟ್ಟು ಪಕ್ಷದ ಸಂಘಟನೆಗೆ ಶ್ರಮಿಸಿ ಎಂದು ಮಾಜಿ ಸಚಿವ ರಾಜಶೇಖರ್ ಪಾಟೀಲ್ ಹೇಳಿದರು. ಪಟ್ಟಣದ ಅ

ಅಚಲ ಕಲ್ಯಾಣ ಮಂಟಪದಲ್ಲಿ ಬ್ಲಾಕ್ ಕಾಂಗ್ರೆಸ್ ಆಯೋಜಿಸಿದ ವಲಯ ಮಟ್ಟದ ಕಾಂಗ್ರೆಸ್ ಕಾರ್ಯಕರ್ತರ ಸಭೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಹಾಲಿ ಶಾಸಕರು ಕ್ಷೇತ್ರದಲ್ಲಿ ಸುಳ್ಳು ಭರವಸೆಗಳು ನೀಡಿ ಅಭಿವೃದ್ಧಿಗೆ ಸ್ಪಂದಿಸುತ್ತಿಲ್ಲಾ ಕ್ಷೇತ್ರದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳು ಕಳಪೆ ಮಟ್ಟದಿಂದ ನಡೆಯುತ್ತಿವೆ ಮತ್ತು ಶಾಸಕರ ಕುಟುಂಬದವರೇ ಕೈಗೊಳ್ಳುತ್ತಿದ್ದಾರೆ ಎಂದು ಟೀಕಿಸಿದರು. ಕಾಂಗ್ರೆಸ್ ಪಕ್ಷ ದೀನ ದಲಿತರ ಉದ್ದಾರಕ್ಕಾಗಿ ಶ್ರಮಿಸುತ್ತಿದೆ ಹಾಗೂ ಕ್ಷೇತ್ರದ ದೀನ ದಲಿತರ ಮುಖಂಡರುಗಳಿಗೆ ವಿವಿಧ ಅಧಿಕಾರಿಗಳನ್ನು ಕೂಡ ನೀಡಿದ್ದೇವೆ ಎಂದರು. ಸರ್ಕಾರದ ಗ್ಯಾರಂಟಿ ಯೋಜನೆಗಳ ಜಾಗೃತಿಯನ್ನು ಪ್ರತಿಯೊಬ್ಬರ ಮನೆ ಮನೆಗೆ ತಲುಪಿಸಬೇಕು. ಗ್ಯಾರಂಟಿ ಯೋಜನೆಗಳ ಅನುಷ್ಠಾನ ಅಧ್ಯಕ್ಷರಿಗೆ ಮತ್ತು ಪದಾಧಿಕಾರಿಗಳಿಗೆ ತಿಳಿಸಿದರು. ಗ್ಯಾರಂಟಿ ಯೋಜನೆಗಳು ಕ್ಷೇತ್ರದಲ್ಲಿ ಚೆನ್ನಾಗಿ ಅನುಷ್ಠಾನ ಮಾಡದಿದ್ದರೆ ಪದಾಧಿಕಾರಿಗಳು ಬದಲಿಸಲಾಗುತ್ತದೆ ಎಂದು ರಾಜಶೇಖರ್ ಪಾಟೀಲ್ ಎಚ್ಚರಿಕೆ ನೀಡಿದರು. ವಿಧಾನಪರಿಷತ್ ಸದಸ್ಯ ಚಂದ್ರಶೇಖರ್ ಪಾಟೀಲ್ ಮಾತನಾಡಿ, ಚುನಾವಣೆ ಸಂದರ್ಭದಲ್ಲಿ ಸುಳ್ಳು ಭರವಸೆಯನ್ನು ನೀಡಿ ಅಧಿಕಾರಿಕ್ಕೆ ಬಂದ ಶಾಸಕ ಕಾರ್ಖಾನೆ ಮಾಲೀಕರೊಂದಿಗೆ ಒಳ ಒಪ್ಪಂದ ಮಾಡಿಕೊಂಡು ದ್ರೋಹ ಮಾಡಿದ್ದಾರೆ ಎಂದು ತಿಳಿಸಿದರು. ಡಿಸಿಸಿ ಬ್ಯಾಂಕನ ಉಪಾಧ್ಯಕ್ಷ ಅಭಿಷೇಕ್ ಪಾಟೀಲ್ ಮಾತನಾಡಿ, ಮುಂಬರುವ ದಿನಗಳಲ್ಲಿ ಮತ್ತೆ ರಾಜಶೇಖರ್ ಪಾಟೀಲರನ್ನು ಭಾರಿ ಬಹು ಮತದಿಂದ ಗೆಲ್ಲಿಸಲು ಕಾರ್ಯಕರ್ತರು ಶಕ್ತಿ ಮೀರಿ ಶ್ರಮಿಸಬೇಕು. ಈಗಿನಿಂದಲೇ ಪಕ್ಷ ಸಂಘಟನೆ ಮಾಡಬೇಕೆಂದು ಕರೆ ನೀಡಿದರು. ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ವೀರಣ್ಣ ಪಾಟೀಲ್, ಗ್ಯಾರಂಟಿ ಯೋಜನೆಯ ಅಧ್ಯಕ್ಷ ಅಪ್ಸರಮಿಯಾ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಓಂಕಾರ್ ತುಂಬಾ ಯುವ ಕಾಂಗ್ರೆಸ್ ಅಧ್ಯಕ್ಷ ಉಮೇಶ್ ಜಮಗಿ, ಚಿಟಗುಪ್ಪ ಪುರಸಭೆ ಮಾಜಿ ಅಧ್ಯಕ್ಷ ದಿಲೀಪಕುಮಾರ್ ಬಗ್ದಲಕರ್, ಉಪಾಧ್ಯಕ್ಷ ನಸೀರ್ ಖಾನ್, ಮುಜಾಫರ್ ಪಟೇಲ್, ಅಶೋಕ ಸ್ವಾಮಿ, ಗುಂಡು ರೆಡ್ಡಿ, ರಾಜದೀಪ್ ಜಾಬಾ, ಬಾಬಾ ಆರ್.ಸಿ.ಸಿ., ವಿಶಾಲ ಬೋರಳೆ, ಮನೋಜಕುಮಾರ್ ಶರ್ಮಾ, ರಮೇಶ ಪಾರಾ, ಸಿದ್ರಾಮ್ ವಾಘಮಾರೆ, ಮನೋಜಕುಮಾರ್ ಕೋಟೆಕ್ಕರ್, ಮಾಣಿಕ ಹಿಪರ್ಗಿ, ಸುಧಾಕರ್ ಸಂಗಮ, ವಿಷ್ಣುವರ್ಧನ್ ಬುದ್ಧ, ಲಕ್ಷ್ಮಣ ಬುಳ್ಳಾ, ರಮೇಶ ಡಾಕೂಳಗಿ, ಕಂಟೆಪ್ಪ ದಾನ , ಸುರೇಶ್ ಕುಂಬಾರ್, ಶೋಭಾ ಪಾಟೀಲ್, ಸುರೇಖಾ ಸಿಂಧೆ, ಲಲಿತಾಬಾಯಿ ಚವ್ಹಾಣ

ಸೇರಿದಂತೆ ಪಕ್ಷದ ಕಾರ್ಯಕರ್ತರು, ಮುಖಂಡರು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಪಕ್ಷದ ಸಂಘಟನೆ ಬಗ್ಗೆ ಕಾರ್ಯಕರ್ತರು ತಮ್ಮ ಅಭಿಪ್ರಾಯ ತಿಳಿಸಿದರು.

# ಹಜರತ್ ಬಡೇಸಾಹೇಬ್ ಉರುಸಿನಲ್ಲಿ ಶಾಸಕರು ಭಾಗಿ



• ಮಲ್ಲಮ್ಮ ನುಡಿ ವಾರ್ತೆ ರಾಯಚೂರು

ಡಿಸೆಂಬರ್ 29 (ಕರ್ನಾಟಕ ವಾರ್ತೆ): ರಾಯಚೂರು ಗ್ರಾಮೀಣ ಕ್ಷೇತ್ರ ವ್ಯಾಪ್ತಿಯ ಯರಗೇರಾ ಗ್ರಾಮದಲ್ಲಿ ಸರ್ವಧರ್ಮ ಭಾವೈಕ್ಯತೆಯ ಸಂಕೇತವಾದ ಶ್ರೀ ದರ್ಗಾ ಹಜರತ್ ಬಡೇಸಾಹೇಬ್ ಉರುಸಿನಲ್ಲಿ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧ್ಯಕ್ಷರು ಹಾಗೂ ಶಾಸಕರಾದ ಬಸನಗೌಡ ದದ್ದಲ್ ಅವರು ಭಾಗವಹಿಸಿ ಆಶೀರ್ವಾದ ಪಡೆದರು.

ಈ ಸಂಧರ್ಭದಲ್ಲಿ ಊರಿನ ಹಿರಿಯ ಮುಖಂಡರು, ಸುತ್ತಲಿನ ಗ್ರಾಮಗಳ ಮುಖಂಡರು, ಗ್ರಾಮ ಪಂಚಾಯತ್ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು, ಗ್ರಾಮಸ್ಥರು ಹಾಗೂ ಭಕ್ತಾಧಿಗಳು ಉಪಸ್ಥಿತರಿದ್ದರು.

# ಪ್ರತಿ ತಾಲುಕಿಗೂ ಮೆಕ್ಕೆಜೋಳ ಖರೀದಿ ಕೇಂದ್ರ ತೆರೆಯಬೇಕು: ಬಸವರಾಜ ಬೊಮ್ಮಾಯಿ



• ಮಲ್ಲಮ್ಮ ನುಡಿ ವಾರ್ತೆ ಹಾವೇರಿ:

ಮೆಕ್ಕೆಜೋಳ ಖರೀದಿ ವಿಚಾರದಲ್ಲಿ ರಾಜ್ಯ ಸರ್ಕಾರ ರೈತರ ಮೂಗಿಗೆ ತುಪ್ಪ ಹಚ್ಚುವ ಕೆಲಸ ಮಾಡಿ ರೈತರಿಗೆ ಮೋಸ ಮಾಡಿದೆ. ಉತ್ತರ ಕರ್ನಾಟಕದಲ್ಲಿ ಶೇ 80 ರಷ್ಟು ರೈತರು ಮೆಕ್ಕೆಜೋಳ ಬೆಳೆದಿದ್ದಾರೆ. ಪ್ರತಿ ತಾಲೂಕು ಕೇಂದ್ರದಲ್ಲಿ ಮೆಕ್ಕೆಜೋಳ ಖರೀದಿ ಕೇಂದ್ರ ತೆರೆಯಬೇಕು ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ ಬೊಮಾಯಿ ಆಗ್ರಹಿಸಿದರು.

ಹಾವೇರಿಯಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ 54 ಲಕ್ಷ ಮೆಟ್ರಿಕ್ ಟನ್ ಮೆಕ್ಕೆಜೋಳ ಬೆಳೆದಿದೆ. ಇವರು 10 ಲಕ್ಷ ಮೆಟ್ರಿಕ್ ಟನ್ ಖರೀದಿಸುವುದಾಗಿ ಹೇಳಿದ್ದರು. ಇದುವರೆಗೂ ಐವತ್ತು, ಆರವತ್ತು ಮೆಟ್ರಿಕ್ ಟನ್ ಖರೀದಿ ಮಾಡಿರಬೇಕು. ರಾಜ್ಯ ಸರ್ಕಾರ ಹಣ ಬಿಡುಗಡೆ ಮಾಡಿಲ್ಲ. ಏಜೆನ್ಸಿ ನಿಗದಿ ಮಾಡಿಲ್ಲ. ಸುಮ್ಮನೆ ಮೊಲ್ಯಾಸಿಸ್ ನವರಿಗೆ ಖರೀದಿಸುವಂತೆ ಹೇಳಿದರೆ ಆಗುವುದಿಲ್ಲ. ರಾಜ್ಯ ಸರ್ಕಾರ ಖರೀದಿ ಕೇಂದ್ರ ಆರಂಭಿಸಿದರೆ ರೈತರಿಗೆ ಅನುಕೂಲವಾಗುತ್ತದೆ. ಇಲ್ಲದಿದದ್ದರೆ ರೈತರಿಗೆ ಅನ್ಯಾಯವಾಗಲಿದೆ. ಸಿಎಂ ಹೇಳಿ ಒಂದು ತಿಂಗಳಾಯಿತು. ಇದುವರೆಗೂ ಖರೀದಿ ಕೇಂದ್ರ ತೆರೆದಿಲ್ಲ. ಸುಮಾರು 20 ಜಿಲ್ಲೆಗಳಲ್ಲಿ ಮೆಕ್ಕೆಜೋಳ ಬೆಳೆಯುವ ರೈತರನ್ನು ರಾಜ್ಯ ಸರ್ಕಾರ ನಿರ್ಲಕ್ಷ್ಯ ಮಾಡುತ್ತಿದೆ ಎಂದು ಆರೋಪಿಸಿದರು.

ನೋಂದಣಿಯಾದ ರೈತರು ಟ್ಯಾಕ್ಟರ್‌ನಲ್ಲಿ ತಂದು ನಿಲ್ಲಿಸಿದ್ದಾರೆ. ತೂಕ ಕಡಿಮೆಯಾಗುತ್ತಿದೆ. ರೈತರ ಹೊಲಗಳಲ್ಲಿ ಹಾಳಾಗುತ್ತಿದೆ. ಇಲ್ಲಿಂದ ಶಿಕಾರಿಪುರಕ್ಕೆ ತೆಗೆದುಕೊಂಡು ಹೋಗುವಂತೆ ಹೇಳುತ್ತಾರೆ. ಅಲ್ಲಿ ರಾತ್ರಿಯೆಲ್ಲಾ ರೈತರು ಕಾಯಬೇಕು. ರಾಜ್ಯ ಸರ್ಕಾರದ ರೈತ ವಿರೋಧಿ ನೀತಿಯಲ್ಲಿ ಇದು ಒಂದು ಎಂದು ಹೇಳಿದರು.

**ಸರ್ಕಾರ ಶಾಮೀಲು**

ರಾಜ್ಯದಲ್ಲಿನ ಕಾನೂನು ಸುವ್ಯವಸ್ಥೆ ಕುರಿತು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಕೆಟ್ಟು ಬಹಳ ದಿನ ಆಗಿದೆ. ಪ್ರತಿ ದಿನ ಲೂಟಿ, ದರೋಡೆ, ಕೊಲೆ ಸುಲಿಗೆ ನಡೆಯುತ್ತಿದೆ. ಮೈಸೂರಿನಲ್ಲಿ ಹಗಲಿನಲ್ಲಿಯೇ ದರೋಡೆಯಾಗಿದೆ. ದಪ್ಪ ಚರ್ಮದ ಸರ್ಕಾರ, ಕರ್ನಾಟಕದಲ್ಲಿಯೇ ಡ್ರಗ್ಸ್ ತಯಾರಿಸಿ ಇಡಿ ದೇಶಕ್ಕೆ ಸರಬರಾಜು ಮಾಡುವ ಫ್ಯಾಕ್ಟರಿಗಳೇ ರಾಜ್ಯದಲ್ಲಿ ಆರಂಭವಾಗಿವೆ ಎಂದರೆ ರಾಜ್ಯ ಸರ್ಕಾರವೇ ಶಾಮೀಲಾಗಿದೆ. ಮಹಾರಾಷ್ಟ್ರದವರು ಒಂದು ದಾಳಿ ಮಾಡಿದ್ದಾರೆ ಎಂದರೆ ಇವರು ಏನು ಕತ್ತೆ ಕಾಯುತ್ತಿದ್ದರಾ, ಯಾವ ಡಿಸಿಪಿ ವ್ಯಾಪ್ತಿಯಲ್ಲಿ ಬರುತ್ತದೆ. ಆ ಡಿಸಿಪಿಗಳನ್ನು ಸಸ್ಪೆಂಡ್ ಮಾಡಬೇಕು. ಇದಕ್ಕೆ ನೇರವಾಗಿ ಗೃಹ ಸಚಿವರು ಮತ್ತು ಗೃಹ ಇಲಾಖೆ ಹೊಣೆ ಎಂದು ಆರೋಪಿಸಿದರು.

ಅನ್ನಭಾಗ್ಯದಲ್ಲೂ ಲೂಟಿ

ಅನ್ನಭಾಗ್ಯ ಅಕ್ಕಿ ಕಳ್ಳಸಾಗಾಣಿಕೆ ಕುರಿತು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಹಾವೇರಿಯಲ್ಲಿ ಅನ್ನಭಾಗ್ಯದ ಅಕ್ಕಿ ಅಕ್ರಮವಾಗಿ ಮಾರಾಟವಾಗುತ್ತಿರುವ ಬಗ್ಗೆ ಜನರೇ ಹಿಡಿದುಕೊಟ್ಟರೂ ಅಧಿಕಾರಿಗಳು ಬಂದಿಲ್ಲ. ಬಡವರಿಗೆ ಅಕ್ಕಿ ಕೊಡುವಲ್ಲಿಯೂ ರೇಷನ್ ಕಾರ್ಡ್‌ಗೆ ಪರ್ಸಂಟೇಜ್ ಫಿಕ್ಸ್ ಮಾಡಿದ್ದಾರೆ. ದೊಡ್ಡ ಪ್ರಮಾಣದಲ್ಲಿ ಹೊರ ರಾಜ್ಯ ಮತ್ತು ಹೊಟೇಲ್‌ಗಳಿಗೆ ಹೋಗುತ್ತಿದೆ. ಅನ್ನಭಾಗ್ಯ ಅಕ್ಕಿಯ ಲೂಟಿಯಲ್ಲಿ ಅಧಿಕಾರಿಗಳ ಪಾಲಿದೆ ಎಂದು ಆರೋಪಿಸಿದರು.

# ಅಕ್ರಮ ಮದ್ಯ ಮಾರಾಟದ ವಿರುದ್ಧ ಕಟ್ಟುನಿಟ್ಟಿನ ಕ್ರಮ




• ಮಲ್ಲಮ್ಮ ನುಡಿ ವಾರ್ತೆ ಲಿಂಗಸಗೂರು.

ತಾಲೂಕಿನ ವಿವಿಧ ಗ್ರಾಮಗಳು ಹಾಗೂ ನಗರ ಪ್ರದೇಶಗಳಲ್ಲಿ ಅಕ್ರಮವಾಗಿ ಮದ್ಯ ಮಾರಾಟ ನಡೆಯುತ್ತಿದೆ.ಸರಕಾರದ ನಿಯಮಾವಳಿಗಳನ್ನು ಉಲ್ಲಂಘಿಸಿ, ಪರವಾನಗಿ ಇಲ್ಲದೆ ನಡೆಯುತ್ತಿರುವ ಈ ಅಕ್ರಮ ಮದ್ಯ ಮಾರಾಟ ಸಾಮಾಜಿಕ ಅಶಾಂತಿ, ಕಾನೂನು ಸುವ್ಯವಸ್ಥೆಗೆ ಧಕ್ಕೆ, ಕುಟುಂಬ ಕಲಹ, ಅಪಘಾತಗಳು ಹಾಗೂ ಯುವಜನತೆ ದುರ್ನಡತೆಗೆ ಒಳಗಾಗುವ ಪರಿಸ್ಥಿತಿ ನಿರ್ಮಾಣವಾಗಿದ್ದು ಕೂಡಲೇ ಅಕ್ರಮ ಮದ್ಯ ಮಾರಾಟ ತಡೆಗಟ್ಟುವಂತೆ ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಸೇನೆ (ರಿ ) ಅವರು ಅಧ್ಯಕ್ಷ ಜಿಲಾನಿ ಪಾಷಾ ಅವರ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿ ಅಬಕಾರಿ ಉಪ ಆಯುಕ್ತರಿಗೆ ಬರೆದ ಮನವಿ ಪತ್ರವನ್ನು ಸಹಾಯಕ ಆಯುಕ್ತರಿಗೆ ಸಲ್ಲಿಸಿ ಕ್ರಮಕ್ಕೆ ಒತ್ತಾಯಿಸಿದರು.

ಅಕ್ರಮ ಮದ್ಯ ಮಾರಾಟವನ್ನು ತಕ್ಷಣವೇ ತಡೆಗಟ್ಟಬೇಕು ಹಲವು ಗ್ರಾಮೀಣ ಪ್ರದೇಶಗಳಲ್ಲಿ ಶಾಲಾ ಕಾಲೇಜುಗಳ ಸಮೀಪ, ಉದಾಹರಣೆಗೆ ಈಚನಾಳ ಕ್ರಾಸ್ ನಲ್ಲಿ ಪಿಯುಸಿ ಮಹಿಳಾ ಕಾಲೇಜ್ ಇದ್ದು ಕಾಲೇಜಿನ ಮುಂದುಗಡೆ ಮಧ್ಯ ಮಾರಾಟ ಮಾಡಲಾಗುತ್ತಿದ್ದು ಇದರಿಂದಾಗಿ ಪಿಯುಸಿ ಓದುವ ವಿದ್ಯಾರ್ಥಿನಿಯರಿಗೆ ಕೆಲವು ಮಧ್ಯೆ ವ್ಯಸನಿಗಳು ಕುಡಿದ ಆಮಲಿನಲ್ಲಿ ಅರೆಬರೆಯಾಗಿ ರಸ್ತೆಗೆ ಬೀಳುತ್ತಿದ್ದು ಮತ್ತು ಅವಾಚ್ಯ ಶಬ್ದಗಳಿಂದ ಮಾತನಾಡುತ್ತಿರುವದನ್ನು ಕಂಡು ವಿದ್ಯಾರ್ಥಿನಿಯರಿಗೆ ಮುಜುಗರವಾಗುತ್ತಿದ್ದು ಅದೇ ರೀತಿ ಈಚನಾಳ ಕ್ರಾಸ್ ನಲ್ಲಿ ಮಹಿಳಾ ವಸತಿ ನಿಲಯವಿದ್ದು ಎಲ್ಲ ವಿದ್ಯಾರ್ಥಿನಿಯರಿಗೆ ತುಂಬ ತೊಂದರೆ ಆಗಿದೆ.

ಹಾಗೂ ಗ್ರಾಮದಲ್ಲಿ ಅಕ್ರಮವಾಗಿ ಗ್ರಾಮ ಪಂಚಾಯಿತಿಗಳಲ್ಲಿ ಕುಡುಕರ ಅವಳಿ ಮಿತಿಮೀರಿದೆ ಎಂದು ಈಗಾಗಲೇ ಪತ್ರಿಕೆಯಲ್ಲಿ ವರದಿಯಾಗಿದ್ದು ವಸತಿ ಪ್ರದೇಶಗಳು ಹಾಗೂ ಗ್ರಾಮೀಣ ಭಾಗಗಳಲ್ಲಿ ಬೆಳಿಗ್ಗೆಯೇ ಅಕ್ರಮ ಮದ್ಯ ಮಾರಾಟ ಎಗ್ಗಿಲ್ಲದೆ ನಡೆಯುತ್ತಿದೆ. ಇದರಿಂದ ಮಹಿಳೆಯರು, ಮಕ್ಕಳು ಮತ್ತು ಹಿರಿಯ ನಾಗರಿಕರು ತೀವ್ರವಾಗಿ ಸಂಕಷ್ಟ ಅನುಭವಿಸುತ್ತಿದ್ದಾರೆ. ಇಷ್ಟಾದರೂ ಸ್ಥಳೀಯ ಅಬಕಾರಿ ಉಪ ನಿರೀಕ್ಷಕರು ಇದಕ್ಕೂ ತಮಗೂ ಯಾವುದೇ ಸಂಬಂಧವಿಲ್ಲದಂತೆ ಕಣ್ಮುಚ್ಚಿಕೊಂಡು ಕುಳಿತ್ತಿದ್ದಾರೆ.

ಕಾರಣ ಅಕ್ರಮ ಮದ್ಯ ಮಾರಾಟದ ಕೇಂದ್ರಗಳ ಮೇಲೆ ತಕ್ಷಣ ದಾಳಿ ನಡೆಸಿ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು. ಸಂಬಂಧಪಟ್ಟ ಅಧಿಕಾರಿಗಳ ಮೂಲಕ ನಿರಂತರ ನಿಗಾವಹಿಸಿ, ಮರುಕಳಿಸದಂತೆ ಕ್ರಮ ಜರುಗಿಸಬೇಕು. ಅಕ್ರಮ ಮದ್ಯ ಸಾಗಣೆ ಮತ್ತು ಸಂಗ್ರಹಣೆಗೆ ಸಹಕಾರ ನೀಡುತ್ತಿರುವ ಅಧಿಕಾರಿ ಹಾಗೂ ಸಿಬ್ಬಂದಿಗಳ ಮೇಲೆ ಸೂಕ್ತ ಕಾನೂನು ಕ್ರಮ ಜರುಗಿಸಬೇಕು. ಇಲ್ಲವಾದಲ್ಲಿ ತಮ್ಮ ಕಾರ್ಯಾಲಯದ ಮುಂದೆ ಪ್ರತಿಭಟನೆ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಈ ಮನವಿ ಮೂಲಕ ಅವರು ಎಚ್ಚರಿಸಿದರು.

ಈ ಸಂದರ್ಭದಲ್ಲಿ ಕರವೇ ಮುಖಂಡರಾದ ರವಿಕುಮಾರ್ ಬರಗುಡಿ,ಅಜೀಜ್ ಪಾಷಾ, ಅಲ್ಲಾವುದ್ದೀನ್, ಮೋಷಿನ್ ಖಾನ್, ತಿಮ್ಮನಗೌಡ,ಬಸನಗೌಡ,ಬಾಬು ಹಟ್ಟಿ,ಮಲ್ಲಣ್ಣ,ಹನೀಪು,ರಹಿಮಾನ್, ಪ್ರಭುಗೌಡ,ಪರಮಣ್ಣ, ಪ್ರಭು ಕಾಳಾಪುರ್, ಮಲ್ಲಣ್ಣ, ರಾಜು, ನಾಗರಾಜ್, ಕಾಸಿಂಸಾಬ್, ರಮೇಶ್ ನಾಯಕ್, ಅಮರೇಶ್ ನಾಯಕ್, ಕಾಸಿಂಸಾಬ್ , ವೀರೇಶ್ ಹಿರೇಮಠ್, ರಮೇಶ್ ನಾಯಕ್ ಚರಂತಿ ಹಲವು ಮುಖಂಡರು ಪಾಲ್ಗೊಂಡಿದ್ದರು.

# ಮಹಾಲಕ್ಷ್ಮಿ ದೇವಿಯನ್ನು ಒಲಿಸಿಕೊಳ್ಳುವುದರಿಂದ ಸಂಪತ್ತು ವೃದ್ಧಿ

ಪೀಣ್ಯದಾಸರಹಳ್ಳಿ:'ಗೊರವನಹಳ್ಳಿ ಮಹಾಲಕ್ಷ್ಮಿ ದೇವಿಯನ್ನು ಒಲಿಸಿಕೊಳ್ಳುವುದರಿಂದ ಸಂಪತ್ತು, ಧನ–ಧಾನ್ಯಗಳು ವೃದ್ಧಿಯಾಗುವುದಲ್ಲದೆ ಸುಖ ಸಂತೋಷ ಮನೆಯಲ್ಲಿ ಮತ್ತು ಮನದಲ್ಲಿ ನೆಲೆಸುತ್ತದೆ. ಸಕಲ ಭಾಗ್ಯವಿದಾತೆ ಗೊರವನಹಳ್ಳಿ ಮಹಾಲಕ್ಷ್ಮಿ ಸಮೃದ್ಧಿ ಮತ್ತು ಸಂಪತ್ತಿನ ದೇವತೆಯಾಗಿದ್ದು ಅಮ್ಮನ ಕ್ಷೇತ್ರಕ್ಕೆ ಹೋಗಲು ಎಲ್ಲರಿಗೂ ಸಾಧ್ಯವಾಗುವುದಿಲ್ಲ. ಹಾಗಾಗಿ ಹೆಗ್ಗನಹಳಿಗೆ ತಾಯಿ ಗೊರವನಹಳ್ಳಿ ಮಹಾಲಕ್ಷ್ಮಿಯನ್ನು ಬರಮಾಡಿಕೊಂಡು ಭಕ್ತರಿಗೆ ದೇವಿಯ ದರ್ಶನಕ್ಕೆ ವ್ಯವಸ್ಥೆ ಮಾಡಿರುವುದು ಖುಷಿಯ ವಿಚಾರ', ಎಂದು ರಾಜಕೀಯ ಮುಖಂಡರು ಹಾಗೂ ಜಿಬಿಎ ಚುನಾವಣಾ ಆಕಾಂಕ್ಷಿ ಅಭ್ಯರ್ಥಿ ಆಶಾ ಬೋರೇಗೌಡ ಹೇಳಿದರು.



ಹೆಗ್ಗನಹಳ್ಳಿಯ ಕರೀಂ ಸಾಬ್ ಲೇಔಟ್ ಮುಖ್ಯರಸ್ತೆಯ ಶ್ರೀಗಂಧನಗರದಲ್ಲಿ ಕಾಮಧೇನು ಗೆಳೆಯರ ಬಳಗದ ವತಿಯಿಂದ ಹಮ್ಮಿಕೊಂಡಿದ್ದ ಗೊರವನಹಳ್ಳಿ ಮಹಾಲಕ್ಷ್ಮಿದೇವಿಯ ಕಾರ್ಯಕ್ರಮದಲ್ಲಿ ಭಾಗವಹಿಸಿ ದೇವಿಯ ಆಶೀರ್ವಾದ ಪಡೆದು ಅವರು ಮಾತನಾಡಿದರು. ಇದೇ ವೇಳೆ ಕಾಮಧೇನು ಗೆಳೆಯರ ಬಳಗದ ವತಿಯಿಂದ ಆಶಾ ಬೋರೇಗೌಡರವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಅಪಾರ ಸಂಖ್ಯೆಯಲ್ಲಿ ಭಕ್ತರು ಆಗಮಿಸಿ ಗೊರವನಹಳ್ಳಿ ಮಹಾಲಕ್ಷ್ಮಿದೇವಿಯ ದರ್ಶನ ಪಡೆದು ಪುನೀತರಾದರು. ಕಾರ್ಯಕ್ರಮದ ಪ್ರಯುಕ್ತ ಸಾರ್ವಜನಿಕರಿಗೆ ಪ್ರಸಾದ ವಿನಿಯೋಗ ಹಾಗೂ ಅನ್ನಸಂತರ್ಪಣೆ ಹಮ್ಮಿಕೊಳ್ಳಲಾಗಿತ್ತು. ಈ ಬಾರಿಯ ದೇವಾಲಯದಲ್ಲಿ ವಿಶೇಷ ಹೂವಿನ ಅಲಂಕಾರ ಭಕ್ತರ ಕಣ್ಮನ ಸೆಳೆಯುವಂತಿತ್ತು. ಭಕ್ತರು ದೇವಿಯ ದರ್ಶನ ಪಡೆದು ತಮ್ಮ ಇಷ್ಟಾರ್ಥಗಳನ್ನು ಬೇಡಿಕೊಂಡು ಪುನೀತರಾದರು. ಶ್ರೀ ಮಹಾಲಕ್ಷ್ಮಿ ದೇವಿ ದರ್ಶನ ಪಡೆಯಲು ಜನಸಾಗರವೇ ಹರಿದು ಬಂದಿತ್ತು.

ಈ ಸಂದರ್ಭದಲ್ಲಿ ಅಧಿಪತಿ ವಿಜಯ್, ಪುನೀತ್ ಕುಮಾರ್, ಟೆಂಟ್ ಹೌಸ್ ರಾಘವೇಂದ್ರ ಶೆಟ್ಟಿ, ರವಿಕುಮಾರ್, ಅರುಣ್ ಕುಮಾರ್, ಕಾಳೇಗೌಡ್ರು, ಭರತ್ ರೆಡ್ಡಿ, ರಾಘು, ಅಶೋಕ್, ಯಶವಂತ್ ಕುಮಾರ್, ಸುದೀಪ್, ರಾಕೇಶ್, ತಪಸ್ವಿ, ಕಿರಣ್ ಪೈ, ರಾಮ್ ಭಾಯ್, ಸಾಗರ್, ಶಶಿ ಸೇರಿದಂತೆ ಹಲವಾರು ಮುಖಂಡರು, ಸ್ಥಳೀಯರು ಉಪಸ್ಥಿತರಿದ್ದರು.

# 877' ಹುದ್ದೆಗಳ ನೇಮಕಾತಿಗೆ ಸರ್ಕಾರ ಒಪ್ಪಿಗೆ

ಮಲ್ಲಮ್ಮ ನುಡಿ ವಾರ್ತೆ ಬೀದರ್: ರಾಜ್ಯದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ '877' ಹುದ್ದೆಗಳ ನೇಮಕಾತಿಗೆ ಸರ್ಕಾರ ಒಪ್ಪಿಗೆ ನೀಡಿದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕಲ್ಯಾಣ ಕರ್ನಾಟಕ ವೃಂದದಲ್ಲಿ ಖಾಲಿ ಇದ್ದ ಗ್ರೂಪ್ "ಬಿ" ಮತ್ತು ಗ್ರೂಪ್ "ಸಿ" ವಿವಿಧ ವೃಂದದ 877 ಅರವೈದ್ಯಕೀಯ ಹುದ್ದೆಗಳನ್ನು ನೇರ ನೇಮಕಾತಿ ಮುಖಾಂತರ ಭರ್ತಿ ಮಾಡುವ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆ ಮತ್ತು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಗಳೊಂದಿಗೆ ಸಮಾಲೋಚಿಸಿ ,ಅಭಿಪ್ರಾಯ ಪಡೆದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಕಲ್ಯಾಣ ಕರ್ನಾಟಕ ವೃಂದದಲ್ಲಿ ಖಾಲಿಯಿರುವ ವಿವಿಧ ವೃಂದದ 877 ಅರೆ ವೈದ್ಯಕೀಯ ಹುದ್ದೆಗಳನ್ನು ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ನೇರ ನೇಮಕಾತಿ ಮಾಡುವುದಕ್ಕೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಆಯುಕ್ತರಿಗೆ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಂಗಳೂರು ಇವರು ದಿನಾಂಕ:04–12–2025 ರ ಪತ್ರದಲ್ಲಿ ಅನುಮತಿ ನೀಡಿದ್ದಾರೆ.

# ಅರಸು ವರ್ಸಸ ರಾಮಯ್ಯ ಯಾರು ಇವರೊಳಗೆ?





ಮುಖ್ಯಮಂತ್ರಿ ಸಿದ್ದರಾಮಯ್ಯನವರಂತೆ ದೇವರಾಜ ಅರಸು ಕೂಡಾ ಸಾಮಾಜಿಕ ಕ್ರಾಂತಿಯ ಹರಿಕಾರರಾಗಿದ್ದರು. ಆದರೆ ಆವರೆಂದೂ ಒಬ್ಬ ದಯಾಮಯಿ ಆಡಳಿತಗಾರನಿಗೆ ಅಗತ್ಯವಾದ ಸೂಕ್ಷ್ಮಗ್ರಹಿಕೆ ಮತ್ತು ಎಚ್ಚರವನ್ನಾಗಲೀ ಅಂತಃಕರಣವನ್ನಾಗಲೀ ಕರುಣೆಯ ಒಳಗಣ್ಣನ್ನಾಗಲೀ ಕಳೆದುಕೊಂಡಿರಲಿಲ್ಲ. ಒಂದೆರಡು ಉಹಾಹರಣೆಗಳು:ಕಳೆದ ಹತ್ತು ತಿಂಗಳಿಂದ ಬೆಂಗಳೂರಿನಲ್ಲಿ 120 ಪೊಲೀಸ್ ಸಿಬಂದಿಯನ್ನು ಅಮಾನತು ಮಾಡಲಾಗಿದೆ. ಅದರಲ್ಲಿ ಬಹುತೇಕರು ಗಂಭೀರ ಸ್ವರೂಪದ ಕ್ರಿಮಿನಲ್ ಕೃತ್ಯಗಳಲ್ಲಿ ಭಾಗಿಯಾಗಿದ್ದಾರೆ. ಇವರೆಲ್ಲಾ ನಾಗರೀಕ ಸಮಾಜಕ್ಕೆ ಕಂಟಕಪ್ರಾಯರು. ಅವರ ವಿರುದ್ಧ ಕ್ರಿಮಿನಲ್ ಪ್ರಕರಣಗಳನ್ನು ದಾಖಲಿಸಬೇಕಿತ್ತು. ಅಥವಾ ಆ ನಿಟ್ಟಿನಲ್ಲಿ ಪರಿಶೀಲಿಸಬಹುದಾಗಿತ್ತ. ಇದೀಗ ಬೆಂಗಳೂರಿನ ಹೊರವಲಯದ ಕೆಲವು ಪೊಲೀಸ್ ಠಾಣೆಗಳ ವ್ಯಾಪ್ತಿಗಳಲ್ಲಿ ಬೃಹತ್ ಡ್ರಗ್ಸ್ ಜಾಲಗಳನ್ನು ಹೊರ ರಾಜ್ಯದ ಪೊಲೀಸರು ಪತ್ತೆ ಹಚ್ಚಿದ್ದಾರೆ. ನಮ್ಮ ಪೊಲೀಸ್ ವ್ಯವಸ್ಥೆ ಕುಸಿದು ಬಿದ್ದಿದೆ ಎನ್ನುವುದಕ್ಕೆ ಇದೊಂದು ನಿದರ್ಶನ. ಇದು ನಾಗರೀಕ ಸಮಾಜದಲ್ಲಿ ಅಭದ್ರತೆಯನ್ನು ಮೂಡಿಸುವ ಬೆಳವಣಿಗೆ ಮತ್ತು ಅರಾಜಕತೆ–ಯ ಲಕ್ಷಣ. ದೇವರಾಜ ಅರಸು ಇಂತಹದ್ದನ್ನು ಮುಂಚಿತವಾಗಿ ಗ್ರಹಿಸಿ ಸಂಬಂಧಪಟ್ಟವರನ್ನು ಎಚ್ಚರಿಸುತ್ತಿದ್ದರು. ಅವರು ಒಮ್ಮೆ "ಪೊಲೀಸ್ ಠಾಣೆಯಲ್ಲಿನ ಹೀನಕೃತ್ಯಗಳಿಗೆ ಉನ್ನತ ಅಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡಬೇಕು" ಎಂದು ಗ್ರಹ ಇಲಾಖೆಗೆ ಗುಪ್ತ ಸೂಚನೆಯನ್ನು ಕಳುಹಿಸಿದ್ದರು. ಈ ಸುದ್ದಿ "ಪ್ರಜಾವಾಣಿ 50 ವರ್ಷಗಳ ಹಿಂದೆ" ವಿಭಾಗದಲ್ಲಿ ಪ್ರಕಟವಾಗಿದೆ. ಸುಮಾರು ಎಂಟು ದಿನಗಳ ಹಿಂದೆ ಬೆಂಗಳೂರಿನ ಕೋಗಿಲು ಬಳಿ ಅನೇಕ ಮನೆಗಳನ್ನು ಮತ್ತು ಗುಡಿಸಲುಗಳನ್ನು ಜೆಸಿಬಿ ಯಂತ್ರಗಳಿಂದ ನೆಲಸಮ ಮಾಡಲಾಯಿತು. ಗರ್ಭಿಣಿಯರು ,ಬಾಣಂತಿಯರು, ಮಕ್ಕಳು ಮತ್ತು ವೃದ್ದರು ಹಾಗೂ ರೋಗಿಗಳು ಹೆಪ್ಪುಗಟ್ಟಿದ ಚಳಿಯಲ್ಲಿ ಬಟಾಬಯಲಿನಲ್ಲಿ ಗೋಳಾಡುತ್ತಿದ್ದ ದೃಶ್ಯ ಟಿವಿಗಳಲ್ಲಿ ಪ್ರಸಾರವಾಗಿತ್ತು. ನಮ್ಮ ಅಧಿಕಾರಸ್ಥರು ಕಣ್ಣೆತ್ತಿಯೂ ಆ ಕಡೆ ನೋಡಲಿಲ್ಲ. ನಮ್ಮ ರಾಜ್ಯದವರೋ ವಲಸಿಗರೋ ಅನ್ನುವುದಕ್ಕಿಂತ ಅವರೂ ನಮ್ಮಂತೆಯೇ ಮನುಷ್ಯರೂ ಎನ್ನುವುದು ಮುಖ್ಯವಾಗಬೇಕಿತ್ತು. ಕೇರಳ ಮುಖ್ಯಮಂತ್ರಿ ಹೇಳಿಕೆ ನಂತರ ಎಲ್ಲರೂ ಎಚ್ಚೆತ್ತು ಕೊಂಡಿ–ದ್ದಾರೆ. ಎಲ್ಲರಿಗೂ ಅದೇ ಒಂದು ದೊಡ್ಡ ಸಂಗತಿಯಾಗಿದೆ. ಅವರಿಗೆ ಪರ್ಯಾಯ ಪುನರ್ ವಸತಿ ಕಲ್ಪಿಸುವುದಾಗಿ ಅಂ ಸಿದ್ದರಾಮಯ್ಯ ಪ್ರಕಟಿಸಿದ್ದಾರೆ. ದೇವರಾಜ ಅರಸು ಏನು ಮಾಡುತ್ತಿದ್ದರು.? ಮುಂಚಿತವಾಗಿ ಪುನರ್ ವಸತಿ ಕಲ್ಪಿಸುತ್ತಿದ್ದರು. ಆ ನಂತರವೇ ಗುಡಿಸಲುಗಳನ್ನು ತೆರವುಗೊಳಿಸುತ್ತಿದ್ದರು..!

/- ರುದ್ರಪ್ಪ,
ಹಿರಿಯ ಪತ್ರಕರ್ತರು,
ಬೆಂಗಳೂರು

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.

PRGI NO. 120927
(RNINO:KARKAN/2011/48371)